ಉಪೋದ್ಘಾತ.

ಅಗಸ್ತ್ಯಮಹಾಕವಿಯು ಸಂಸ್ಕೃತದಲ್ಲಿ ವಿರಚಿಸಿದ ಬಾಲಭಾರತದ
ಸರ್ಗಗಳನ್ನು ಕನ್ನಡ ಪದ್ಯಗಳಲ್ಲಿ ಪರಿವರ್ತಿಸಿ, ಕನ್ನಡಿಗರಿಗೆ ಉಪ
ಗಿಸುವಂತೆ ಪ್ರಚುರಪಡಿಸಬೇಕೆಂದು ಗ್ರಂಥಮಾಲೆಯ ಸಂಪಾದಕರ
ಮ|| ಬಿ. ಸುಬ್ಬರಾವು B. A.ಯವರಲ್ಲಿಗೆ ಕಳುಹಿದೆನು. ಅವರು
ಮಾಡಿ ಇದನ್ನು ತಮ್ಮ ಸಂಚಿಕೆಗಳಲ್ಲಿ ಮುದ್ರಿಸಲು ಅವಕಾಶಕೊಟ್ಟ
ಕಾರಕ್ಕಾಗಿ ತುಂಬಾ ಕೃತಜ್ಞನಾಗಿರುವೆನು.

ಘನವನ್ನು ಹೊಂದಿದ ಮೈಸೂರು ಶ್ರೀಮನ್ಮಹಾರಾಜಾ ಸರ್ಕಾರ
ು ಈ ಪುಸ್ತಕವನ್ನು ಪಾಠಶಾಲೆಗಳ ಬಹುಮಾನಪುಸ್ತಕವನ್ನಾಗಿ
ಯೋಗಿಸಲು ಅನುಗ್ರಹಿಸಿ ಪ್ರೋತ್ಸಾಹಪಡಿಸಿದ್ದರಿಂದ ನನ್ನಂತಹ
ಕರ್ತರು ನಿರಾಶರಾಗದೆ ಗ್ರಂಥಲೇಖನದಲ್ಲಿ ಆದರವನ್ನು ತೋರಿಸಲು
ಾಶ ಸಿಕ್ಕಿತೆಂದು ಸಂತೋಷಿಸುವೆನು. ಇದರಲ್ಲಿ ಅಕ್ಷರ ಸಂಯೋ
ಕೆಲವು ದೋಷಗಳಿದ್ದುದರಿಂದ ಶುದ್ಧಪತ್ರದಲ್ಲಿ ಅವುಗಳನ್ನು ತಿದ್ದಿ
ನು. ಮತ್ತೇನಾದರೂ ದೋಷಗಳು ಕಂಡುಬಂದಲ್ಲಿ ವಾಚಕರು ದಯ
ಿ ತಿಳಿಸಿದರೆ ಕೃತಜ್ಞತೆಯಿಂದ ಅಂತವುಗಳನ್ನು ಸ್ವೀಕರಿಸುವೆನು.

15—12—09,
ಮಾಗಡಿ.

ಕೆ. ರಾಮಸ್ವಾಮಯ್ಯಂಗಾರ್.

ಬಾಲಭಾರತದ ಶುದ್ಧಿಪತ್ರಂ

ಪುಟ	ಪದ್ಯ	ಅಶುದ್ಧ	ಶುದ್ಧ
2	4	ಕಳಿಗರೆಯುಳೆ	ಕಳಿಗಳೆರೆಯುಂ
,,	6	ತವಿಸ	ತವಿಪ
3	10	ವೂಂತು	ವಾಂತು
4	13	ಚಲು	ಚೆಲು
7	24	ಕ್ರಮದಿಂದಿಂ	ಕ್ರಮದಿಂ
10	37	ದಶೆ	ದಶೆ
14	52	ಗೆಯ್ದಿತ್ತಪಸು	ಗೆಯ್ದಿತ್ತವೆಸು
16	61	ದೊಳಗಹರು	ಕೊಳಗಹರು
17	67	ಧಿಶಾ	ದಿಶಾ
21	1	ಕಡೆಯುತೆ	ತಡೆಯುತೆ
,,	3	ಧರ್ಮ್ಮ	ಧರ್ಮ
22	5	ಪೊರೆದತಾ	ವೊರೆದತಾ
,,	6	ಕಡೆಯು	ಪಡೆಯು
24	16	ನಪಾಲ	ನರಪಾಲ
26	21	ಲೇಸಿನೀಂ	ಲೇಸಿನಿಃ
28	32	ನರ್ತಿ	ನಳ್ತಿ
30	37	ಬೊಧಿಸಿ	ಬೋಧಿಸಿ
31	42	ಕೇಳುದು	ಕೇಳ್ವುದು
,,	43	ತಡೆದ	ಪಡೆದ
,,	44	ಯಾಡಂ	ಯೊಡಂ
34	53	ನಾಯ್ಗಳಾ	ನಾಯ್ಗಳಂ
35	59	ಸಿಂದೆ	ನೆಂದೆ
37	66	ಸೊಗೆ	ಸೊಗ
38	68	ಪರಿಕಿದೆ	ಪರಿಕಿಪೆ
40	76	ತಪ್ಪುದು	ತಪ್ಪದು
,,	79	ಮುಗ್ನ	ಮುನ್ನ
42	87	ತಾರಿಯುಲಿ	ತಾರೆಯುಲ್ಲಿ
,,	,,	ಕೆಳೆ	ಕಳೆ
43	90	ತಾ	ತ್ರಾ
,,	,,	ಪತ್ತು	ಪೆತ್ತು

ಪುಟ	ಪದ್ಯ	ಅಶುದ್ಧ	ಶುದ್ಧ
44	93	ಶೆಳೆವ	ಸೆಳೆವ
44	94	ನಭ್ಯಾಸಿಸಿ	ನಭ್ಯಸಿಸಿ
,,	,,	ಪೂಗಳ್ವ	ಪೊಗಳ್ವ
,,	95	ಗಳೆ	ಗಳ್ಗೆ
45	99	ನೊದವಿಸು	ನೊದವಿಸುತೆ
.,	,,	ದೆನಿಪರು	ರೆನಿಪರು
,,	180	ದಾಗ್ನೆಯಾ	ಪಾಗ್ನೇಯಾ
,,	101	ಲಾಂತೆ	ಲಾತೆಂ
46	,,	ಸುರಭಿಯುಂ	ಸುರಭಿಯಿಂ
,,	103	ಶಿಯ್ಯೆ	ಶಯ್ಯೆ
47	107	ಸಂತ್ತೈಸಿದ	ಸತ್ತೈಸಿದು
,,	,,	ಯೆಡೆ	ಯಡಿ
,,	108	ಇನ್ನಿರನು	ಇನ್ನಿರೆನು
,,	,,	ಚರಣು	ಚಣ
48	109	ಸುಹಿವಿತ	ಸುವಿಹಿತ
50	4	ಸಳೆಯುತೆ	ಕಳೆಯುತೆ
,,	5	ತೆರಳಿಯೆ	ಕೆರಳಿಯೆ
51	11	ದೀಂಪೆಲು	ದೀಂಟಲು
53	18	ತಟನೀ	ತಟಿನೀ
56	31	ಕಳಸ	ಕಳಶ
57	35	ಗೆಯ್ದುದ	ಗೆಯ್ದುದ
58	36	ನೆಂದನು	ನೊಂದನು
59	40	ಪತಿಯುಂ	ಪತಿಯುಂ
60	44	ಅಲ್ಲಗೆ	ಅಲ್ಲಿಗೆ
,,	45	ಸಭೆಕರ್	ಸಭಿಕರ್
61	49	ರಲಗಿ	ರಲಗಿಂ
,,	51	ಯೆನಿಸಿದು	ಯೆನಿಸದು
64	60	ಧರಿಣಿ	ಧಾರಿಣಿ
71	2	ಪುರಕೆ	ಪುರಕ್ಕೆ
,,	3	ಚಿತೆ	ಚಿಂತೆ
72	4	ನೆಮುಗೆ	ನೆವಗೆ
,,	8	ಪಂಚಿ	ಪಂಚ

ಪುಟ	ಪದ್ಯ	ಅಶುದ್ಧ	ಶುದ್ಧ
73	8	ರವದೊಳ	ರವದೊಳು
,,	10	ನೆಯ್ದಿ	ವೆಯ್ದಿ
74	15	ಹಿಡಂಬು	ಹಿಡಿಂಬ
75	19	ಮರ[illegible]ು	ದುರುಳ
76	23	ತಿಳಿದ	ಪಿಳಿದ
77	25	ಯೊಳಿರ್ಕೆ	ಯುಳಿರ್ಕೆ
79	35	ಪುರ್ತ	ಪುತ್ರ
80	37	ಎಂದು	ಎಂದ
,,	38	ಸೊದರ	ಸೋದರ
81	43	ಧನುಜ	ದನುಜ
82	46	ಮಂದೆ	ಮುಂದೆ
83	51	ವಜ್ರತಿಂದ	ವಜ್ರದಿಂದ
84	52	ಕೆಡದ	ಕೆಡೆದ
87	3	ಮಗುಟ	ಮಡುಟ
88	7	ಸುದರೀ	ಸುದತೀ
,,	,,	ಪುರುಷ	ಪೂರುಷ
89	8	ವಿಮುಕ	ವಿಮುಖ
90	15	ನೆನುತಂ	ವೆನುತಂ
93	28	ಮುಳಸಿಂ	ಮುಳಿಸಿಂ
96	37	ಭೂಪತಿಯ	ಭೂಪತಿ
,,	39	ಪರುಕಿಸಿ	ಪರಿಕಿಸಿ
104	71	ರೆತ್ತಿತಲು	ರೆತ್ತಿತ್ತಲು
105	72	ದೊಳಃ	ದೊಳ
106	80	ಏನುತ	ಎನುತ
107	84	ತತ್ಕಾಲ	ತತ್ತತ್ಕಾಲ
108	1	ಗೋಗಳನು	ಗೋವ್ಗಳನು
109	5	ಬಾರ್ಗವಿ	ಭಾರ್ಗವಿ
,,	,,	ರವಿಪ	ರವಿುಪ
110	12	ವತಾನಿ	ಮೌನಿ
111	15	ವೆಳ್ಕು	ವೇಳ್ಕು
,,	,,	ನಿನ್ನಿನ್ನೆಣಿಕೆ	ನಿನ್ನೆಣಿಕೆ
,,	,,	ಸಂತವಿಸೆ	ಸಂತವಿಸಿ
112	20	ಯೊದೊಡಂ	ಯಾದೊಡಂ

ಪುಟ	ಪದ್ಯ	ಅಶುದ್ಧ	ಶುದ್ಧ.
112	20	ಕುಳ್ಳಿರ್ಪಿ	ಕುಳ್ಳಿರ್ಪ
,,	22	ಲಾಳಿಯರ್ಸಂ	ಲಾಳಿಯುರ್ಸಂ
,,	23	ಸುತ್ರಾವ	ಸುತ್ರಾಮ
113	26	ದಿರ್ದ	ದಿಂದಿರ್ದ
,,	29	ಬಳೆವನಿರ್ದಂ	ಬಳೆವುತಿರ್ದಂ
,,	,,	ಸ್ಪರ	ಸ್ವರ
115	38	ದಮುನದ	ದಮನ
,,	,,	ಹೃಚೋಕ	ಹೃಥ್ಪೋಕ
,,	,,	ಳಶೋಭಿಸದು್ರ	ಳೊಳಶೋಕದು್ರ
116	41	ತತಕ	ತಕ್ಷಕ
,,	42	ವೇಘ	ಮೇಘ
117	47	ಕೊಳುಗಳ	ಕೊಳುಗುಳ
,,	48	ಮಿಲ್ಲೆಲೆವಜ್ರೀ	ಮಿಲ್ಲೆಲೆವಜ್ರ
,,	49	ವೇದಸಂ	ವೇದನಾ
,,	,,	ದೊಳಗಿಹ	ದೊಳಿಹ
,,	,,	ಬಿಡದೆ	ಳಿಯುದೆ
119	5	ಸುರಭೆ	ಸುರಸಭೆ
121	33	ದುಲುವೆ	ದುಲುಪೆ
122	40	ಪಿತೆ	ಪಿತ
,,	46	ಕೌರವರು	ಕೌರವರುಂ
123	49	ನಿನ್ನ	ನಿನ್ನಿ
124	69	ಮತಿಯು	ಮತಿಯಿ
125	79	ಪೂಗಳ್ದ	ಪೊಗಳದ
,,	83	ಸೀಳ್ಗೆರ್ದ	ಸೀಳ್ದೆರ್ದ
128	15	ಮದಡ	ಮದನ
137	122	ಕಾಲಲ	ಕಾಲ
140	20	ನೆಡೆದ	ನಡೆದ
146	81	ಪೊದುದಾ	ಪೋದುದಾ
,,	82	ನರುಣಿ	ನರಣಿ
148	96	ರಾತ್ಯ	ರಾತ್ಮ
,,	103	ನೂಕಳ್ದ	ನಾಂಕಳ್ದ
149	2	ಯುಲ್ಲರ	ಯೆಲ್ಲರ
151	15	ಬಾಣಸಿ	ಬಾಣಸ
152	25	ಒಡಿತಿ	ಒಡತಿ

ಶ್ರೀ.

ಬಾಲಭಾರತಂ.

ಮೊದಲನೆಯ ಸಂಧಿ.

॥ ಭಾಮಿನಿಷಟ್ಪದಿ. ॥

ಅತ್ರಿಯೆನಿಪ ಪೆಸರಾಂತ ಮುನಿಪನ ।
ನೇತ್ರದಿಂದುದ್ಭವಿಸಿದವರ ನ ।
ಕ್ಷತ್ರನಾಥನೆನುತ್ತಮಾರ್ಕೆಳೆಗೆರೆಯನೆಂದೆನುತಂ ॥
ಧಾತ್ರಿಯಲಿ ಮೆರೆಯುತ್ತೆ ಕೈರವ ।
ಮಿತ್ರನೆನಿಸಿದನವನೆ ದಾನವ ।
ಶತ್ರುವಿನ ವಾಮಾಕ್ಷಿಯೆಂಬರು ಚಂದ್ರಮನ ನೊಲಿದು ॥ ೧

ಅಮರರಿಂ ಸೇವೆಯನು ಪೊಂದುತೆ ।
ಹಿಮವವರ್ಷಿಪ ಪಾದಮೊಪ್ಪಲು ।
ಪ್ರಮಥನಾಥನ ತಲೆಯ ಕುಸುಮವೆನುತ್ತೆ ಪೆಸರಾಂತು ॥
ತಮವತವಿಸುವ ಕೌಮುದಿಯೆನಿ ।
ಪ್ಪಮಳತಟಿನಿಯ ಪಡೆದನಾಚಂ ।
ದ್ರಮನೆ ಗಿರಿರಾಜನವೊಲೊಪ್ಪಿದನಖಿಳ ದಿಶೆಗಳಲಿ ॥ ೨

ಗಂಗೆಯಾಕಾಳಿಂದಿ ನರ್ಮದೆ ।
ತುಂಗಭದ್ರೆಯು ಕೃಷ್ಣೆ ಮೊದಲಹ ।
ಮಂಗಳಾಪಗೆಗಳ ಜಲಂ ಪರಿತಂದು ತುಂಬಿದೊಡಂ ॥
ಪೊಂಗದಿರ್ಪ ಸಮುದ್ರನೊರ್ಮೆಯೆ ।
ತಿಂಗಳುದಿಸಲ್ಪೆರ್ಮೆಯಿಂದು ।
ಪೊಂಗುವನೆನಲ್ಕೆಗಳ್*ದನಾತನೆ ಕುಲಕೆ ಗುರುವಾದ ॥ ೩

ಕಳೆಗರೆಯುಳೆಗುದಿಸಿದನು ಕುಳ |
ತಿಳಕನಾಬುಧನೆಂಬ ಪೆಸರಿಂ |
ಪೊಳೆವರನ್ನಗಳಲ್ಲಿ ಮುತ್ತಿನತೆರದೆ ಗ್ರಹಗಳಲಿ ||
ಕಳೆವಡೆದು ಕರ್ದಮುನಕನ್ನಿಕೆ |
ಯಿಳೆಯನಂಗಜತಾಪದಿಂ ಕೈ |
ಕೊಳಲವರ ಬಸಿರಿನಲಿ ಜನಿಸಿದನಾಪುರೂರವನು || ೪

ಆಪುರೂರವನಿಂದ್ರಬಲನಾ |
ಭೂಪುರಂದರನೆನಿಸಿ ಧರ್ಮದಿ |
ಕಾಪಿಡಲು ಧರಣಿಯನು ಮೆಚ್ಚಿತು ಲೋಕವೊಲವಿಂದ ||
ಶ್ರೀಪತಿಯ ತೊಡೆಯಲ್ಲಿ ಜನಿಸಿದ |
ರೂಪವತಿಯೂರ್ವಶಿಯ ಕೈಕೊಂ |
ಡೋಪನೆನಿಸುತೆ ದಿವ್ಯಭೋಗಂಗಳಲಿ ಸುಖಿಸಿದನು || ೫

ಅವನಮಗನಾರಿಪುಗಳಾಯುವ |
ತವಿಸನಾಯುವೆನಿಪ್ಪ ಪೆಸರಿಂ |
ಸುವಿನಯದ ಗುಣಮಾಂತು ಧರ್ಮದಿ ಧರೆಯ ಪೊರೆವುತಿರೆ ||
ಅವನಿವಧು ಸಂತಸದಿ ನುರುಪುಳ |
ಕವನು ತಾಳ್ದಳೊ ಎಂಬವೊಲ್ತೋ |
ರ್ಪುವು ನೃಪಾಲನ ಯಾಗಶಾಲೆಯ ಯೂಪರಾಜಿಗಳು || ೬

ಪುತ್ರನಾದನು ನಹುಷನಾಯುಗೆ |
ಧಾತ್ರಿಯೊಳು ಪುಣ್ಯಂಗಳೆಸಗಿಯೆ |
ತತ್ರಿವಿಷ್ಟಪವಡರಿದನು ಸುಖತತಿಯನೀಕ್ಷಿಪೊಡೆ ||
ಗೋತ್ರರಿಪುಮರೆಗೊಳಲು ಪುಣ್ಯಚ |
ರಿತ್ರನಿಂದ್ರನ ಪದವನಾಳ್ದಾ |
ಶತ್ರುಸೂದನನೆನಿಸಿ ಮೆರೆದನು ದೇವಲೋಕದಲಿ || ೭

ನಹುಷನಿಂದೆ ಯಯಾತಿ ಜನಿಸಿದ |
ನಹಿತರನು ಸದೆಬಡಿವೆನೆನುತಾ |
ಗ್ರಹಿಸಿ ತೆರಳಲು ಬಲದಧೂಳಿಯು ಗಗನಕಡರುತ್ತ ||
ಬಹುಳದಿಂ ಕೈತಕಪ ಜನನಕೆ |
ವಿಹಿತಹೇತುವದೆನಿಸಿ ಹರಹುತೆ |
ಮಹಿಯೊಳುತ್ತಮ ಕೀರ್ತಿಯಾಂತುದು ದೋಸಮಿಲ್ಲೆನಿಸಿ || ೮

ಉದಿಸಿದನು ಬಳಿಕವಗೆ ಪೂರುವು |
ಸದಯಹೃದಯನು ರಾಜ್ಯವಾಳದ |
ಮೊದಲೆ ತಳೆವನು ದೈತ್ಯಗುರುವಿನ ಮುಳಿಸಿನಿಂದೊಗೆದ ||
ಮುದುಪತನವನು ತಂದೆಯಾಣತಿ |
ಯದನು ಮೀರದೆ ಹರುಷದಿಂ ಲೋ |
ಕದಲಿ ಜಸವನುಪಡೆದು ತನ್ನಯ ಕುಲವಸಲಹಿದನು || ೯

ಅವರಕುಲವೆಂಬಬುಧಿಯಲಿ ಸಂ |
ಭವಿಸಿದರಸರೊಳೊಳ್ಳಿದನೆನು |
ತ್ತವನಿಯಲಿ ಜಸವಾಂತು ಮೆರೆದನು ಭರತಭೂಮಿಪನು ||
ನವಮಣಿಗಳೊಳು ಮೆರೆವ ಕೌಸ್ತುಭ |
ದವೊಲು ತೇಜೋಭರಿತನಾಗಿಯೆ |
ಕುವಲಯವ ಸಲಹಿದನು ಧರ್ಮವತಪ್ಪದಂದಲಿ || ೧೦

ಭರತಭೂಪನ ನಿಶಿತಶರತತಿ |
ದುರುಳರಕ್ಕಸಬಲವನೆಲ್ಲವ |
ನುರುಳಿಸಲು ಸುತ್ರಾಮಚಾಪಕೆ ಕಜ್ಜವಿಲ್ಲದೆಯೆ ||
ವರವಿಭೂಷಣವಾಗಿ ನಿಂದುದು |
ಮೆರೆವ ಪೊಸಮುಗಿಲುಗಳಿಗದು ಪು |
ಷ್ಕರದೆ ಜನಕಚ್ಚರಿಯ ನೀವುತೆ ಶಕ್ರಧನುವೆನಿಸೆ || ೧೧

ಆಮಹಾವಂಶದೊಳು ಜನಿಸಿದ |
ನಾಮಹಾಸತ್ವಾಧಿಕನು ವರ |
ನಾಮದಿಂದೆ ಪ್ರಸಿದ್ಧನಾದನು ಹಸ್ತಿಯೆಂದೆನಿಸಿ ||
ಭೂಮಿಯೊಳು ಮಲೆತರಿನೃಪಾಲರ |
ಭಾಮಿನಿಯರಾನನದೆ ಶೋಭಿಪ |
ರಾಮಣೀಯತಮಾಲಪತ್ರವನಳಿಸಿದನೊ ಬಲದಿ || ೧೦

ಅಳಕೆಯಿಂ ಸಿರಿಯಿಂದೆ ಮೇಣಾ |
ಚೆಲುವಿನಿಂದಮರಾವತಿಯ ತಾಂ |
ಗೆಲುವವೋಲಿಪ ಹಸ್ತಿನಾಪುರವರವ ರಚಿಸಿದನು ||
ಇಳೆಯರಸನಾಹಸ್ತಿ ತನ್ನ |
ಗ್ಗಳಿಕೆಯಂ ಪಸರಿಸುತ ಧರೆಯನು |
ಸಲಹಿದನು ನೀತಿಯನು ಬಿಡದೆಯೆ ಜನರಪೊರೆಯುತ್ತ || ೧೪

ಬಳಿಕಲಾಕುಲದಲ್ಲಿ ಜನಿಸಿದ |
ಕುಲಗಿರಿಗೆ ಸಮನಪ್ಪ ಸತ್ವನು |
ತಳೆದನವನಿಯ ಭರವಪರುಷದಿ ಪಲವುವರುಷಗಳ ||
ಇಳೆಯೊಳಿದುವೆ ವಿಚಿತ್ರವಾತನ |
ಬಳಿಯೊಳತುಳೈಶ್ವರ್ಯಮಿರೆಯುಂ |
ಬೆಳಗೊಡೆಯು ತಾನೊಂದೆ ಪಿಡಿವೊಡೆಪೆರತು ಕಾಣಿಸದು || ೧೨

ನೆಗಳ್ದ* ತತ್ಸಂತಾನವಾರ್ಧಿಯೊ |
ಳೊಗೆದನಾಶಂತನು ಮಹೀಪತಿ |
ಸುಗುಣನಿಧಿ ಸಿರಿವಂತ ತನ್ನಯ ಪೆಸರೆ ನಿಜವೆನಿಸೆ ||
ಬಗೆಬಗೆಯೊಳೀಯುತಿರಲಾತನ |
ಪಗೆಗಳುಂ ಯಾಚಕರಗಣಮುಂ |
ನೆಗಳ್ವ ಸ್ವಾಸ್ಥ್ಯವನಾಂತರನುದಿನವೆಲ್ಲಿ ನೋಡಿದೊಡಂ || ೧೪

ಆಮಹಾರಥನೆನಿಪ ಶಂತನು |
ಭೂಮಿಪತಿಯೊಂದುದಿನ ಬೇಂಟೆಯು |
ನೇಮದಿಂ ರಥವೇರಿ ಪುರದಿಂ ತೆರಳ್ದು ವಿಪಿನದಲಿ ||
ತಾಮಸದ ಮೃಗಗಳನು ಕೊಲುತ ಮು |
ಹಾಮಹಿಮನೈತಂದು ಕಂಡನು |
ರಾಮಣೀಯಕದೇವನದಿಯಾತೀರ ಭೂಮಿಯನು || ೧೬

ಅರಸನಾ ಮೃಗಯಾ ವಿಹಾರದಿ |
ನುರೆಬಳಲ್ದೈತಂದು ನಿರ್ಮಲ |
ತರವೆ ತೊಳಗುವ ನದಿಯ ನೀರನು ಪೀರ್ದು ತಟಿನಿಯನು ||
ತೆರೆದ ಕಣ್ಣಿಂ ನೋಡಿ ತಣಿಸುದೆ |
ಮರುಳನಂದದೆ ನಿಂದನಾಭೂ |
ವರನದೇನಚ್ಚರಿಯೊ ಭಾಗೀರಥಿಗೆ ಮನಸೋತು || ೧೭

ಗಂಗೆಯಾಪೆಣ್ಬರಿಜಿಸಿಂ ಕುರು |
ಪುಂಗವನ ಮುಂಗಡೆಯೊಳೊಪ್ಪುವ |
ತುಂಗವಕ್ಷೋಜವನು ತೋರುತೆ ಸೆರಗನೋಸರಿಸಿ ||
ಕಂಗೆವಂದಳನಂಗನಿಭ ಭೂ |
ಪಂಗೆ ನಗೆಮೊಗದಿಂದ ಮೆರೆವಾ |
ಮಂಗಳಾಂಗಿಯ ನೋಡಿ ಶಂತನು ಕಾಮಿಸಿದನವಳ || ೧೮

ಬಳಿಕ ಶಂತನು ನುಡಿದ ನೊಲವಿಂ |
ದೆಲೆಗೆ ಪರಸತಿಯಲ್ಲದಿರ್ದೊಡೆ |
ಸಲಿಸು ತನ್ನಭಿಮತನ ನಿನ್ನಯ ಕಿಂಕರನು ನಾನು ||
ಲಲನೆ ತನ್ನಯ ದೇಹಜೀವಂ |
ಗಳು ಸಿರಿಯು ರಾಜ್ಯಂಗಳೆಲ್ಲವು |
ಚೆಲುವೆ ನಿನ್ನದೆನುತ್ತ ತಿಳಿವುದು ಪೆರತನೆಣಿಸದೆಯೆ || ೧೯

ಕೇಳಿ ಸುರನದಿ ಮುಗುಳುನಗೆಯಿಂ |
ಪೇಳಿದಳು ಪಲ್ವೆಳಗಬೀರುತ |
ಲೀಲೆಯಿಂ ಜಲದೋಳಿಯುಂತಿಹ ನುಡಿಗಳಿಂದಾಗ ||
ಆಲಿಸೈ ಭೂಪಾಲನಾಂ ನಿ |
ನ್ನಾಲಯಕೆ ಬರೆ ಕಾಣಲಾರೆನು |
ತಾಳಿಹುದು ನಾಂ ಮಾಳ್ಪ ಕಜ್ಜಕೆಮುಳಿಯದೆಂದೆಂದುಂ || ೨೦

ಪಲನೃಪರೊಳು ವಿರುದ್ಧ ಕಾರ್ಯಂ |
ಗಳನೆಸಗಿದೊಡಮೆಣಿಸಲಾಗದು |
ತಿಳಿಮ ಸಮ್ಮತಿಸಿದೊಡೆ ನಿಲ್ವೆನು ನಿನ್ನೊಳೊಲವಿಂದ ||
ಬಲುಮೆಯಿಂ ತಡೆಯಲ್ಕೆ ನಿನ್ನಯ |
ನಿಳಯಮುಳಿದೈದುವೆನು ಸಿರಿ ತಾಂ |
ತೊಲಗುವಂದದಿ ದುರ್ವಿನೀತನನೆಲೆನೃಪತಿ ಕೇಳೈ || ೨೧

ಒಪ್ಪಿದನು ನರಪಾಲನದನಾ |
ದರ್ಪಕನ ಪೆಣ್ಬರಿಜೆನಂದದೊ |
ಳೊಪ್ಪುವಾಸುಂದರಿಯನೇರಿಸಿಕೊಂಡು ರಥದಲ್ಲಿ ||
ತಪ್ಪದಾನಂದದಲಿ ಬಂದನು |
ಕಪ್ಪುರದ ಪರಿಮಳದ ಸುರಭಿಯಿ |
ನೊಪ್ಪುವಾಪಟ್ಟಣಕೆ ಪುರುಕುಲದೀಪ ನೊಲವಿಂದ || ೨೨

ಅರಸನೊಲವಿಂ ವಿಹರಿಸಿದನಾ |
ಸುರನದಿಯೊಳೊಡೆವೆರೆದು ಕತ್ತೂರಿ |
ಪರಿಮಳದಿ ನವರತ್ನ ಕಾಂತಿಯಿನೆಸೆವಸೌಧದೊಳು ||
ಮೆರೆದನಾ ಶುದ್ಧಾಂತವಧುಗಳ |
ನರಸನವ್ವಳಾ ಸಿಂಧುರಾಜನ |
ಮರೆವಳಿರ್ವರು ಲೀಲೆಯೊಳು ಕೂಡಿರ್ದರೆಡೆವಿಡದೆ || ೨೩

ಮಡದಿತಿಂಗಳ ಪೋಲ್ವಕುವರರ |
ಪಡೆದು ಕ್ರಮದಿಂದಿಂದೇಳುಮಂದಿಯ |
ನೊಡನೆ ನೀರೊಳು ಬಿಸುಷುತಿರಲೀಕ್ಷಿಸುತೆ ದುಗುಡದಲಿ ||
ತಡೆಯೆ ತನ್ನನು ಬಿಟ್ಟೊಡನೆ ಪೊರ |
ಮಡುವಳೀಸತಿಯೆನುತ ಭಯದಿಂ |
ನುಡಿಯಲಮ್ಮದೆ ಸುಮ್ಮನಿರ್ದನು ಶಂತನುನೃಪಾಲ || ೨೪

ಬಳಿಕಲಷ್ಟಮ ಪುತ್ರನಂ ಪಡೆ |
ದುಳುಹದವನಂ ಕೊಲ್ಲಲೆಳಸಿದ |
ಲಲನೆಯಿರವನು ನೋಡಿ ತಡೆದಾಗ್ರಹದೊಳಿಂತೆಂದ ||
ಎಲೆ ಮರುಳೆ ನೀಂ ಪಾಪಿಯಾವಳೊ |
ಕುಲವಿಘಾತಿನಿ ಸಪ್ತಪುತ್ರರ |
ಕೊಲೆಗೆ ತಣಿಯದೆ ಕುಲದ ತಂತುವ ಮುರಿಯಲೆಳಸಿದೆಯಾ ||೨೫||

ಶಿಶುವನಿದನೆಲೆ ತನಗೆಕುಡು ನೀಂ |
ವಸುಧೆಯೊಳು ಸತ್ಕೀರ್ತಿ ಪಡೆಯುವೆ |
ಶಶಿಕುಲಂಬಳೆದಪುದು ಕರುಣಿಸುಸಾಧ್ವಿ ನೀನೀಗ ||
ಬಸಗೆಯುಕ್ಕುವೆನುತ್ತ ಪೇಳುವ |
ವಸುಮತೀಶನ ನೋಡಿ ನುಡಿದಳು |
ಶಶಿವದನೆ ನಸುನಕ್ಕು ಪೂರ್ವದ ಚರಿತೆಯನು ಕ್ರಮದಿ || ೨೬

ಪುರುಷಸಿಂಹನೆ ಚಿತ್ತವಿಸುನಾ |
ನುರುತರದ ನಿಷ್ಕರುಣಿಯೆಂಬೆಯ |
ಮರುಳೆ ತಾನು ನೃಶಂಸೆಯಲ್ಲೆಲೆ ತನ್ನ ಕಥೆಗೇಳು ||
ಧರಣಿಯುಲಿ ಮಾನವರ ಪಾಪವ |
ಪರಿಹರಿಪ ಪಾವನೆಸುರಾಪಗೆ |
ಹರಶಿರೋಭೂಷಣೆಯೆನುತ್ತಲೆ ತಿಳಿವ್ರುದೆನ್ನುವನು || ೨೭

ಒಂದುದಿನ ವಸುರಾಯ ತನ್ನಯ |
ಸುಂದರಿಯ ಶಾಸನದಿ ಭೂಮಿಗೆ |
ಬಂದನೆಲ್ಲರು ವಸುಗಳೊಡನೆ ವಿನೋದದಿಂ ತಾನು ||
ಚಂದದಿಂದ ವಸಿಷ್ಠನಾಶ್ರಮ |
ಕಂದು ನಡೆತಂದವನ ಧೇನುವ |
ಮುಂದು ತಿಳಿಯದೆ ಕಳ್ದರೆಲ್ಲರು ನೀಚಬುದ್ಧಿಯಲಿ || ೧೮

ತಿಳಿದು ಮುನಿಪತಿ ದಿವ್ಯದೃಷ್ಟಿಯಿ |
ನೆಲೆಮರುಳ್ಗಳೆ ಮನುಜರೂಪಿಂ |
ದಿಳೆಯೊಳಗೆ ಪುಟ್ಟುವುದು ನೀಂಗಳೆನುತ್ತ ಶಪಿಸಿದನು ||
ಬಳಿಕಲವದಿರು ಕೈಮುಗಿದು ಮುನಿ |
ತಿಲಕನಡಿಯೊಳು ಪೊರಳಶಾಪವ |
ಕಳೆದು ಕರುಣಿಪುದೆನಲು ಮುನಿಯಾಜ್ಞಾಪಿಸಿದನಾಗ || ೧೯

ಅಳುಕದಿರಿ ನೀವೆಲ್ಲ ಭೂಮಿಯ |
ತಳದೊಳುದಿಸಿದ ಮಾತ್ರದಿಂದಲೆ |
ಕಳೆದು ಮಾನುಷದೇಹವನು ನಿಜರೂಪುದಾಳುವಿರಿ ||
ಲಲನೆಯಾಣತಿಯಿಂದ ಧೇನುವ |
ಕಳಲೆಳಸಿದಾಪಾಪಿ ಸತಿಯುರ |
ನೆಳಸದೆಯೆ ಚಿರಕಾಲವಿರಲೀ ಭೂತಳದೊಳೆಂದ || ೨೦

ಇಂತು ಮುನಿವರನಾಣತಿಯನಾಂ |
ತಂತರಿಸದಾವಸುಗಳಳಿದರು |
ಚಿಂತೆಯಿಂ ಪಗಲಲ್ಲಿ ಕಾಣುವ ದೀಪದಂದದಲೀ |
ಸಂತವಿಸಿನಾನವರಿಗೆಂದೆನು |
ಚಿಂತೆಯೇತಕೆ ತಾನು ಬ್ರಹ್ಮ ಸ |
ಭಾಂತರದೊಳರಲುತ್ತರೀಯವ ಸರಿಸಿದನು ಪವನ || ೨೧

ಸೆರಗುಜಾರೆ ಮಹಾಚಿಕಿತ್ಸಕ ।
ನುರೆ ಮುದದಿ ನೋಡಿದನು ಚಂದ್ರನ ।
ವರಕಲೆಯವೊಲಿರ್ಪ ತನ್ನನು ಸಭೆಯೊಳುಳಿದವರು ॥
ಸರಸಿಜದ ತೆರದಿಂದ ನಾಣ್ಚಿಂ ।
ಬೆರೆದು ಕಣ್ಮುಚ್ಚಿರಲು ಬೊಮ್ಮನು ।
ಪರಿಕಿಸುತ ಶಪಿಸಿದನು ಮುಳಿಸಿಂದಾಗ ವೈದ್ಯನನು ॥ ೨೧

ಕುಲಗಿರಿಯವೊಲು ಧೀರನಹ ನೀ ।
ನೆಲೆಮರುಳೆ ಸಲದೊಲವನಿಲ್ಲಿಯೆ ।
ಬಳಿದಕತದಿಂ ಮರಳಿ ಧರೆಯೊಳಗುದಿಸು ನರನಾಗಿ ॥
ಲಲನೆ ಸಿಂಧುವಿನಂತೆ ನಿನ್ನುವ ।
ನೊಲಿಸಿರಮಿಸುಗೆ ಯಿವಳಕಜ್ಜಕೆ ।
ಮುಳಿದೊಡಾಗಲೆ ಮರಳುಗೆನುತಾ ಬೊಮ್ಮ ನೇಮಿಸಿದ ॥ ೨೨

ವಸುಗಳಿರ ನೀವೆಲ್ಲ ತನ್ನಯ ।
ಬಸಿರೊಳುದಿಸಿರಿ ಪದ್ಮಕೋಶಂ ।
ಬಿಸಿನಿಯೊಳು ಪುಟ್ಟುವವೊಲೀ ಧರೆಯಲ್ಲಿ ಕ್ರಮದಿಂದ ॥
ಬಿಸುಡುವೆನು ಪುಟ್ಟಿದ ಚಣದೊಳಾ ।
ವಸುಗಳೇಳ್ವರ ಕಿರಿಯಮಗನಾ ।
ವಸುಧೆಯೊಳು ಚಿರಕಾಲಮಿರ್ಪನೆಂದು ಪೇಳಿದೆನು ॥ ೨೪

ಕೇಳುತದಕೊಪ್ಪಿದರವರು ಭೂ ।
ಪಾಲತಾನದರಂತೆ ನಿನ್ನುವ ।
ನೋಲಗಿಸಿ ತನಯರನು ಪಡೆದು ವಿಶಾಸಕಿವರುಗಳಾ ॥
ಬೀಳುಗೆಡಹಿದೆ ಜಲದೆ ನಿರ್ಘೃಣಿ ।
ಖೂಳೆ ಮಾನಿನಿಯೆನುತ ತಿಳಿಯದಿ ।
ರೇಳುಮುಂದಿಗೆ ಶಾಪ ಪರಿಹರವಾಯ್ತು ತಿಳಿದ ॥ ೨೫

ಜನಪ ನೀನಾದೇವವೈದ್ಯನು ।
ಮನುಜ ರೂಪದೊಳವತರಿಸಿ ತ ।
ನ್ನನೆವರಿಸಿಸೊಗಮಾಳ್ದ ಪಲದಿನದನ್ನಮೆನ್ನೊಡನೆ ॥
ತನಗೆ ಶಾಪಾವಧಿಯು ಮುಗಿದುದು ।
ಮನದ ದುಗುಡವದೇಕೆ ದೈವದ ।
ಘನಮಹಿಮೆ ತಪ್ಪದಿದು ತಿಳಿವಿಂದುಳಿವುದೀ ಮರೆವಾ ॥ ೩೬

ನರಪತಿಯೆ ಶಿಶುವಿದನು ನಾನೊ ।
ಯ್ದರಡನೆಯ ಗುಹನಂತೆ ಪೊರೆಯುವೆ ।
ನಿರದೆ ಶೈಶವದೆಶೆಯು ಕಳೆದಬಳಿಕ್ಕೆ ನಿನ್ನೆಡೆಗೆ ॥
ಬರುವನಳುಕದಿರೆಂದು ಪೇಳುತ ।
ಸುರತಟನಿ ತಾಂ ಮಾಯವಾದಳು ।
ವರಕುಮಾರನ ಕೂಡೆ ನಿಲ್ಲದೆ ತತ್‌ಕ್ಷಣದೊಳಲ್ಲಿ ॥ ೩೭

ಜನಪನವಳ ವಿಯೋಗದುಃಖದೆ ॥
ತನುಕರಗಿ ಬೆಂಡಾದೊಡಂ ತಾ ।
ನೆಣಿಸದಿಪ್ಪತ್ತಾರು ವರುಷದ ವರೆಗವಿಾಧರೆಯಾ ॥
ಸನುಮತಿಸಿ ಸಲಹಿದನು ಬಿಲ್ಲಿನ ।
ಮೊನೆಯ ಬಲದಿಂ ನೀತಿತಪ್ಪದೆ ।
ಘನಮಹಿಮರೇನಳಲಿಗಂಜುವರೇ ಧರಿತ್ರಿಯಲಿ ॥ ೩೮

ಒಂದುದಿನವಾಜನಪ ತನ್ನಯ ।
ಮಂದಿಸಹಿತಲಿ ವನಕೆ ನಡೆದನು ।
ಚಂದದಿಂ ಬೇಂಟೆಯ ವಿನೋದವ ನೋಡಬೇಕೆನುತ ॥
ಅಂದದಿಂ ಶೋಭಿಸುವ ಗಂಗೆಯ ।
ನಂದುಕಂಡಾ ಜನಪನಲ್ಲಿಯೆ ।
ನಿಂದು ಚಿಂತಿಸುತಿರ್ದನಿನಿಯಳ ನೆನೆದು ಮನದಲ್ಲಿ ॥ ೩೯

ಇನಿತು ಕಾಲಕೆ ಬಾಲ್ಯವೋಡಿಯೆ ।
ತನಯನಾಜವ್ವನವ ಪಡೆದಿಹ ।
ನೆಸುತ ತಿಳಿವೆನು ಬಲಿದ ಬಾಹುಗಳಿಂದೆ ಶೋಭಿಸುತ ॥
ಸನಿಹಕೈತಹನೆಂದೊ ತಾಂ ಘಂ ।
ಸನ ಸಹಿತ ಕಾರ್ಗಾಲದಂತ್ಯದ ।
ವನಜವಂದದಿ ಮೆರೆವೆನೆನುತಲಿ ಸುಯ್ದ್ನಾತಟದಿ ॥ ೪೦

ಆನದೀ ತಟದಲ್ಲಿ ಮೆರೆವಯು ।
ವಾನನನು ಧನ್ವಿಯನು ಕಂಡನು ।
ಮಾನನಿಧಿ ಪ್ರತಿಬಿಂಬದಂದದೆ ತೋರ್ಪನೊರ್ವನನು ॥
ಏನಿದಚ್ಚರಿಯೆನುತ ಮೋಹದಿ ।
ತಾನು ನೋಡುತ್ತಿರಲಡಂಗಿದ ।
ಭಾನುಮಾಮೇಘಾಳಿಯಲಿ ಮರೆಗೊಂಬ ಮಾಳ್ಕೆಯಲಿ ॥ ೪೧

ಒಡನೆ ಬಂದಳು ಗಂಗೆ ತನ್ನಯ ।
ದಡದೆನಿಂದೀಕ್ಷಿಸುವ ಶಂತನು ।
ವೆಡೆಗೆಸುತನೊಡಗೊಂಡು ಕರುಣಾದೃಷ್ಟಿಯನು ಬೀರಿ ॥
ಕಡಲಿನಿಂ ನಿಧಿಯೊಡನೆ ಸಿರಿ ತಾಂ ।
ನಡೆತರುವ ತೆರದಿಂದ ಪೆರ್ಚಿದ ।
ಸಡಗರದಿ ಚಿರಕಾಲದಗಲಿಕೆ ಬಿಡಿಸಬೇಕೆನುತ ॥ ೪೨

ಬಂದು ಸುರನದಿ ನುಡಿದಳಾಗವ ।
ಸುಂಧರೇಶನೆ ಕೇಳು ನಿನ್ನಯ ।
ನಂದನನು ದೇವವ್ರತಾಖ್ಯೆಯೆ ಜಗದಿ ಪೆಸರಿವಗೆ ॥
ಕಂದನಿವನು ವಸಿಷ್ಠ ಮುನಿಪತಿ ।
ಯಿಂದಲಖಿಳಾಗಮವ ಕಲಿತನು ।
ಸಂದೆಯಂಗೊಳಬೇಡ ಗುರುಕೃಪೆ ಪಡೆದಹನು ನಿಜದಿ ॥ ೪೩

ಪಂಡಿತನು ಮುನಿಯಾತನಿಂದಲ |
ಖಂಡದಿವ್ಯಾಸ್ತ್ರಗಳ ಪಡೆದು |
ದ್ದಂಡಶೌರ್ಯನೆನಿಪ್ಪನೀತನ ಪತಿಕರಿಸು ನೀನು ||
ಚಂಡಭುಜಬಲದತುಳ ಸದ್ಗುಣ |
ಮಂಡಿತನು ತಾನಿವನ ದೆಸೆಯಿಂ |
ಮಂಡಲೇಶನೆ ನಿನಗತುಳ ಸತ್ಕೀರ್ತಿ ಲಭಿಸುವುದು || ೪೪

ಇಂತು ಸಿರಿತಕ್ಕೈಸಿ ಪತಿಗಾ |
ಕಂತುರೂಪನನೊಪ್ಪಿಸುತ್ತ ತಿ |
ಚಿಂತೆಯಿಂ ಕಣ್ಣೀರ ಸುರಿಸುತ ವಿಷ್ಣುಪದಿಯಾಗ ||
ಕಾಂತನಂ ತನಯನುಮನಡಿಗಡಿ |
ಗಂತರಿಸದೀಕ್ಷಿಸುತ ನಡೆದಳು |
ಮುಂತೆಬಹುಯತ್ನದಿ ಪ್ರವಾಹಕ್ಕಿದಿರು ಮೊಗವಾಗಿ || ೪೫

ನರಸನವಳ ವಿಯೋಗ ದುಃಖವ |
ಮರೆದನಾ ತರುಣನನು ಕಾಣುತ |
ಭರದಿ ತನ್ನಯ ಪುರಕೆ ತನಯನಕೂಡಿ ನಡೆತಂದ ||
ಶರದಚಂದ್ರನು ರೌಹಿಣೇಯನ |
ಬೆರಸಿ ಗಗನವ ಪುಗುವ ಮಾಳ್ಕೆಯೊ |
ಳುರುತರಪ್ರೀತಿಯಲಿ ಜಯಜಯರವದ ಜನದೊಡನೆ || ೪೬

ತನಯನಿಗೆ ಯುವರಾಜ ಪಟ್ಟವ |
ನನುವಿನಿಂ ಕೈಗೊಳಿಸಿ ಭೂಮಿಯ |
ಘನಭರವ ತಾನಿರಿಸಿ ದೇವವ್ರತನೊಳೊಂದು ದಿನ ||
ವನವಿಹಾರವ ನೋಡಬೇಕೆಂ |
ದೆನುತ ಸಿಂಧುವ ತಡಿಯ ಸಾರ್ದನು |
ಘನಕಳಿಂದದ್ವಿಪಿಮಹೋದಕ ವೇಣಿಭೂಷಿತವಾ || ೪೭

ನರಪನಾಘ್ರಾಣಿಸಿದನುತ್ತಮ ।
ಪರಿಮಳವತಾನೆತ್ತಣಿಂ ದೈ ।
ತರುತಲಿಹುದೋ ನೋಳ್ಪೆನೆನುತಲೆ ಚಿಂತಿಸುತ್ತಾಗ ॥
ಭರದಿಯೋಜನದೂರವೆಯ್ತಿ ।
ದುರುಸುಗಂಧೆಯು ದಾಶಕನ್ಯೆಯ ।
ನಿರುಕಿಸುತೆ ನುಡಿಸಿದನು ಕಾಮಿಸಿ ಮದನಮಂಜರಿಯು ॥ ೪೮

ಆರುನೀನೆಲೆನೀರೆ ತಂದೆಯ ।
ದಾರು ನೀನೇತಕ್ಕೆ ತಟನಿಯ ।
ತೀರದೊಳು ನಿಂದಿರ್ಪೆಯೆನುತಲಿ ಕೇಳಲಾಸುದತಿ ॥
ಮಾರನಿಭಕೇಳೆನ್ನಪಿತನಾ ।
ಧೀರಕೈವರ್ತೇಶನೆನಗೀ ।
ಚಾರುನಾವೆಯ ನಡೆಸನೇಮವನಿತ್ತಿಹನೆನಲ್ಕೆ ॥ ೪೯

ಕೇಳಿಬಾಲೆಯ ವಾಕ್ಯವನು ಭೂ ।
ಪಾಲನಾನಂದಿಸುತಲಲ್ಲಿಂ ।
ಮೇಲೆನಡೆದಾದಾಶನತಿಯನು ಕಂಡು ಸತ್ಕರಿಸೆ ॥
ಕಾಲುಮುಟ್ಟಿಯೆ ಮಣಿದು ಪೃಥ್ವೀ ।
ಪಾಲ ತನ್ನಿಂದೇನುಕಜ್ಜವೋ ।
ಪೇಳೆನಲು ಭ್ರೂಸಂಜ್ಞೆಯಿಂ ಸಾರಥಿಗೆ ಬೆಸಸಿದನು ॥ ೫೦

ದಾಶಪತಿ ನೀಂ ಕೇಳು ಬಿಲ್ಗೊಳು ।
ದಾಶರಥಿಗೆಣೆಯೆನಿಪ ಶಂತನು ।
ವಾಶಿಸಿರ್ಪನು ನಿನ್ನಸುತೆಯನು ಪುಣ್ಯವಶದಿಂದ ॥
ಭೂಸುದತಿಗೆರಡನೆಯಳೆನಿಪಳು ।
ಲೇಸಹುದು ನಿನಗಿವಳಕುಡುಭೂ ।
ವಾಸವಂಗೆನುತುಸುರಿದನು ಸಾರಥಿಯು ನಯದಿಂದ ॥ ೫೧

ಅದನು ಕೇಳ್ದಾ ದಾಶಪತಿಯುತಿ |
ಮುದದೊಳೆಂದನು ದೇವ ನೀನೊ
ಪ್ಪಿದೊಡೆ ಕನ್ನೆಯ ಕುಡುವೆನಿನ್ನಯ ನಿಯಮವನು ಕೇಳು ||
ಸುದತಿಯುದರದೆ ಜನಿಸಿದನೆ ಗೂ |
ವಧುಗೆ ಪತಿಯೆಂದೆನಿಸಿಯಾಳ್ವೊಡೆ ||
ಮದುವೆಗೆಪ್ಪುತ್ತ ಪನು ಸಂಶಯಬೇಡ ನಿನಗೆಂದ || ೫೨

ಆನುಡಿಗೆ ಚಿಂತಿಸುತ ಗಂಗೆಯ |
ಸೂನುವಿರ್ಣನಸಾಧ್ಯವೆನುತಲಿ |
ಮಾನನಿಧಿ ತಾಂ ಮಾಳ್ಪಕಜ್ಜಂದೋರದಿರೆ ಮುಂದೆ ||
ಮೌನದಿಂ ಕೈವರ್ತಕನ್ಯೆಯ |
ಮಾನಸಾಂತರದಲ್ಲಿರಿಸಿ ಮಂ |
ಮ್ಲಾನದಿಂ ತೆರಳಿದನು ತನ್ನಯ ಪುರಿಗೆ ನರಪಾಲ || ೫೩

ಮನಸಿಜಾಸ್ತ್ರಕೆ ಸಿಲುಕಿ ನರಪತಿ |
ದಿನದಿನಕೆ ಬಡವಾಗುತಿರೆ ಸೂ |
ತನಮುಖದಿ ಕೇಳುತ್ತೆ ವಾರ್ತೆಯನೆಲ್ಲ ಕ್ರಮದಿಂದ ||
ಮನದ ಧೃತಿಯೊಳುಬಂದು ತಾಂ ಕಂ |
ಡನು ನದೀಸುತನಾಗ ನುಡಿದನು |
ವಿನಯದಿಂ ದಾಶಾಧಿಪತಿಯೊಳು ಮೆಚ್ಚುವಂದದಲಿ || ೫೪

ಜನಕ ತಾಂ ಬಯಸಿದನು ನಿನ್ನಯ |
ತನುಜೆಯನು ನೀಂ ರಾಜ್ಯಶುಲ್ಕವ |
ನನುವಿನಿಂ ಕಾಂಕ್ಷಿಸಿದೆ ನಾಂ ಶಂತನುತನೂಭವನು ||
ನನಗೆ ರಾಜ್ಯದ ಕಾಂಕ್ಷೆಯಿಲ್ಲಾ |
ತನಬಳಿಕ ಪಟ್ಟವನು ಕಟ್ಟುವೆ |
ನನುಮತಿಸಿ ನಾಂ ನಿನ್ನದೌಹಿತ್ರಂಗೆ ಕೇಳೆಂದ || ೫೫

ನಗುತ ದಾಶನು ನುಡಿದನಾತಗೆ |
ಸುಗುಣನಿಧಿ ನೀಂ ಪಿತನಬಯಕೆಯೆ |
ಮಿಗಿಲೆನುತ ರಾಜ್ಯವನು ಬಯಸದೆಬಿಡುವೆ ದಿಟನಿನ್ನ ||
ಮಗನು ರಾಜ್ಯಕ್ಕರ್ಹನೆಂಬುದು |
ಜಗವರಿವುದಿದನರಿಯದವರಾ |
ರೊಗುಮಿಗೆಯು ಸಡಗರದಿದೇತಕೆ ಸಾಕುನಡೆಯೆಂದ || ೫೬

ಬಳಿಕ ಶಪಥಂಗೈದನಾಗಲೆ |
ವೊಳಗಿನಂದದಿ ಗರ್ಜಿಸುತ ಜನ |
ಗಳಿರ ಕೇಳುವುದೆಲ್ಲರುಂ ತನ್ನಯ ಪ್ರತಿಜ್ಞೆಯನು ||
ತಳೆವ ನಾನುರೆ ಬ್ರಹ್ಮಚರ್ಯವ |
ನಿಳೆಯೊಳೀತನು ವಿರುವವರೆಗಂ |
ಲಲನೆಯರನುಳಿವೂರ್ಧ್ವರೇತನೆನಿಪ್ಪೆತಥ್ಯವಿದು || ೫೭

ಸುತವಿಹೀನರಿಗಿಲ್ಲ ವಿಹಪರ |
ಗತಿಯೆನುತ ಪಲಜನರು ಪೇಳುವ |
ರತಿಶಯದಿ ತಂದೆಯನು ಸೇವಿಸಿ ಭಕ್ತಿಭಾವದಲಿ ||
ಪಿತನು ಗಳಿಸಿದ ಪುಣ್ಯದಿಂ ಸ |
ದ್ಗತಿಗೆ ಸೇರಿಪೆನವರನೆನುತಲಿ |
ಹಿತದಿದೇವವ್ರತನು ನುಡಿದನು ಮೆಚ್ಚೆಸುರನಿಕರ || ೫೮

ಅವನ ನುಡಿಯನು ಕೇಳ್ದು ಗಗನದಿ |
ದಿವಿಜರಪ್ಸರಸರು ಮುನೀಂದ್ರರು |
ಸವನೆನುತ ಭಯವಿಸ್ಮಯಾನ್ವಿತರಾಗಿ ಮನದಲ್ಲಿ ||
ಇವನೆ ಭೀಷ್ಮನು ಭೀಷ್ಮನೇ ಎನು |
ತವಸರದಿ ಕೊಂಡಾಡುತಿರ್ದರು |
ಸುವಿನಯದ ಗುಣಕಾರು ಮತ್ಸರಿಸುವರು ಲೋಕದಲಿ || ೫೯

ಕುಸುಮ ವರ್ಷವ ಸುರಿಸೆ ದಿವಿಜರು |
ಪೆಸರನಾಂತಾಭೀಷ್ಮನೆನುತಲಿ |
ಕುಸುಮಗಂಧಿಯ ದಾಶಕನ್ಯೆಯ ಕುಳ್ಳಿರಿಸಿ ರಥದಿ ||
ಒಸಗೆಯಿಂದೈತಂದು ನಗರಿಗೆ |
ವಸುಮತೀಶಂಗಭಿನಮಿಸಿ ತಾ |
ಮಸಮುಳಿದು ಜನನಿಯನು ಕೈಕೊಳ್ಳೆಸುತಲರ್ಪಿಸಿದ || ೬೦

ಬಂದೆರಗಿದಾತ್ಮಜನ ಕಂಡಾ |
ನಂದದಿಂ ಬಿಗಿಯಪ್ಪಿ ಸುರಸುಮ |
ಗಂಧದಾಮಸ್ತಕವ ನಾಘ್ರಾಣಿಸುತಲಿಂತೆಂದ ||
ಕಂದಮಕ್ಕಳು ತಮ್ಮ ಸದ್ಗುಣ |
ವೃಂದದಿಂ ಮೆಚ್ಚಿಪರು ತಂದೆಯ |
ನಿಂದು ನಿನ್ನವೊಲಾರುದುಷ್ಕರ ಶಪಥದೊಳಗಹರು || ೬೧

ಪ್ರೀತನಾದೆನು ಮಗನೆ ನೆರೆ ವಿ |
ಖ್ಯಾತನೆನಿಸೈ ವರವನೀವೆನು |
ಭೂತಳದೆ ಮೃತ್ಯುವದು ಸೋಂಕದು ಬಯಸದೆಯೆ ನಿನ್ನ ||
ನೀತಿದಪ್ಪದಿರೆನುತ ಕಳುಹಿ ಸು |
ಜಾತೆಯೆನಿಪಾವನಿತೆಯುದ್ಭವ |
ದಾತೆರನ ಬೆಸಗೊಳಲು ಬಂದಿಂತೆಂದ ದಾಶಪತಿ || ೬೨

ವಸುವೆನಿಪ ಚೇದಿಪತಿಯೊಂದಿನ |
ಮೊಸೆದು ಗಗನದಿ ಚರಿಸುತಿರ್ದನು |
ಪೊಸವಿಮಾನವನಿಂದ್ರದತ್ತವ ನಡರಿಮುದದಿಂದ ||
ಲಸದಮೃತದಧರದೊಳು ಪರಿರಂ |
ಭಿಸುವ ಗಿರಿಕಾಮುಖವ ತಾಂ ಕಾ |
ಮಿಸಿದ ನೀಕ್ಷಿಸಿ ಮದನಬಾಣಕೆ ಸಿಲ್ಕಿಯಾ ವಸುವು || ೬೩

ಜಾರಿಬಿದ್ದುದು ವೀರ್ಯಯಮುನೆಯ |
ನೀರೊಳದನೀಂಟಿದುದು ಶಾಪದಿ |
ತೋರವಿಮಾನಾಗಿರ್ಪಸುರವಧು ತಳೆದೊಡನೆ ಬಸಿರ ||
ನೀರೊಳಗೆ ನಾನೆಳೆದ ಬಲೆಯ್ಯೊಳು |
ಧೀರಸಿಲುಕಿದುದದನು ಭೇದಿಸೆ |
ತೋರಿದುವು ಪೆಣ್ಗಂಡು ಕೂಸುಗಳದರ ಬಸಿರೊಳಗೆ || ೬೪

ವಸುನೃಪಗೆ ತೋರಿದೆನು ಮಕ್ಕಳ |
ನೊಸಗೆಯಿಂದೀಕ್ಷಿಸುತ ವಿಸ್ಮಯ |
ರಸವಸುರಿಸುತ ಮೊಗದಿ ಮಗನನುಕೊಂಡು ತಾಂ ನಲಿದು ||
ಸಸಿಮೊಗದ ಪೆಣ್ಗೂಸನೆನಗಿ |
ತ್ತಸಮಸುಂದರಿ ಯಿವಳಪೊರೆಯೆಂ |
ದುಸುರಿ ತೆರಳ್ದನು ತನ್ನಪುರಕೆಲೆ ನೃಪತಿ ಕೇಳೆಂದ || ೬೫

ಸತಿಕುಲೀನೆಯೆನುತ್ತೆ ತಿಳಿದಾ |
ಕ್ಷಿತಿಪನಳವನು ಶುಭಮುಹೂರ್ತದಿ |
ಪತಿಕರಿಸಿ ಕಾಳಿಯನು ಗಿರಿಜೆಯನೀಶನಂದದಲಿ ||
ವಿತತಭೋಗಾವಳಿಯೊಳಾಳ್ದನು |
ಚತುರೆಯೊಡಗೂಡುತ್ತಲಾ ಭೂ |
ಪತಿ ಬಹುಳದಿನದನ್ನಮಿತರವ ಮರೆದು ಸೊಗದಿಂದ || ೬೬

ಅವಳ ಬಸಿರೊಳಗುದಿಸಿದರು ವರ |
ಕುವರರಾಚಿತ್ರಾಂಗದನು ಮೇಣ್ |
ಭುವನನುತನು ವಿಚಿತ್ರವೀರ್ಯನುಮಿವರು ಕ್ರಮದಿಂದ ||
ದಿವಸಕರಚಂದ್ರಮರಿನಾ ವಾ |
ಸವಧಿಶಾವಧು ಮೆರೆವ ತೆರದಿಂ |
ಯುವತಿಮೆರೆದಳು ಸೊಗದಸುಗ್ಗಿಯೊಳಾಳ್ದು ಮುಳುಗುತ್ತ || ೬೭

ಬಳಿಕ ಕೆಲದಿನ ನಡೆಯೆ ವಿಧಿ ತಾಂ |
ಮುಳಿದು ಭೋಗಕೆ ಬೇಸರಿಸಿದಂ |
ತಿಳಿಯರಸನನು ಸ್ವರ್ಗಸಿಂಹಾಸನವನೇರಿಸಿದ ||
ತೊಳಗುತಿಹ ಕುರುರಾಜಪೀಠಕೆ |
ಚೆಲುವಚಿತ್ರಾಂಗದನನೇರಿಸಿ |
ಯೊಲವಿನಿಂ ಶಪಥವನು ಕಾಯ್ದನು ಭೀಷ್ಮನಳ್ತಿಯಲಿ || ೬೮

ಪೊರೆದನಾ ಚಿತ್ರಾಂಗದನು ಸಾ |
ಗರವೆಮೇಖಲೆಯುಂದ ಭೂಮಿಯು |
ಸರಿಯೆನಿಪ್ಪವರಿಲ್ಲ ತನಗೀಧರೆಯೊಳೆನುವಂತೆ ||
ಧುರದಿತನ್ನಯ ಪೆಸರಿನಾಗಂ |
ದರರಿನಳಿದನು ಕಾದಿಸಾಸದಿ |
ಸುರನದೀಸುತನಿಲ್ಲದಿರ್ಪಾವೇಳೆಯೊಳು ನೃಪನು || ೬೯

ಮಗನಳಿದುದನು ಕೇಳಿ ಮನದಾ |
ದುಗುಡವೆನಿಪಗ್ನಿಯಲಿ ಬೇಯುವ |
ಸುಗುಣಮಣಿ ಸತ್ಯವತಿಯಿರವನು ಕಂಡು ನೋಯುತಲಿ ||
ಜಗದಜನ ಮೆಚ್ಚುವವೊಲಾ ಕಿರಿ |
ಮಗನಿಗಭಿಷೇಕವನು ಮಾಡಿಸಿ |
ಮಿಗಿಲು ಶಾಂತಿಯ ಪೊಂದಿಸಿದನಾ ಸುರನದೀತನುಜ || ೭೦

ಪತಿಯವರಿಪೊಡೆ ಕಾಶಿರಾಜನು |
ಸುತೆಯರಾ ಮೂವರ ಸ್ವಯಂವರ |
ಕತುಳಬಲ ಭೂಮಿಪರ ಕರೆಯಿಸೆವೀರನಾಭೀಷ್ಮ ||
ಹಿತದಿತಂದವದಿರನು ತಮ್ಮಗೆ |
ಸತಿಯರಾಗಿಯೆ ಮಾಡವೇಳ್ಕೆಂ |
ದತಿಭರದೊಳೈತಂದ ವಾರಾಣಸಿಗೆ ವಹಿಲದಲಿ || ೭೧

ಗಂಡುಗಲಿ ನಡೆತಂದು ಮುಂದಣದಿ |
ದಂಡಿಸಿದ ಸರಸಾಲರೊಡನು |
ದ್ದಂಡತನದಿಂ ಕುಳ್ಳಿರಲು ಸಗಪೊಗದೊಳವರೆಲ್ಲ ||
ಕಂಡು ವೃದ್ಧನಿದೇಕೆ ಬಂದನೊ |
ಚಂಡಬಲ ಭೂಪತಿಗಳಿದಿರಲಿ |
ಲಂಡನೆನುತಂಜರೆದು ನಕ್ಕರು ಹಸ್ತತಾಳದಲಿ || ೨೦

ಕರದಿ ಮಾಲೆಯು ಪಿಡಿದು ಮೂವರು |
ತರುಣಿಯರು ನಡೆತಂದು ಜನಪರ |
ವರಗುಣಂಗಳ ಪೇಳ್ವಸಖಿಯರ ನುಡಿಗೆ ಮನವಿಡದೆ ||
ಭರದಿನಡೆದರು ವಾಯುವಶದಲಿ |
ತೆರಳುತಲಿ ಜೀಮೂತ ರೇಖೆಗ |
ಳುರುಮಹೀಧರಕಡರುವಂದದಿ ನೋಡುತಿರೆ ಜನರು || ೨೨

ಮುತ್ತ ತನ್ನನುನೋಡಿ ಮುಂದಕೆ |
ತತ್ತರಿಸುತೀರ್ಷೆಯಲಿ ಗಮಿಸುವ |
ಮತ್ತಕಾಶಿನಿಯರನು ಕಂಡಾಕೌರವೇಶ್ವರನು ||
ಸುತ್ತಲುಂ ಕುಳ್ಳಿರ್ಪ ಭೂಪಾ |
ಲೋತ್ತಮರು ನೋಡುತಿರಲವದಿರ |
ನೊತ್ತರದಿ ಕುಳ್ಳಿರಿಸಿ ತೇರೊಳು ನಡೆದ ನಿಜಪುರಕೆ || ೨೩

ಪಡೆವೆರಸಿಸಾಲ್ವಾದಿ ಭೂಪರು |
ನಡೆಯಲೈತರಲವರ ಸೋಲಿಸಿ |
ಸಡಗರದಿ ನಿಜನಗರಿಗೈತಂದನು ನದೀಸುತನು ||
ಬಡನೆಸಾಲ್ವನ ಬಯಸಿದಂಬೆಯು |
ತಡೆಯದಲ್ಲಿಗೆ ಕಳುಹಿ ತಮ್ಮಗೆ |
ಮಡದಿಯರನಂಬಾಲಿಕಾಂಬಿಕೆಯರನು ಮಾಡಿಸಿದ || ೨೪

ಸಿಲುಕಿದಳು ಪಗೆಗೆನುತ ಸಾಲ್ವನು |
ಕಳುಹಲಂಬೆಯುನವಳು ನಡೆತಂ |
ದೆಲೆಮಹಾಭುಜವರಿಸು ತನ್ನನೆನುತ್ತ ಬೇಡಿದಳು ||
ಲಲನೆಯರ ನಾನೊಲ್ಲೆ ನಿಲ್ಲದೆ |
ತೊಲಗೆನುತ ಸಿಂಧುಜನು ನೂಂಕಲು |
ಮುಳಿದು ತಪವಂಗೈಯಲಂಬೆಯು ಗಮಿಸಿದಳು ಬನಕೆ || ೨೧

ವಿಧಿಯು ಬಲಿದು ವಿಚಿತ್ರವೀರ್ಯಂ |
ಗೊದವಿದುದು ತಾಂ ರಾಜಯಕ್ಷ್ಮವು |
ಮುದವಳಿದು ದಿನದಿನಕೆ ನವೆದನು ಚಿಂತೆಯಿಂದವನು ||
ಅದುವೆ ನೆವಮಾಗಲ್ಕೆ ಕಾಲನ |
ಸದನಕೈದಿದನಾಗ ಕುರುಸಂ |
ಪದಕೆ ಬಂದುದು ಹಾನಿಯುವಲಂಬನವು ತೋರದೆಯೆ || ೨೨

ಎರಡನೆಯ ಸಂಧಿ.

ಕುಸುಮಷಟ್ಪದಿ.

——:o:——

ಬಳಿಕ ಯೋಜನ ಗಂಧಿ |
ಸಲಿಸಿದ್ವಿಜರಿಂ ನೃಪಗೆ |
ಸಲುವಪರಕರ್ಮಗಳ ವಿಹಿತದಿಂದ ||
ಅಳಲ ಕಡೆಯುತೆ ತನ್ನ |
ಬಳಿಯೊಳಿಹ ಗಾಂಗೆಯ |
ನೊಳೆ ಪೇಳ್ದಳಾ ರಾಜ ಕಾರ್ಯಗಳನು || ೧

ಮಸುಳಿಸಿದುದೀವೇಳೆ |
ಶಶಿಕುಲಂ ನಿನ್ನನುಜ |
ನಸುವ ಬಿಡೆ ಸಂತಾನ ರಹಿತನಾಗಿ ||
ಶಿಶುವೆಕೇಳ ಬುಧಿಮಥ |
ನಿಸದ ಮೊದಲಲ್ಲಿ ಶೋ |
ಭಿಸದಂತೆ ನಂದನಂ ಸುರಪಾಲನಾ || ೨

ಕೋವಿದನು ಬಲ್ಲೆ ನೀ |
ನಾವಾಜ್ಮಯಂಗಳನು |
ಯೀ ವಿಪದವೊದವಿದುದು ದೈವವಶದೆ ||
ದೇವರನ ಧರ್ಮದಿಂ |
ದೋವಿಸುತರನು ಪಡೆವು |
ದೀವಧುಗಳೊಳಗೀಗ ತಪ್ಪೆನಿಸದು || ೩

ಆನುಡಿಯ ಕೇಳ್ದು ಗಂ |
ಗಾ ನಂದನನು ನುಡಿದ |
ಸಾನುರಾಗದಿ ಕರವ ಮುಗಿದು ನಯದೆ ||

ಮಾನಿನಿಯೆ ಕೇಳ್ಚಿತ್ರ |
ಭಾನುಬಿಡಲುಷ್ಣವನು |
ತಾನು ಸಿಂಧುಜನುಳಿವ ನಿಜಶಪಥವ || ೪

ಪರಶುರಾಮನು ಮುನ್ನ |
ಪರಶು ವೆಂಬಗ್ನಿಯಲಿ |
ಧರಣಿಪರನೆಲ್ಲರನು ಹುತಿಸಲವರ ||
ತರುಣಿಯರೊಳಾವಿಪ್ರ |
ವರರು ಸುತರಂ ಪಡೆದು |
ಪೊರೆದತಾಬಾಹುಜರ ಕುಲವನಾಗ || ೫

ಆಮಾರ್ಗದಿಂದೆ ಸು |
ಕ್ಷೇಮಕಾಗಿಯೆ ನೀನು |
ತಾಮಸವನುಳಿದೀಗಲೊಬ್ಬ ಮುನಿಯಾ ||
ನೇಮಿಸೌ ಕುಲವೃದ್ಧಿ
ಗೀ ಮಾನಿನಿಯರಲ್ಲಿ |
ಕಾಮಿತವ ತನುಜರನು ಕಡೆಯುಲೆಂದು || ೬

ಎನಲು ನಾಣ್ಚುತ್ತೆ ಮಾ |
ನಿನಿ ನುಡಿದಳಾಗ ನಾಂ |
ಜನಕನಿಯಮದಿ ನಡೆಸುತಿರೆ ನಾವೆಯ ||
ಮುನಿಪರಾಶರನಾಗ |
ತನುಜನಂ ಬಯಸಿ ರವಿ |
ತನಯೆಯಾ ತೀರಕ್ಕೈತಂದ ನೊಲಿದು || ೭

ಬಂದು ಸಾಜದ ಮತ್ಸ್ಯ |
ಗಂಧವನು ಕಳೆದು ಮುನಿ |
ಯೊಂದು ಯೋಜನ ಗಂಧಿಯೆನಿಸಿ ತನ್ನ ||

ಮುಂದೆ ಶಾಪದ ಭಯದೆ |
ನಿಂದ ತನ್ನನು ನೋಯು |
ದಂದದಿಂದೊಯ್ದು ನಾ ದ್ವೀಪದೆಡೆಗೆ ‖ ೮

ಜನಿಸಿದನು ತತ್‌ಕ್ಷಣದೆ |
ಘನಜಟೆಯ ಧರಿಸಿ ಸ |
ನ್ಮುನಿಯುರಣಿಯಲಿ ವಹ್ನಿಯುದಿಸುವಂತೆ ‖
ಜನಮರಿಯೆ ವೇದ ವ್ಯ |
ಸನದಿಂದ ಲಾ ವ್ಯಾಸ |
ನೆನಿಪುದೇತನಗೆ ಪೆಸರಾಗಿ ನೆಗಳೆ ‖ ೯

ಜನನಿ ನೀಂ ತನ್ನುವನು |
ನೆನೆದೊಡನೆ ನಡೆತರುವೆ |
ನೆನುತೆರಗಿ ತನ್ನನಾ ಕನ್ನೆಯೆನಿಸಿ ‖
ಮುನಿಪರಾಶರನೊಡನೆ |
ಘನಮಹಿಮೆಯಿಂ ಗಮಿಸಿ |
ದನು ತಿರೋಭಾವ ವಿದ್ಯೆಯನೆನೆ ನೆದು ‖ ೧೦

ಸೂನುವಾವ್ಯಾಸ ನೆ |
ನ್ನಾಣತಿಯ ಪಡೆದು ಸಂ |
ತಾನವನು ಕರುಣಿಪನು ಸತಿಯುರಲ್ಲಿ ‖
ನೀನು ಸಮ್ಮತಿಸಿದೊಡೆ |
ತಾನವನ ಕರೆಸುವೆನು |
ಮಾನನಿಧಿ ಯಿಾಗಳೇ ನಿನ್ನಿದಿರಿಗೆ ‖ ೧೧

ಬೆರಗಾಗಿ ಗಾಂಗೇಯ |
ನುರುತರದ ಮುದದಿಂದ |
ಕರೆಸವನನೆಂದೊಪ್ಪೆ ಮತ್ಸ್ಯಗಂಧಿ ‖

ಕರಚರಣಮಂ ತೊಳೆದು ||
ವರಮುನಿಪನನು ನೆನೆಯೆ |
ತರಣಿಯಂದದಿ ವ್ಯಾಸ ನೈತಂದನು || ೧೨

ಮಣಿದೆರಗಲಾಮುನಿಯ |
ಫಣಿಯ ಭಸಿತವದು ಪಾ |
ವನಮೆನಿಸೆ ಚರಣಕಮಲವನೆ ಸತಿಯು ||
ತೊನೆದಪ್ಪೆ ವಾತ್ಸಲ್ಯ |
ದನುವಿನಿಂ ಕಣ್ಗಳುಂ |
ಸ್ತನಯುಗಳಮುಂ ಸುರಿಸಿದುವು ಪಯಸನು || ೧೩

ಬಿನ್ನವಿಸಿದನು ತಾಯ |
ಮನ್ನಣೆಯ ನಾಂತಾಗ |
ಸನ್ನುತ ಚರಿತ್ರೆಯೆಲ್ಲವ ಬಲ್ಲೆನು ||
ನಿನ್ನ ಮತದಂತೆ ಸಂ |
ಪನ್ನ ಸುತರನು ಕೊಡುವೆ |
ಪನ್ನಗಸುವೇಣಿಯುರ ನೊಪ್ಪಿಸೆನುತ || ೧೪

ಮಾಯವಾಗಲು ಮುನಿಪ |
ನಾಯುವತಿಯುರ ಕರೆದು |
ಪಾಯ ದೃಷ್ಟಾಂತಂಗಳಿಂದ ಪೇಳ್ದು ||
ನ್ಯಾಯದಿಂದನ್ವಯ ಕ ||
ಪಾಯವನು ತಾರದೆ ವಿ |
ಧೇಯರಾಗಿಪುದೆನುತ ಬೋಧಿಸಿದಳು || ೧೫

ಇರುಳು ಪಾಸಿನೊಳಲ್ಲಿ |
ನಪಾಲ ಪತ್ನಿಯರು |
ಸ್ಮರಿಸುತ್ತ ಪತಿಯನತಿ ನಿಯಮದಿಂದ ||

ವರಪರಾಶರಸುತನ |
ಬರವಪೊರ್ದರು ನಿಶಾ ||
ಕರನಪೊರ್ವ ವಿಶಾಖೆಯುರ ತೆರದೊಳು || ೧೬

ಮುನಿಯಾಗ ವರಜಟಾ |
ಜಿನವಲ್ಕಲವ ಧರಿಸಿ |
ಮನೆಗೆ ಬರಲಂಬಿಕೆ ನಿರೀಕ್ಷಿಸುತ್ತ ||
ತನತುಕಣ್ಮುಚ್ಚಿದಳು |
ಮುನಿವಿರೂಪಕ್ಕವಾ |
ತನತನುವ ಗಂಧಕಂ ಹೇಸುತಾಗ || ೧೭

ಅಂತಿರ್ದ ಸತಿಗೆ ವರ |
ಸಂತತಿಯ ಕರುಣಿಸಿಯೆ |
ಚಿಂತಿಸುತ್ತಿಹ ಜನನಿ ಯೆಡೆಗೆ ಬಂದು ||
ಮುಂತೆ ಜನಿಸುವನಯುತ |
ದಂತಿಬಲ ನಂಧನಾ |
ಕಾಂತೆಯು ಪ್ರಮಾದದಿಂ ದವಳೊಳೇಂದ || ೧೮

ಅದನಾಲಿಸುತ್ತಧಿಕ |
ಮುದವ ತಳೆಯದೆ ಮಗನೆ |
ವಧುವೀಕ್ಷಿಸುತ್ತಿರ್ಪಳಂಬಾಲಿಕೆ ||
ಸುದತಿಗತಿ ವೈಭವಾ |
ಸ್ಪದಶೂರ ಸುಕುಮಾರ |
ನುದಯಿಸುವ ವೊಲು ಕರುಣಿಸೆಂದಳಾಗ || ೧೯

ಮುನಿಯಾಜೆ ಯಾಣತಿಗೆ |
ಸನುಮತಿಸಿ ತನ್ನಿಕೇ |
ತನಕೆ ಬಂದನು ಕೃಪಾ ದೃಷ್ಟಿಯಿಂದ ||

ವನಿತೆ ಕಾಣುತ್ತಲಿವ |
ನನು ಗರ್ಭದಿಂ ಮೊದಲೆ |
ಘನ ಪಾಂಡುರತ್ವವಾಂತಳು ಲಜ್ಜೆಯಿಂ ೨೦

ಆಸತಿ ಗನುಗ್ರಹಿಸಿ |
ವ್ಯಾಸಮುನಿ ಪತಿಬಂದ |
ನಾ ಸತ್ಯವತಿ ಯೆಡೆಗೆ ವಿನಯದಿಂದ ||
ಲೇಸಿ ನೀಂ ಶೂರನೆನಿ |
ಪಾ ಸುತನು ತಾಯ್ಗೆಯ್ದ |
ವೇಷದಿಂ ದುದಿಪನಾ ಪಾಂಡುವೆಂದ ೨೧

ತೆರಳೆ ಮುನಿಪತಿ ಯತ್ತ |
ತರುಣಿಯರು ಗರ್ಭವನು |
ಧರಿಸಿ ಸುತರಿಬ್ಬರನು ಪಡೆದರೊಡನೆ ||
ಪರಿಪೂರ್ಣ ಬಲರನಾ |
ಪರಭಯಂಕರರ ನುರು |
ತರ ಭುಜರ ಧೃತರಾಷ್ಟ್ರ ಪಾಂಡುವರರ ೨೨

ಅವರೊಳಂಧನನು ಸ |
ತ್ಯವತಿ ಪರಿಕಿಸಿ ಮನದಿ |
ತವೆನೊಂದು ಮತ್ತೆ ಮುನಿಪತಿಯ ನೆನೆಯೆ ||
ಅವನು ನಡೆತಂದು ಬೆಸ |
ಸುವುದೆನಲು ಮತ್ತೊರ್ವ |
ಕುವರನಂ ಕರುಣಿಸೆಂಬಿಕೆ ಗೆಂದಳು ೨೩

ಸುದತಿ ಮುನಿಪತಿಯ ವಿಕೃ |
ತದ ರೂಪಕಂಜಿ ಬೆಸ |
ಸಿದಳು ಪರಿಚಾರಿಕೆಗೆ ನಡೆಯೆನುತ್ತ ||

ಚದುರೆ ನಡೆತಂದಳಾ |
ಮದನ ಮೋಹಿನಿ ಯೆನಲು |
ಮುದದಿಂದ ಮುನಿಯು ಸನ್ನಿಧಿಗೆ ಭರದಿ ೨೪

ಒಲಿಸಿದಳು ಮುನಿಯು ನಾ |
ಲಲನೆ ಯನುರಾಗದಿಂ |
ಗಳರವದ ಚಿತ್ರದಿಂ ಚತುರೆ ಯಾಗ ||
ಪುಳಕದಿಂ ವಶನಾಗಿ |
ಸಲೆಮೆಚ್ಚಿ ಸಂತೋಷ |
ದೊಳು ಬಂದನಾ ಸತ್ಯವತಿಯ ಪೊರೆಗೆ || ೨೫

ಜನನಿ ನಿನ್ನಯ ಸೊಸೆಯ |
ಮನೆಯ ಪರಿಚಾರಿಕೆಯು |
ಮನವ ನೊಲಿಸಿದಳಿಂದು ನಲವಿನಿಂದ ||
ಮುನಿಶಾಪದಿಂ ಜವನೆ |
ಜನಿಪ ನಿವಳುದರದಲಿ |
ತನುಜನಾಗಿಯೆ ವಿದುರನಾ ಮದಿಂದ || ೨೬

ಮರಳಿ ತನಯರ ಪಡೆವ |
ವರಕೃತ್ಯದೊಳ್ ಬ ಸಸು |
ತೆರಳುವೆನು ನಾನೆಂದು ಮುನಿಯು ಗಮಿಸೆ ||
ತರುಣಿ ಪುತ್ರನ ಪಡೆದು |
ಪರಿಶೋಭಿಸಿದಳು ಕ್ರಿಯೆ |
ವರ ಫಲವನೀವಂತೆ ವಿಹಿತದಿಂದ | ೨೭

ಕುರುಕುಲವ ಬಳೆಪ ಮೂ |
ವರು ಕುಮಾರರು ಕ್ರಮದೆ |
ಸುರನದಿಯ ತನುಜನಾಣತಿ ಮೀರದೆ ||

ವರಕಲೆಗಳರಿತು ಭಾ |
ಸುರದರ್ಪ ಬಲರಾಗಿ |
ಪರಿಶೋಭಿಸಿದ ರೆಲ್ಲರೊಲಿವತೆರದಿ || ೧೮

ಬಳಿಕ ಶುಭ ಲಗ್ನ ದೊಳು |
ಕುಲಪರಂಪರೆಯು ಭೂ |
ವಳಯ ಪಟ್ಟವ ಕಟ್ಟಿ ಧೃತರಾಷ್ಟ್ರಗೆ ||
ದಳಪತಿತ್ವವ ಪಾಂಡು |
ವೊಳೆ ನಿಲಿಸಿ ವಿದುರಂಗೆ |
ಸಲುವ ಮಂತ್ರಿತ್ವವನು ಭೀಷ್ಮನಿತ್ತ || ೧೯

ಶೂರರವರಾರ್ಜಿಸಿದ |
ಧಾರಿಣಿಯು ಸಿರಿಯನಾಂ |
ತಾ ರಾಯನಾಳುತಿರೆ ಕೀರ್ತಿಯಿಂದ ||
ಧೀರ ಸಿಂಧುಜನು ಗಾಂ |
ಧಾರ ಪತಿಯೆಡೆಗೆ ಸುಕು |
ಮಾರಿಯುವನು ಬೇಡಲಟ್ಟಿದ ಚರರನು || ೨೦

ತಂದೆ ತನ್ನನು ಕುಡುವ |
ನಂಧಗೆಂಬುದ ಕೇಳಿ |
ಸಂದೆಯಂಗೊಳದೊಲವಿನಿಂ ಕಣ್ಗಳಾ ||
ಬಂಧಿಸುತೆ ಪಟ್ಟದೊಳ |
ರುಂಧತಿಯು ಗೆಲ್ದಳಾ |
ಗಾಂಧಾರಿ ಯೊಳ್ಜಸವ ಪಡೆದು ಜನರಿಂ || ೨೧

ವರಸಚಿವ ವೃದ್ಧರಿಂ |
ಕರೆದೊಯ್ದು ಧೃತರಾಷ್ಟ್ರ |
ನರವುಗಳ ಕೈವಿಡಿದ ನರ್ತಿಯಿಂದ ||

ತರುಣಿಯಂತಃ ಪುರದೆ |
ಮೆರೆದಳಾ ಗಂಗೆ ಸಾ |
ಗರನ ಮನ್ನಣಿಪಡೆವ ವೊಲು ಮುಖ್ಯದಿ ‖ ೨೦

ಶೂರನೆಂದೆನಿಪ ಯದು |
ವೀರತನ್ನಯ ವರಕು |
ಮಾರಿ ಪೃಥೆಯನು ಪಿತೃಷ್ವಸುಸೂನುಗೆ ‖
ಕೋರಿದಂತಿತ್ತು ಸುಕು |
ಮಾರರಿಲ್ಲದ ಚಿಂತೆ |
ತೋರದಂದದಿ ಮಾಡಿ ಕೀರ್ತಿ ಪಡೆದ ‖ ೨೩

ವಸುದೇವ ಸೋದರಿಯ |
ಪೊಸವಳ್ಳಿಯಂತೆ ಬೆಳೆ |
ಯಿಸುತಿರ್ದನಾ ಕುಂತಿ ಭೋಜ ನೃಪನು ‖
ಅಸಮಕೋಪದ ಮೌನಿ |
ವಸಿಪೆನೆಂದೈ ತರಲು |
ಬೆಸಸಿದಂತೆಸಗೆ ನೇಮಿಸಿದನವಳಾ ‖ ೨೪

ಕನ್ನೆಯಾ ಕೆಳದಿಯರ |
ಬಿನ್ನಣದ ಮಾತುಗಳ |
ತನ್ನ ಸೆಂಡಾಟಗಳ ಪೊರೆದ ಖಗದ ‖
ಮನ್ನಣೆಯ ನುಳಿದು ಮುನಿ |
ರನ್ನ ನಾಣತಿಯಂತೆ |
ಚೆನ್ನೆ ಸೇವಿಸುತಿರ್ದಳನುದಿನದೊಳು ‖ ೨೫

ಆಳಿ ಕುಚದೊಳು ಪತ್ರ |
ಮಾಲೆಯನು ಬರೆಯಲದ |
ತಾಳಲಾರದೆ ಬಳಲುತಿರ್ಪ ತರುಣಿ ‖

ಲೀಲೆಯಿಂ ದಾವಾವ |
ಕಾಲದೊಳು ಮುನಿಯೇನು |
ಪೇಳುವನೊ ತತ್‌ಕ್ಷಣದೆ ಮಾಡುತಿಹಳು || ೩೬

ಮುನಿಪ ದೂರ್ವಾಸನಾ |
ಮನೆಯಲ್ಲಿ ಸುಖದಿ ಕಳೆ |
ದನು ವತ್ಸರವ ನೊಂದ ನೆಣಿಕೆ ಗೊಳದೆ ||
ಮನದೆ ಮೆಚ್ಚುತೆ ಪೃಥೆಯ |
ಘನಸೇವೆಯಿಂ ದೊಲಿದು |
ವಿನುತ ಮಂತ್ರವನು ಬೋಧಿಸಿದನಂದು || ೩೭

ಈ ವಿನುತ ಮಂತ್ರದಿಂ |
ದಾವಾವ ದೇವತೆಯು |
ಭಾವಿಸುತ ಕರೆವೆಯೋ ನೀನಾಗಳೇ ||
ಆ ವಿಬುಧಪತಿ ಬಂದು |
ಭಾವೆ ಕರುಣಿಸುವ ತ |
ದ್ದೇವ ತುಲ್ಯನ ಮಗನ ನೆಂದುಸುರಿದ || ೩೮

ತೆರಳೆ ಮುನಿಪತಿ ಯಿತ್ತ |
ತರುಣಿ ಮಂತ್ರದ ಬಲವ |
ಪರಿಕಿಸಲ್ಬಗೆ ದೊಂದು ದಿನದುದಯದಿ ||
ಅರಮನೆಯೊಳಿರ್ದು ಭಾ |
ಸ್ಕರನುದಿಸುತಿರೆ ಕಂಡು |
ಕರೆದಳವನನು ಬರ್ಪುದೀಗ ಳೆಂದು || ೩೯

ಕವಚ ಕುಂಡಲ ಕಿರೀ |
ಟವ ಧರಿಸಿ ಪೀತ ವಸ |
ನವನುಟ್ಟು ಹಾರಾಂಗದಗಳ ತೊಟ್ಟು ||

ರವಿಬಂದು ಕೈವಿಡಿದ |
ನವಳನಾ ಪದ್ಮಿನಿಯು |
ತವೆವ್ರೋಲ್ವ ಮುಖ ಕಮಲ ವರಳುತಿರಲು || ೪೦

ನಡುಗುತಲಿ ಸೂರ್ಯನೊಳು |
ನುಡಿದಳಾ ಪೃಥೆ ದೇವ |
ಬಿಡುತನ್ನ ಬಲ್ಲೆ ನೀಂ ಧರ್ಮವೆಲ್ಲ ||
ಅಡಿಗೆರಗುವೆನು ಜನಕ |
ನೊಡೆಯನಿಹ ನೆನೆ ಮುಳಿದು ||
ಕೆಡೆ ನುಡಿದನಾ ದಿವಾಕರ ನವಳೊಳು || ೪೧

ವನಿತೆ ಕೇಳುದು ನಿನ್ನ |
ಸನಿಹ ಕೈ ತಂದೆನ್ನ |
ನನುವಿನಿಂ ದೊಲಿಸ ಬಗೆಯದೊಡೆ ನಿನಗೆ ||
ಘನಮಂತ್ರ ದುಪದೇಶ |
ವನೆ ಗೈದ ಮುನಿಪನಂ |
ಮುನಿದು ಶಪಿಸುವೆ ನೀಗ ತಾನೆಂದನು || ೪೨

ಮಾನಸದ ಬಯಕೆಯನು |
ನೀನು ಸಲಿಸಿಯೆ ಪಡೆವೆ |
ಸೂನುವನು ತನ್ನ ತಡೆದದಿತಿಯ ವ್ರೊಲು ||
ಮಾನಿನಿಯೆ ಸಕಲ ಗೀ |
ರ್ವಾಣಾತ್ಮ ನೆನ್ನ ಮಹಿ |
ಮಾನು ಗುಣದಿಂದೆ ನೀಂ ಕನ್ನೆ ಯೆನಿಪೆ || ೪೩

ಮುಗುಳು ನಗೆ ನಾಣ್ವೆರದ |
ಮೊಗದಿಂದಲಾ ಪೃಥೆಯ |
ಬಗೆಯೊಡಂ ಬಟ್ಟುದನು ತಿಳಿದು ಮನದೆ ||

ನಗುತ ಲವಳಂ ಪಿಡಿದು |
ಜಗಜಗಿಪ ಶಯನಕ್ಕೆ |
ಜಗದ ನೇತ್ರನೆ ತಂದ ನೊಲವಿನಿಂದ ‖ ೪೪

ಬಂದು ಕರುಣಾ ದೃಷ್ಟಿ |
ಯಿಂದವಳ ನೊಲಿಸುತ್ತ |
ಕಂದನಂ ಕರುಣಿಸಿಯೆ ಚಿತ್ರ ಭಾನು ‖
ಸುಂದರಿಗೆ ತಾಂ ಕಾಣ |
ದಂದದಿಂ ಮರೆಯಾದ |
ನಂದು ಪದ್ಮಿನಿಯ ನುಳಿದಡಗುವಂತೆ ‖ ೪೫

ಅರಮಗಳು ತಾನೊಡನೆ |
ಪರಿಪೂರ್ಣ ತೇಜನನು |
ಸುರಪತಿಯು ಕಾಂಕ್ಷಿತವ ಸಲಿಸಬಲ್ಲ ‖
ವರಸುತನ ನಂದು ಸಾ |
ಗರದ ವೇಲೆಯು ಮುನ್ನ |
ಪೆರುವವೊಲು ಚಿಂತಾಮಣಿಯ ನೊಲವಿನಿಂ ‖ ೪೬

ಕವಚ ಕುಂಡಲಗಳಿಂ |
ತವೆಮೆರೆವ ಶಿಶುವನಾ |
ಪವನಾಶನನ ತೆರದೆ ಪೆಟ್ಟಿಗೆಯೊಳು ‖
ಯುವತಿ ಬೈತಿರಿಸಿಯಾ |
ಪ್ತವ ಯಸ್ಯೆಯಿಂ ದಲದ |
ನೆವಿಸರ್ಜಿಸಿದಳಮರನದಿಯೊಳಾಗ ‖ ೪೭

ಗಂಗೆಯಾ ಪೆಟ್ಟಿಗೆಯ |
ಮುಂಗಡೆಗೆ ತೇಲಿಸಿ ತ |
ರಂಗದುಯ್ಯಾಲೆಯಿಂದೆ ತೂಗುತೊಲವಿಂ ‖

ತುಂಗಪಂಜರದೊಳಹ |
ಸಿಂಗವರಿಪ್ಪೋಲ್ವ ಶಿಶು |
ಪುಂಗವನತಂದಳಾಸೂತಪುರಿಗೆ || ೪೮

ಬಂದುರಾಧಾಧಿರಥ |
ರೆಂದೆಂಬ ದಂಪತಿಗ |
ಳಂದದಿಂದಲ್ಲಿ ವಿಹರಿಸುತನೋಡಿ ||
ಕಂದನಂ ಮಂಜೂಷಿ |
ಯಿಂದೆ ತೆಗೆದೊಡನೆಯಾ |
ನಂದಿಸುತಕರೆತಂದರಳ್ಕರಿಂದ || ೪೯

ಅವರು ಶಿಶುವನು ತಮ್ಮ |
ಭವನದೊಳ್ಸಲಹಿದರು |
ಭುವನವಿಶ್ರುತನು ರಾಧೇಯನೆನಿಸಿ ||
ರವಿತನಯನೊಲ್ದು ಭಾ |
ರ್ಗವನತ್ತಣಿಂದಸ್ತ್ರ |
ನಿವಹದಭ್ಯಾಸವನು ಕಲ್ತನವನು || ೫೦

ನೆರೆದಭೂಪತಿಗಳನು |
ಪರಿಕಿಸದೆ ಪೃಥೆತಾನೆ |
ವರಿಸಿದಳು ಪಾಂಡುವ ಸ್ವಯಂವರದೊಳು ||
ಸುರಹಸ್ತಿಯಭ್ರಮುವು |
ನಿರುಕಿಪುದೆ ಪರಗಜವ |
ಪರಮಾಭ್ರಮಾತಂಗವನು ಬಯಸದೆ || ೫೧

ಮದ್ರಪತಿಯನು ಗೆಲ್ದು |
ಮಾದ್ರಿಯನು ತಂದಾಸ |
ಮುದ್ರಗೆಯಸೂನು ಜಯಲಕ್ಷ್ಮಿಯಂತೆ ||

ಅದ್ರಿಸಮಧೀರನಾ |
ಭದ್ರವೈವಾಹವನು |
ಮಾದ್ರಿಯೊಡನೆಸಗಿದನು ಪಾಂಡುನೃಪಗೆ || ೫೦

ಜನಪನಾಬೇಂಟೆಯೊಳು |
ಮನದಂದುನಾಯ್ಗಳಾ |
ವಿನುತಧನ್ವಿಯರುಮಂ ಕೂಡಿಕೊಂಡು ||
ಸನುಮತದಿ ರಥವೇರಿ |
ವನಕೆಪೊರಮಟ್ಟನಾ |
ಸನಿಹದ ಹಿಮಾಚಳದಬಳಿಗೆ ಬೇಗ || ೫೩

ಕುರುರಾಜನಾಬನದೆ |
ಕರಿಗಳಮೃಗೇಂದ್ರಗಳ |
ವರಖಡ್ಗಸಂಕುಲವಸೈರಿಭಗಳಾ ||
ತರಿದೊಟ್ಟದನು ಮದಿಸಿ |
ದರಿಬಲವಧುರದೆ ಪರಿ |
ಹರಿಪತೆರದಿಂದೆ ಕಾನನದೊಳಾಗ || ೫೪

ತೊಳಲುತ್ತ ಬೇಂಟೆಯೊಳು |
ಬಳಲಿನೆತ್ತರ್ವನಿಯೊ |
ಳಳಿದಬೆಮರಿಂಬೇಸರಿಸಿದ ನೃಪನ ||
ಬಳಿಗೆ ಬಂದಾಹಿಮಾ |
ಚಳಸಮೀರಣನಾಗ |
ಕಳೆದನಾಖೇಟದಿಂ ದೊಗೆದಳಲನು || ೫೫

ಬನದೆತಿರುಗುವ ಪಾಂಡು |
ಜನಪನಿದಿರೊಳೆರಮಿಪ |
ವನಮೃಗದ್ವಂದ್ವವನು ಕಂಡುಮುಳಿದು ||

ಧನುವೊಳಂಬನೆಪೂಡಿ |
ತೊನೆದಿಸಲ್ಗೊಳಿಡುತ |
ಮುನಿಯಾಗಿ ನುಡಿವುದಾರೂಪನುಳಿದು || ೫೬

ಮುಂದುವರಿವ ಶುಕ್ರಣ |
ದಿಂದೆಂದನೆಲೆನೃಪತಿ |
ಕಿಂದವುನೆನಿಪ್ಪನಾಂ ವಿಪ್ರವರನು ||
ಕಂದರ್ಪತಾಪದಿಂ |
ನೊಂದುನಿಜಸತಿಗೂಡಿ |
ಚಂದದಿಂದಿರೆ ಕೊಂದೆತನ್ನನೀಗ || ೫೭

ಅರಸನೀನುಂ ಸತಿಯು |
ಬೆರೆಯಲೊಡನಂತಕನ |
ಪುರಕೆಯ್ದುತಿಹೆಯೆಂದು ನುಡಿದು ಮಡಿಯೆ ||
ತರುಣಿ ಹದಿಬದೆ ಚಿತೆಯ |
ವಿರಚಿಸಿಯೆಪತಿಕಳೇ |
ವರವಸೇರಿಸಿ ತಾನುಮುಳಿದಳೊಡನೆ || ೫೮

ಮನದುಬ್ಬೆಗದೊಳಾಗ |
ಜನಪನಾಶೆಯತೊರೆದು |
ವನಿತೆಯುರನಿರ್ವರನು ಕೂಡಿಕೊಂಡು ||
ವಿನುತತಪವಾಚರಿಸೆ |
ಬನಕೆಯ್ದಿದನು ಮುಂತೆ |
ಮುನಿಗಳೊಡನಿರ್ಪನಿಂದೆನುತಲಲ್ಲಿ || ೫೯

ಉಳಿದು ವಿಷಯಂಗಳನು |
ಕಳೆದು ಭೂಷಣತತಿಯು |
ತಳೆದುವಲ್ಕಲವ ಜಟೆಯಾಂತುನೃಪನು ||

ಲಲನೆಯುರನೊಡಗೊಂಡು |
ತಳದರ್ನಾಶತಶೃಂಗ |
ನಿಳಯದೊಳು ತಪಮಿರಲು ಮುನಿಗಳಂತೆ || ೬೦

ಬಿಲ್ಲಹಿದೆಯನು ಸೆಳೆದು |
ಕಲ್ಲಾದ ಬೆರಲಿಂದೆ |
ಸಲ್ಲಲಿತವಾಗಿ ಕರಿಕುಂಭಹತಿಗೆ ||
ಸಲ್ವಕಕ್ಕಸದ ಕೈ |
ಪುಲ್‌ಸವಿದೆಗಳ ಬಿಡಿಸು |
ವಲ್ಲಿ ನೋಯದೆಮೆರೆದುದನು ದಿನದೊಳು || ೬೧

ನಾಡೊಳಾಳುವ ತೆರದೆ |
ಕಾಡೊಳಂ ಪಾಂಡುನೃಪ |
ನಾಡುತಿಹಮಿಗಗಳೊಕ್ಕಳೆಯನಾಂತು ||
ರೂಢಿಯಿಂ ನಿಗ್ರಹಿಸಿ |
ಗೂಢದೊಳು ಪಗೆಗಳನು |
ಕೂಡೆಪೆರ್ಚಿಸಿದ ತಪವೆನಿಪಧನವ || ೬೨

ಒಂದುದಿನದಲಿ ಪಾಂಡು |
ವೆಂದನಾಯಾದವಿಯೊ |
ಳಂದದಿಂ ವ್ಯಾಸಮುನಿ ಸೇವೆಗೆಯ್ದು ||
ಇಂದು ನಮ್ಮತ್ತಿಗೆಯು |
ಸಂದನೂರ್ಮಕ್ಕಳನು |
ಚಂದದಿಂ ಪೆರುವ ಗರ್ಭವನಾಂತಳು || ೬೩

ಸುತಸಂಪದಂಬಡೆಯ |
ದತಿಪಾಪಿತಾನಲ್ತೆ |
ಗತಿಗಾಣದಿರ್ಪೆ ನಿಹಪರಗಳಲ್ಲಿ ||

ಕ್ರತುಶತಗಳಿಂದಲಾ |
ರ್ಜಿತ ಸುಕೃತವೇಂ ಸರಿಯೊ ? |
ಸುತಸಂಪದಕ್ಕೆ ವ್ಯರ್ಥಮುದೆಲ್ಲವು || ೬೪

ಮೊಲೆವಾಲಗುಡಿದಂಕ |
ದಲಿ ಮಲಗಿದಾಶಿಶುವ |
ನೊಲವಿನಿಂ ನೋಡಿ ಕಣ್ಣೀರಕರೆದು ||
ಗೆಲವಾಂತಪಿತನಂತೆ |
ಸಲದೆನಾಂ ಪಿತೃಗಳನು |
ತೊಳಲಿಸುವೆ ದುಃಖಾಗ್ನಿಯಲ್ಲಿನಿಚ್ಚಂ || ೬೫

ಮುನಿಶಾಪಹತನಾದ |
ತನಗೆ ಮುಂದೋರದೆಲೆ |
ವನಿತೆತೇಜವನಾಂತ ಪುರುಷನಿಂದೆ ||
ತನಯುನನು ಪಡೆದೆನ್ನ |
ಮನದಿಷ್ಟವನು ಸಲಿಸು |
ಜನರುಸೊಗೆವಾಳ್ವರಾಸತಿಯರಿಂದ || ೬೬

ಎಂದುದಕು ಕೇಳ್ದು ಸತಿ |
ನೊಂದುಪತಿಯೊಳ್ನುಡಿದ |
ಳೆಂದುವುಂ ಪೇಳದಿರ್ಕೀಳ್ನುಡಿಗಳಾ ||
ಇಂದುಳಿದು ನಿನ್ನುವನು |
ಸುಂದರನ ಕೂಡುವೆನೆ |
ಸಿಂಧುವನು ಬಿಟ್ಟೆಲ್ಲಿನದಿಸಾರ್ವುದು || ೬೭

ಅರಸನುರುಸಮ್ಮತಿಗ |
ಳೊರೆದು ಬೇಡುತ್ತಿರಲು |
ತರುಣಿತಾಂ ದೂರ್ವಾಸನನು ಸೇವಿಸಿ ||

ವರಮಂತ್ರವನು ಪಡೆದೆ |
ಪರಿಕಿದೆನೆನುತ್ತಾಗ |
ಳುರುವಿನಯದಿಂದೆ ಪೇಳಿದಳು ಕಾಂತೆ || ೬೮

ಸಂತಸದಿ ನೊಡಬಿಟ್ಟು |
ಚಿಂತೆಯುಳಿದಾನೃಪನು |
ಕುಂತಿಗಾಣತಿಯ ಕುಡಲವಳುಮಿಂದು ||
ಮಂತ್ರದಿಂ ಬರಿಸಿಯೆಕ್ಕೃ |
ಕಾಂತನೊಳಗ್ಗೂಡಿದಳು |
ಕಾಂತನೊಡಗೂಡಿದಾತಾರೆಯಂತೆ || ೬೯

ಶುಭದತಿಥಿ ಶುಭವಾರ |
ದಭಿಜಿನ್ಮುಹೂರ್ತದೊಳು |
ವಿಭವದಿಂ ತೇಜೋಭರಿತನಸುತನ ||
ಇಭಗಮನೆ ಪೆತ್ತಳಂ |
ದಭವನ ಜಟಾಟವಿಯೆ |
ನಭದಗಂಗೆಯ ಜಲವಪಡೆದತೆರದಿ || ೭೦

ಸುರರು ಸಂತಸಗೊಳಲು |
ತರುಗಳುರೆ ಪುಷ್ಪಿಸಲು |
ಪರಿಮಳಿಸಿ ದಿಕ್ಕುಗಳು ಬೆಳಗುತಿರಲು ||
ತೊರೆಯುನೀರ್ತಿಳಿಗೊಳಲು |
ನರರ ಮನಮುರ್ಕಿತಾ |
ವರಶಿಶು ಯುಧಿಷ್ಠಿರಿನ ಜನನದಿಂದ || ೭೧

ಸುತನ ಶುಭಮುಖವಭೂ |
ಪತಿನಿರೀಕ್ಷಿಸೆ ಪೊಣ್ಮೆ |
ತತಿಶಯದ ಪುಳಕಂಗಳಂಗದಿಂದ ||

ಸತತಮುಂ ಪರಿವೃತಿಹ |
ವಿತತಸಂತೋಷವಂ |
ಕ್ಷಿತಿತಳದೊಳೆತ್ತಲುಂ ಚೆಲ್ಲಲೆಂದು ‖ ೭೦

ಕುಂತಿ ಸುತನಂಪಡೆದು |
ದಂತವಂ ಕೇಳ್ದು ಬಹು |
ಚಿಂತೆಯಿಂ ಗಾಂಧಾರಿನೊಂದು ತನಗೆ ‖
ಇಂತಾದುದೇ ಗರ್ಭ |
ಮೆಂತಹುದೊ ನೋಳ್ಪೆನೆಂ |
ದಂತರಿಸದಶ್ಮದಿಂ ಪೊಯ್ದುಕೊಳಲು ‖ ೭೩

ಪೇಶಿಬಿದ್ದೊಡನೆ ಪಾ |
ರಾಶರಿಯು ಬಂದುಕಂ |
ಡಾಶೋಣಿತಂ ಬೆರೆದಸತ್ತೋಕಶವಾ ‖
ಪೂಷಣಂತೊಳಗುವಾ |
ಕಾಶಗರ್ಭದಿನೊಗೆದ |
ಭಾಸುರಾಭ್ರದಲೇಖೆಗಾಣುವಂತೆ ‖ ೭೪

ಧೀರನಾಕೋಶವನು |
ನೂರುತುಂಡನೆಮಾಡಿ |
ಪೂರಿಸಿದ ತುಪ್ಪದೊಳ್ಗಡದೆತುಂಬಿ ‖
ವಿಾರಿಮಿಕ್ಕಿರ್ಪುದನು |
ಜಾರಿಸದೆ ಮೇಲಿರಿಸಿ |
ನಾರಿಗಿಂತೆಂದನೊಳ್ನುಡಿಗಳಿಂದ ‖ ೭೫

ಬಿಡುದುಕ್ಕವನೆ ತಂಗಿ |
ಕೊಡದಿಂದೆ ಪೊರವಟ್ಟು |
ಸಡೆಗರದೆಬಂದ ಪರ್ಮೆಯ್ಯಕೂಡಿ ‖

ಹುಡುಗರಾನೂರ್ವರುಂ |
ಕಡುಗಲಿಗರೊಮ್ಮಗಳು |
ಮೊಡನೆಜನಿಸುವರೆನ್ನ ನುಡಿತಪ್ಪದು || ೭೬

ಎಂದು ಸುರಿಮುನಿಮಾಯೆ |
ಯಿಂದೆ ಮರೆಯಾಗಲಾ |
ನಂದದಿಂ ಕಲಶವನುಪೊರೆದಳೊಲವಿಂ ||
ಗಾಂಧಾರಿಗೂಢದಿಂ |
ನಂದನರಪಡೆಯಲ್ಕೆ |
ಸಂದಪೆರ್ಬಾವುಪೊರೆವವೊಲಂಡವ || ೭೭

ಇನಿಯನಾದೇಶದಿಂ |
ದನಿಲನಂ ಕರೆದಳಾ |
ಘನಮಂತ್ರಬಲದಿಂದ ಕುಂತಿಯಂದು ||
ಮನದೊಲವಿನಿಂ ಬಂದು |
ವನಿತೆಯನು ಮುಟ್ಟಿದನು |
ವಿನುತಮಾಧವಿಲತೆಯ ನಂಟುವಂತೆ || ೭೮

ಅತ್ತಸರಿಯಲ್ಕರುತ |
ನಿತ್ತಬಸಿರಾಂತು ಸತಿ |
ಪೆತ್ತಳಾಶುಭದಿನದ ಲಗ್ನದಲ್ಲಿ ||
ಮತ್ತಕಾಶಿನಿ ಮುಗ್ನ |
ಪೆತ್ತವೋಲಂಜನೆ ಮ |
ರುತ್ತನುಜನಂತೆ ಕುಂತಿಯು ಭೀಮನಂ || ೭೯

ಗಂಧವಹನಾಗಲಾ |
ನಂದಾಶ್ರುವಂಕರೆದ |
ನಂದು ತರುಕುಟ್ಮ ಲಭ್ಫಲದೊಳೊಲಿದು ||

ಅಂದವನ ಕೆಳೆಯುನಾ |
ನಂದದಿಂ ವಹ್ನಿ ಕುಣಿ |
ವಂದದಿಂ ಜ್ವಲಿಸಿದನು ವೇದಿಗಳೊಳು || ೮೧

ಮರುತಸುತ ನುದಯವಾ |
ಸರದ ಮುನ್ನಿನ ಸಂಜೆ |
ಬರುವಂದು ಪುಟ್ಟಿದಂ ಕಲಶದಿಂದ ||
ವರ ಸುಯೋಧನನೆಂಬ |
ಗರುವಿಕೆಯು ಗುರುಸುಬಲ |
ಧರಣಿಪನ ತನುಜೆಗಾನಂದವಾಗೆ || ೮೨

ಅವನ ಜನ್ಮದ ಮಹೋ |
ತ್ಸವದ ತೂರ್ಯತ್ರಯದ |
ರವಮಡಂಗಿದುದು ಜಂಬುಕರವದೊಳು ||
ಭುವನದೊಳ್ಘೋರತರ |
ಶ್ರುವ ಮುಚ್ಚಿತಾ ಶೋಣಿ |
ತವರುಷಂ ವ್ಯೋಮದಿಂ ಕರೆವುತಂದು || ೮೩

ತದುಪರಿಯ ದಿನಗಳೊಳ |
ಗುದಿಸಿದರು ನೂರರೊಳು |
ಮದಮುಖರು ನೂರ್ವರಾ ಕುಂಭದಿಂದ ||
ಅದರೊಳೊರ್ವಳು ಚಂದ್ರ |
ವದನೆ ದುಶ್ಶಳೆಯೆಂಬ |
ಭಿಧೆಯಿಂದವರ್ಗೆ ಸೋದರಿಯೆನಿಸುತೆ || ೮೪

ತನುಜರುದಯಕೆ ಸುಬಲ |
ತನಯೆಯಾನಂದಿಸುತೆ |
ದಿನದಿನದೊಳೆಡವಿಡದೆ ಶೋಭಿಸಿದಳು ||

ವನಜ ಕರ್ಣಿಕೆ ದಳದ |
ಗಣನೆಯಿಂ ನೂರರಿಂ |
ತೊನೆದರಳುವಂತೆ ಕಾಂತಿಯ ತಳೆವುತೆ || ೮೫

ಪತಿಯಾಣವಿಸಲಾಗ |
ಪೃಥೆ ನೆನೆದಳಾದಿವ |
ಸ್ಪತಿಯನುರು ಮಂತ್ರಬಲದಿಂದ ಬಂದು ||
ಅತಿಪ್ರೀತಿಯಿಂ ದ್ವೀಪ |
ವತಿಯನಾ ದಿಗ್ದಂತಿ |
ಹಿತಗೊಳಿಸುವಂತೆ ಮೆಚ್ಚಿಸಿ ಸರಿದನು || ೮೬

ಬಳಿಕವಳ ಬಸಿರಲ್ಲಿ |
ಫಲುಗುಣದ ಮಾಸದೊಳು |
ಸಲುವ ಶುಭದುತ್ತರೆಯ ತಾರೆಯಲಿ ||
ಬಲಶಾಲಿ ಯರ್ಜುನಂ |
ಫಲುಗುಣಂ ತಾನೆನಿಸಿ |
ಬೆಳಗಿದಂ ಕೆಳೆಯಾಣ್ಮನಂತೆ ಪುಟ್ಟಿ || ೮೭

ಆಗ ಕಿತ್ತಡಿಗಳತಿ |
ರಾಗದಿಂದೈ ತಂದು |
ಕೂಗಿ ಕುಣಿದರು ವಾದ್ಯರವಗಳಿಂದ ||
ಬೇಗ ಮಂದಾರದ ಪ |
ರಾಗವನು ಮುಷ್ಟಿಯಲಿ |
ತೂಗಿ ಚಲ್ಲಿದರು ಪುರವಧುಗಳಲ್ಲಿ || ೮೮

ಅವನಿಪತಿ ಯಾಜ್ಞೆಯಿಂ |
ಯುವತಿಯಾ ಮಂತ್ರವನು |
ಸವತಿ ಗುಪದೇಶಿಸಿದಳಾ ಮಾದ್ರಿಗೆ ||

ಅವಳಾ ಶ್ವಿನೇಯರಿಂ |
ದವಳಿ ಮಕ್ಕಳ ಬಯಸಿ |
ಜವದೆ ಜಪಿಸಿದಳಂದು ಮಂತ್ರದಿಂದ || ೮೯

ದೇವ ವೈದ್ಯರು ತಾನ್ಯ |
ಪಾವ ರೋಧಕೆ ಬಂದು |
ಭೂವಿನುತ ಸುತರ ನಿರ್ವರ ನೀಯಲು ||
ಆ ವನಿತೆ ಪತ್ತು ಸಹ |
ದೇವನಂ ನಕುಲನು ಮ |
ನಾವೇಳೆಯಲ್ಲಿ ಸಂತಸಗೊಂಡಳು || ೯೦

ಸುರಕುಜಗಳಿಂ ಸಗ್ಗ |
ಮುರು ಪಂಚಬಾಣದಿಂ |
ಸ್ಮರನ ಬುಜಭವನು ಭೂತಂಗಳಿಂದೆ ||
ಪರಿಶೋಭಿಸುವ ತೆರದಿ |
ಮೆರೆದರಾ ಪಂಡುನೃಪ |
ವರತನಯರೈವರುಂ ಕೂಡಿ ಮುದದಿ || ೯೧

ಪೊರೆವ ದಾದಿಯ ಕೈಯ |
ಬೆರಳಪಿಡಿದೈವರುಂ |
ಸರಭಸದಿ ನಾಲಿಸದೆ ಚಾಟೂಕ್ತಿಯಿಂ ||
ವರ ಚಂಕ್ರಮಣದಿಂದೆ |
ತೆರಳುತಿರಲಂಘ್ರಿಗಳ್ |
ಮೆರೆದವುಟಜಾಂಗಣ ದೊಳೆಲ್ಲೆಲ್ಲಿಯುಂ || ೯೨

ಮುನಿವರರ ಲಾಲನೆ ಗ |
ಳನುದಿನಂ ಪೆರ್ಚುತಿರೆ |
ಜನಪಸುತರಾ ಧೂಳಿಕೇಳಿಯಲ್ಲಿ ||

ಬನದಿ ಕಲಭಗಳಂತೆ |
ಯಿನಿಸುಮಂಜದೆ ಶೆಳೆವ |
ರನಯದಿಂ ಕೇಸರಿಯ ಕೇಸರಗಳ || ೯೩

ವೇದಪಾರಗದಿಂದ |
ಲೋದುಗಳ ನಭ್ಯಾಸಿಸಿ |
ಸಾದರದೊಳುಪನೀತರಾದರವರು ||
ಮೋದದಿಂ ಭಾರತಿ ವಿ |
ನೋದಿಸುತಲಿರ್ದಳಾ |
ಬೋಧಕರ್ಪೂರಗಳ್ವಂತೆ ಪಾಂಡವರೊಳು || ೯೪

ಹರೆಯಮೈತಂದಲಂ |
ಕರಿಸಿದುದು ತನುಗಳಲಿ |
ತರಳರ್ಗನುಕ್ರಮದೆ ದಿನದಿನದೊಳು ||
ಸರಸಿಜಂಗಳೆ ಮಧು |
ಕರನೈದಿ ಲೋಕಕ್ಕೆ |
ಪರಿಮಳವ ಬೀರುವಂದದಿ ಪೊಸತೆನೆ || ೯೫

ತೋಳು ಬಲಿದುದು ನೆರೆ ವಿ |
ಶಾಲಮಾದತ್ತೆರ್ದೆಯು |
ಬಾಲರ್ಗೆ ಜವ್ವನಂ ದೋರಲಾಗ ||
ಆಲೋಚನಂ ಸ್ನಿಗ್ಧ |
ಲೀಲೆಯಿಂದೊಪ್ಪೆ ದನಿ |
ಯಾಲಿಪೊಡೆ ಮಂದ್ರವೃತ್ತಿಯಿನೆಸೆದುದು || ೯೬

ಬಂದುದಾ ಮಧುಮಾಸ |
ವಂದದಿಂ ಮನಸಿಜನ |
ಗಂಧ ಹಸ್ತಿಗೆ ಮದವ ಪೆರ್ಚಿಪಂತೆ ||

ಸಂದ ಕುಹುಮುಖಕೆ ಸಾ |
ನಂದವನು ತೋರುತ್ತೆ |
ಚಂದದಿಂ ಬನದೊಳಿಯೊಳ್ಬಳೆವುತೆ || ೯೭

ಮರುತನಿಂದೆದ್ದ ಮಾ |
ಮರದರೇಣುವುಮೆಸೆವ |
ವರವ ಸಂತಾಗಮದ ವಸನಧೂಳಿ ||
ಸ್ಮರನೆಂಬ ಮಾಂತ್ರಿಕನ |
ವಿರಹಮೋಹನ ಚೂರ್ಣ |
ದಿರವೆನಲ್ಮೆರೆದುವಾ ಮಧುಮಾಸದಿ || ೯೮

ಲತೆಗಳೆಲ್ಲಕ್ಕೆ ಸುಮ |
ತತಿಯನೊದವಿಸುವಾ |
ಸಿತಮೆನಿಸಿದಿಕ್ಕುಗಳನಾ ವಸಂತಂ ||
ವಿತತ ಪರಿಮಳದ ಮೂ ||
ಲತಿಗೆ ಪೂಗುಡದಿಹುದು |
ಕ್ಷಿತಿಯೊಳಾಪೂರ್ಣ ಸಂಪದದೆನಿಪರು || ೯೯

ಅನಿಲನಿಂ ಪರಿತಂದ |
ವನದ ಶೋಕದ ಸುಮದ |
ಘನರೇಣುವೆಸೆದುದಾ ಮಧುಮಾಸದಿ ||
ಮುನಿದು ವಿರಹಿಗಳಲ್ಲಿ |
ಮನಸಿಜಂಪೂಣ್ದಿಚ್ಛೆ |
ವಿನುತದಾಗ್ನೆಯಾಸ್ತ್ರದಂದದಿಂದ || ೧೦೦

ಬಳಿಕಲಾಂತೆ ಗಾಳಿ ||
ಗೊಳಗಾಗಿ ಯಮದೂತ |
ರೆಳೆವಂತೆ ಮನವ ಸೆಳೆಯಲ್ಕೆ ಪಾಂಡು ||

ಕಳೆಯಾಂತು ಸುರಭಿಯಂ |
ಲಲನೆ ಮಾದ್ರಿಯು ಕೂಡಿ |
ತೊಳಲಿದಂಬನ ದೊಳಾನಂದದಿಂದ || ೧೦೧

ಅರಸನೊಳಪೊಕ್ಕನಾ |
ವರಸುಮ ಸುಗಂಧದಿಂ |
ಮೆರೆವ ಮಾಧವಿಯ ಮಂಟಪವನಾಗ ||
ಸ್ಮರತಾಪದಿಂ ನೊಂದು |
ಬರೆಸೆಳೆದನಾ ಸತಿಯ |
ಕರವ ಮುನಿಶಾಪದಿಂ ನಡುಗುತಿರಲು || ೧೦೨

ಜನಪನವನೊಳಗೂಡಿ |
ವಿನುತರತಿಕೇಳಿಯೊಳ್ |
ತನುವಮರೆದಕ್ಷಿಗಳ ಮುಚ್ಚಿಕೊಂಡು ||
ಚಣದೊಳೊರಗಿದನಲ್ಲಿ |
ಮನಸಿಜಾಸ್ತ್ರವ ಪೋಲ್ವ |
ಘನಪುಷ್ಪಶಯ್ಯೆಯೊಳಗಚ್ಚರಿಯನೆ || ೧೦೩

ಪತಿಯಮರಣವ ಕಂಡು |
ಗತಿಗಾಣದಾ ಮಾದ್ರಿ |
ಮತಿಗೆಟ್ಟು ವಸ್ತ್ರದಿಂ ಪೊದಿಸಿಯವನ ||
ಕ್ಷಿತಿಯೊ ಳ್ಪೊರಳ್ದಾಗ |
ವಿತತಭಯಶೋಕದು |
ನ್ನತಿಯೊಳೆಚ್ಚರದಪ್ಪಿ ಗೋಳಿಟ್ಟಳು || ೧೦೪

ಕೇಳಿಕುಂತೀದೇವಿ |
ಗೋಳಿಡುವ ಶಬ್ದವನು |
ಪೇಳಿಮುನಿಗಳ ಸುತರ ಕೂಡಿಕೊಂಡು ||

ಕಾಲವಶನಾದ ಭೂ |
ಪಾಲ ನೆಡೆಗೈತಂದು |
ನಾಲಗೆಗಳೊಣಗೆ ತಾಂರೋದಿಸಿದಳು ‖ ೧೦೫

ನಡುಗುತಲೆ ಕೈಯಿಂದ |
ಪೊಡೆಯ ಪೊಯ್ದುಕೊಳುತ್ತೆ |
ಮಡದಿ ಕಣ್ಮುಚ್ಚಿ ಗೋಳಿಡುತಿರ್ದಳು ‖
ಒಡನೆಮಕ್ಕಳು ಕೂಡಿ |
ಮಡದಿ ಪತಿಯಂ ನೋಡಿ |
ಕೆಡೆದಳಲ್ದಳು ಮೇಲೆ ಬಿದ್ದುಬಿದ್ದು ‖ ೧೦೬

ಕುಂತಿ ತನುಜರ್ಕಳಿಂ |
ಚಿಂತಿಸುತ್ತಿರೆ ಕಂಡು |
ಸಂತೈಸಿದದು ಮೌನಿನಿಕರವಾಗ ‖
ಮುಂತೋರದಾ ಮಾದ್ರಿ |
ಕುಂತಿಯೆಡೆಗಳ್ಗರಗು |
ತಿಂತೆಂದಳಶ್ರುಜಾಲವನೆ ತೊಡೆದು ‖ ೧೦೭

ತನ್ನಕೂಡುತ್ತೆ ಮನ |
ದನ್ನನೆಯ್ದಿದ ನೀಗ |
ಸನ್ನುತದ ಸಗ್ಗಕುಳಿದೆನ್ನನಕ್ಕಾ ‖
ಇನ್ನಿರನು ಚರಣಮುಮಿ |
ದೆನ್ನಕಳುಹೌ ಸಾಧ್ವಿ |
ಮನ್ನಿಸುತೆಸಲಹುನೀಂ ಸುತರನಿಲ್ಲಿ ‖ ೧೦೮

ಅವಳಿ ಮಕ್ಕಳ ತನ್ನ |
ಸವತಿಕೈಯೊಳಗಿರಿಸಿ |
ಸವಿನಯದಿ ಮುಂದಿರ್ಪ ಕಜ್ಜಮುಸುರಿ ‖

ಯುವತಿ ಸಹಗಮನದೊಳು |
ಸುಹಿವಿತದಿಮನವಿಟ್ಟು |
ಜನನಾಲಯಕೆಗಮಿಸಲನುವಾದಳು || ೧೦೯

ಅಪರಕರ್ಮಗಳ ಕ |
ಶ್ಯಪಮುಖ್ಯ ರೊಡಗೂಡಿ |
ಸುಪವಿತ್ರಮೆನೆನೆಗಳ್ಚಿದರು ಕ್ರಮದೆ ||
ಕಪಟಮಿಲ್ಲದೆಮಾದ್ರಿ |
ತಪಸಿಗಳಿಗೆರಗಿತಾಂ |
ನೃಪನಚಿತಿಯಗ್ನಿಯೊಳ್ಕೆಡೆವಳಿವಳು || ೧೧೦

ಸತಿಸಹಿತಲಾಗ ಭೂ |
ಪತಿಯೌರ್ಧ್ವದೇಹಿಕವ |
ನತಿಶಯದೆ ನೆಗಳಿಸಿದರಾ ಮುನಿಗಳು ||
ಪೃಥೆಯು ಸಂತವಿಸುತ್ತ ||
ಸುತರೊಡನೆ ಕರೆತಂದು |
ಹಿತದಿಂದ ಬಿಟ್ಟರಿಭಪುರಿಯೊಳವರು || ೧೧೧

ಅನುಜನಳಿಮುದಕೇಳ್ದು |
ಮನದಳಲಿ ನಂಥನಾ |
ತನಯುರಂ ಲಾಲಿಸುತ ಮರೆದನಂದು ||
ವಿನಯುದಿಂದೆ ಪಿತೃವ್ಯ |
ನನು ಕಂಡು ಪಾಂಡವರು |
ಘನಶೋಕವಂ ಮರೆದು ಸೊಗಮಿರ್ದರು || ೧೧೨

ಮಕ್ಕಳೆಲ್ಲರುಕೂಡಿ |
ಚಿಕ್ಕಂದಿನಾಟಗಳ |
ನಕ್ಕರೆಯೊಳಾಡುತಿರೆ ಮಳಲಿನಲ್ಲಿ ||
ಕಕ್ಕಸದಿಕಾರವರ |
ನೊಕ್ಕಲಿಕ್ಕುತೆ ಭೀಮ |
ಮಿಕ್ಕನಾ ಪಾವ್ಪಿಡಿವ ಗರುಡನಂತೆ ೧೧೩

ಮೂರನೆಯ ಸಂಧಿ.

॥ ಶರಷಟ್ಪದಿ ॥

ಪೌರವರೊಂದಿನ |
ನೀರೊಳಗಾಡಲು |
ಸಾರಿದರಾಗಂಗೆಗೆ ಮುದದಿ ||
ಧೀರರುಣಿಸನುಂ |
ಡಾರುತೆತಟನಿಯ |
ತೀರದೊಳಿರ್ದರು ಸುಖದಿಂದ || ॥ ೧ ॥

ಜಲದೆವಿಹರಿಸಿ |
ರ್ದಲಸಿಕೆಯಿಂದಲಿ |
ಮಲಗಿಯೆನಿದ್ರಿಸಲಾಭೀಮಂ ||
ಜಲಧಿಯ ಕಡೆಯಿಂ |
ದೆಳಗಾಳಿಯುತಾಂ |
ಚಲಿಸುತೆ ಬೀಸಿದುದಾದಡದೊಳ್ || ॥ ೨ ॥

ಬಂದು ಸುಯೋಧನ |
ನಂದಾಭೀಮನ |
ಬಂಧಿಸಿ ಬಳ್ಳಿಗಳಿಂದಾಗಳ್ ||
ಇಂದಿರ ಬಿಗಿದಾ |
ಮಂದರದಂದದೆ |
ಸಿಂಧುವ ಮಡುವೊಳ್ಕೆಡಹಿಸಿದಂ || ॥ ೩ ॥

ಅನಿತರೊಳಾ ಬಂ |
ಧನಗಳ ಸಳೆಯುತೆ |
ಪುನರಪಿ ನಿದ್ರಿಸೆ ಮರುತಸುತಂ ||
ಮನದಲಿ ಚಿಂತಿಸಿ |
ಘನವಿಷದಹಿಗಳ |
ನನುವಿಂಕರ್ಚಿಸಿದನು ಖಳನು || ॥ ೪ ॥

ಮೆರೆವ ಪಲ್ಗಳಿಂ |
ಗರಳವಕಾರುತ |
ಉರಗಂಗಳ್ಮರ್ಮಸ್ಥಳವ ||
ತೆರಳಿಯೆ ಕರ್ಚಲು |
ಮರುತಜನವುಗಳ |
ನೊರಸಿದ ತಗುಣಿಯು ನೊರಸುವವ್ರೊಲ್ || ॥ ೫ ॥

ಬದುಕಿದ ನಿವನೆಂ |
ದೆದೆಮುರಿಯುತೆ ತಾಂ |
ಸದಮಳದನ್ನದೆ ಗರಳವನು ||
ಪುದುಗಿಸಿ ಯುಣಿಸಲು |
ಬೆದರದೆ ತಿಂದಾ |
ಮದದಿಂದೊರಗಿದನಾ ಭೀಮ || ॥ ೬ ॥

ಮೀರಿದ ಗರಳದ |
ಭಾರದೆ ಮೆರೆದಿರೆ |
ಭಾರಿಯ ಶೂಲದೆ ಬಿಗಿವವನ ||
ಪಾರುವ ಗಂಗೆಯ |
ನೀರೊಳ್ಕೆಡಹಿಸಿ |
ಸಾರಿದ ಕುರುಪತಿ ಪುರಕಾಗ || ॥ ೭ ॥

ಶೈಲದ ತೆರದಿಂ |
ಶೂಲಂ ಬೆರಸಿಯೆ |
ಬೀಳಲು ನೀರೊಳ್ಪವನಜನು ||
ವ್ಯಾಳಗಳಾ ಪಾ |
ತಾಳಕ್ಕೊಯ್ದುವು |
ಲೀಲೆಯೊಳಾಗಳೆ ಭರದಿಂದ || || ೮ ||

ಪಾವಿನ ಮರಿಗ |
ಳ್ಪಾವಮಾನಿಯನು |
ಭಾವಿಸಿ ನೋಡಿದುವಳ್ಕಜದಿಂ ||
ಆವೇಳೆಯೊಳಾ |
ಸ್ಥಾವರ ವಿಷದೊಡ |
ನಾವಿಷಜಂಗಮವುಂ ಬೆರೆದು || || ೯ ||

ಸ್ಮರಣೆಯ ನೊಂದುತೆ |
ಪರಿಯುತೆ ಬಂಧವ |
ಮರುತಜನೇಳಲ್ವಿಷಮಿಳದು ||
ಭರದಿಂ ವಾಸುಕಿ |
ಪರಿಕಿಸಿ ನಿಜವಂ |
ದಿರಕೊಯ್ದನು ನಲವಿಂದವನ || || ೧೦ ||

ಆಶುಗನಿಗೆ ಹಿತ |
ಮಾಶಿಸಿ ಕುಡಿಸಿದ |
ವಾಸುಕಿ ದಶಕುಂಭದ ರಸವ ||
ಲೇಸಿಂದೀಂಟಲು |
ಸಾಸಿರದಾನೆಯ |
ವಾಸಿಯ ಬಲವೊದವಿದುದವಗೆ || || ೧೧ ||

ತಣಿದಾ ಮಾರುತಿ ।
ದಿನವೆಂಟೆಣಿಸುತ ।
ಫಣಿಲೋಕದೊಳಾನಂದದೊಳು ॥
ಧುನಿಯೊಳಗಿಹ ಜೀ ।
ವನವನೆ ಕುಡಿದಾ ।
ಘನದಂದದಿ ತಾಂ ರಾಜಿಸಿದ ॥ ॥ ೧೦ ॥

ಮಾರುತ ಸುತನಂ ।
ನೀರೊಳ್ಮುಳುಗಿಸಿ ।
ಕೌರವನಾಸೌಬಲನೊಡನೆ ।
ಮೀರಿದ ಹರುಷದೊ ॥
ಳೂರನೆ ಸಾರ್ದನು ।
ಪೌರಜನಂಗಳ ಜಯರವದಿ ॥ ॥ ೧೨ ॥

ಅರಸು ಮಕ್ಕಳೊಡ ।
ನಿರದಿರೆ ಮಾರುತಿ ।
ಕರಕರೆಗೊಳುತಾಯದುಜಾತೆ ॥
ಅರಸುತಲಿರ್ದಳು ।
ಕರಿಕಲಭದವೊಲು ।
ಚರಿಸುತ ಗಿರಿತರುಸರಸಿಯಲಿ ॥ ॥ ೧೪ ॥

ಮಡಿದನು ಭೀಮಂ ।
ಪೊಡವಿಪ ಸುತನಿಂ ।
ದೃಢಮೆನೆ ವಿದುರಂ ಸಂತವಿಸಿ ॥
ಬಿಡು ಸಟೆಯೆಂದೊ ।
ಳ್ನುಡಿಗಳ ಪೇಳಲು ।
ತಡೆದಳು ಚಿಂತೆಯನಾಮಡದಿ ॥ ॥ ೧೫ ॥

ಬಂದನು ಮಾರುತಿ |
ಯುಂದೊಂಭತ್ತರ |
ಸಂದಪಗಲೊಳತಿಬಲವಾಂತು ||
ಮುಂದು ರಸಾತಲ |
ದಿಂದ ಭೋಗಿಗಳು |
ಚಂದದಿ ಪೊತ್ತೈತರಲಿಳೆಗೆ || || ೧೬ ||

ಪೊತ್ತ ಸರ್ಪಗಳಿ |
ಗಿತ್ತಾಣತಿಯುಮ |
ರುತ್ತನುಜಂ ಬಂದನು ಪುರಿಗೆ ||
ಇತ್ತನದ್ಭುತವ |
ಪತ್ತನ ಜನರಿಗೆ |
ಮತ್ತುಳಿದರ್ಗಾನಂದವನು || || ೧೭ ||

ಗೌತಮ ಸುತನನು |
ಪ್ರೀತಿಯೊಳರಿಸಿದ |
ನಾತಟನೀಸುತಗುರುವೆನಿಸಿ ||
ಈ ತನೂಜರಿಗೆ |
ನೀತಿಯೊಳರುಹಲು |
ಚಾತುರಿಯುದ ಧನುರಾಗಮವ || || ೧೮ ||

ನೃಪಸುತರೆಲ್ಲರು |
ಕೃಪನಿಂಕಲಿಯುತೆ |
ಚಪಲತೆಗೊಳುತಿರಲಾಭೀಷ್ಮಂ |
ನಿಪುಣನಾರು ಕಾ |
ಶ್ಯಪಿಯೊಳೆನುತ್ತಲಿ |
ಸುಪವಿತ್ರಾತ್ಮನ ನರಸಿದನು || || ೧೯ ||

ದ್ರೋಣನೆಸಿಪ್ಪ |
ಜಾಣಂಭಾರ್ಗವ |
ನಾಣತಿಯಿಂ ಸಕಲಾಸ್ತ್ರಗಳ ||
ತ್ರಾಣವ ಬಲ್ಲಂ |
ಕ್ಷೋಣಿಯೊಳೆನುತಂ |
ಜಾನಿಸುತಿರಲವನೇಳ್ತಂದಂ || || ೨೦ ||

ಎಳೆಯಳ್ಪಂಡಿತಿ |
ಕಳೆವೊಲ್ತನ್ನಯ |
ಬಳಿಯೊಳು ನಡೆತರೆ ಮುದದಿಂದ ||
ಕಳಶಜನೈತಂ |
ದೊಳುನುಡಿಯಿಂ ಕುರು |
ತಿಳಕನೊಳೆಂದನು ಸಭೆಗೆಯ್ದಿ | || ೨೧ ||

ಎಳವೆಯೊಳೆನ್ನಯ |
ಕೆಳೆಯಂದ್ರುಪದಂ |
ಬಳಸಿಸೇವಿಸುತೆ ಮುನಿವರನ ||
ಕಲಿಯುತಲಸ್ತ್ರಂ |
ಗಳವಿದ್ಯೆಯನಿರೆ |
ನಲಿದಿಂತೆಂದಂ ಸಖನೆನ್ನೊಳ್ || || ೨೨ ||

ಎನ್ನಯ ಜನಕಂ |
ಮನ್ನಿಪನಮಹಿ ತಾ |
ನಿನ್ನು ಬಂದಪುದು ಮುಂದೆನಗೆ ||
ಸನ್ನುತಮತಿಕೇಳ್ |
ಮನ್ನಣೆಯಿಂ ನಿನ |
ಗಿನ್ನೀವೆಂ ನೆಲದರ್ಧವನು || || ೨೩ ||

ಸೋಮಕನೆಂಬವ |
ಭೂಮಿಯನಾಳು |
ತ್ತಾ ಮಾವೈಭವದಿಂದಿರಲು ||
ಕಾಮಿಸಿ ನಡೆತಂ |
ದಾಮಹಿಪಾಲನ |
ಸೀಮೆಯೊಳಿರಲಾನೇಳ್ತಂದೆಂ || ‖ ೧೪ ‖

ತನುಜಂ ಪಾಲ್ಗುಡಿ |
ವೆನು ಕುಡುತನಗೆಂ |
ದೆನಲಕ್ಕಿಯ ತಿಳಿನೀರ್ಗೊಟ್ಟು ||
ಮನದ ದುಗುಡದಿಂ |
ವನಿತೆ ದುಃಖಿಸುತೆ |
ಜನಪನಯಾಚಿಸಲಟ್ಟಿದಳು || ‖ ೧೫ ‖

ಕೇಳುತೆ ನಾಂ ಭೂ |
ಪಾಲನ ಯಾಚಿಸಿ |
ಪಾಲಿಗೆ ತುರುವೊಂದನು ತರಲು ||
ಓಲಗಶಾಲೆಗೆ |
ಲೀಲೆಯೊಳೆಯ್ದಿದೆ |
ಕೇಳ್ಕುಟುಂಬ ರಕ್ಷಣೆ ಕಷ್ಟಂ || ‖ ೧೬ ‖

ದ್ರುಪದನಸನಿಯಕೆ |
ನೃಪತಾನೆಯ್ದಿಯೆ |
ಚಪಳದಿ ಮುನ್ನಿನ ಕೆಳೆಯರುಹೆ ||
ಉಪಹಾಸದೊಳತಿ |
ಕುಪಿತನಾಗಿ ತನ !
ಗಪಮಾನದನುಡಿಯಾಡಿದನು || ‖ ೧೭ ‖

ಪೌರುವನೀನಾಂ |
ಧೀರಭೂಮಿಪತಿ |
ಸೇರುವುದೇಕೆಳೆತನ ವೆಮಗೆ ||
ತೋರುವಕಾಚವು |
ದೋರಗೆಯಹುದೇ |
ಸಾರರತ್ನದೊಳು ಮೂಢಾತ್ಮ || ೧೮ ||

ಇಂತವಮತಿಸಲು |
ಚಿಂತಿಸಿ ಬಂಪೆನು |
ಸಂತ ನಿನ್ನಬಳಿಗಿವರೊಡನೆ ||
ಎಂತಾದೊಡಮೆ |
ನ್ನಂತಶ್ಚಿಂತೆಯ |
ಪಂತಮುಳಿದು ಕಳೆವುದು ಜನಪಾ || || ೧೯ ||

ಎನಲದನಾಲಿಸಿ |
ಘನಪರಿತೋಷದಿ |
ಸನುಮತಿಸುತ ಕುರುವರನಾಗ ||
ಧನವಸನವ ವಾ
ಹನಗಳ ನೀಯುತ |
ಲನಘುಗೊಪ್ಪಿಸಿದ ಪೌತ್ರರನು || || ೨೦ ||

ಅರಸುಕುಮಾರರು |
ವರಧನುರಾಗವು |
ವರಿಯುತೆ ಸೇವಿಸಿ ಕಳಸಜನ ||
ಜರೆದು ದರ್ಪದಿಂ |
ಪರಿಶೋಭಿಸಿದರು |
ಸರಿಯುಲ್ಲಾರುಂತಮಗೆನಿಸಿ || || ೨೧ ||

ಅವರೊಳರ್ಜುನನೆ |
ಸುವಿನಯಗುಣದಿಂ |
ತವೆಮೆಚ್ಚಿಸಿದನು ಗುರುವರನ ||
ಕುವರರ ತಂಡದೊ |
ಳವನೆ ಜಾಣನೆಂ |
ದವನನನುದಿನಂ ಮೆಚ್ಚಿದನು || ೨೧

ಕಳಶಜನಾಣತಿ |
ತಳೆದಸ್ತ್ರಂಗಳ |
ಬಲವನೇಕಲವನರಿಯುತಿರೆ ||
ಸಲುವ ದಕ್ಷಿಣಾಂ |
ಗುಳಿಯನೆ ದಕ್ಷಿಣೆ |
ಗೊಳುತೆನರಗೆ ಸರಿಯೆನ್ನಿಸಿದ || ೨೨

ಗುರುವಾಮುರದೊಳು |
ಗುರಿಯನಿರಿಸಿತಾಂ |
ನರನಿಗೆವೋಽಸಂಗೆಯ್ದಿರಲು ||
ಸುರಪಕುಮಾರಕ |
ನರಿತದನುರುಮು |
ತ್ಸರಮಿನಿಸಿಲ್ಲದೆ ವರ್ತಿಸಿದಂ || ೨೪

ಸೀರೊಳಿಳಿಯಲವ |
ಹಾರವೊಂದು ಬಂ |
ದಾರುತೆ ಪಿಡಿದುದು ಕುಂಭಜನ ||
ಧೀರನರನು ಸಂ |
ಹಾರಂಗೆಯ್ದುದ |
ವಿಾರಿದ ದಿವ್ಯಾಸ್ತ್ರವಪಡೆದ || ೨೫

ಬಲವನಸ್ತ್ರಕಾ |
ಶಲದೊಳುಪರಿಕಿಸೆ |
ನೆಲನೆಂದನುನಿರ್ಮಿಸುತಲ್ಲಿ ||
ನಲವಿನೊಳಾ ಕುರು |
ತಿಳಕರಕೂಡಿಸಿ |
ಘುಳಿಲನೆಬಂದನು ಗುರುವಾಗ || ೨೬

ಪೌರರು ಮೊಪ್ಪುವ |
ಧಾರಿಣಿವರರುಂ |
ಸೇರಿದರೊಪ್ಪುವ ಮಂಚಗಳ ||
ಆ ರಂಗಸ್ಥಳ |
ತೋರಿದುದಮರ |
ಸೇರಿದಸುವಿಮಾನದ ತೆರವೆ || ೨೭

ಗುರುಕೃಪಮೊದಲಾ |
ದರು ನೋಡುತ್ತಿರೆ |
ವರಕಾರ್ಮುಕಗಳ ಧರಿಸುತ್ತ ||
ತರಳರ್ಬಾಣದಿ |
ಗುರಿಗಳನೆಚ್ಚ |
ಚ್ಚರಿಗೊಳಿಸಿದರಾಪ್ರೇಕ್ಷಕರ || ೨೮

ಕೆಲರಾಯುಧಗಳ |
ಕೆಲರುಖಡ್ಗಗಳ |
ಕೆಲರುಳಿದಾಯುಧಸಾಧನೆಯ ||
ಕೆಲರಿಭತುರಗಂ |
ಗಳಪರಿಚರ್ಯದ |
ಬಲುಮೆಯ ತೋರ್ದರು ಪಿರಿದಾಗಿ || ೨೯

ಮರುತಸುತನು ಮಾ |
ಕುರುಪತಿಯುಂ ಬಂ |
ದರುವರಗದೆಗಳಪಿಡಿಯುತಲಿ ||
ಮೆರೆವದಂತಿಗ |
ಳ್ತುರುಗಳಪಿಡಿದೈ |
ತರುವಂದದಿ ರಂಗಸ್ಥಳಕೆ || ೪೦

ಮುಳಿದುಗದೆಗಳಿಂ |
ನೆಲದುಳಿಯುತೆ ಮಂ |
ಡಲದಂದದಿ ಸುತ್ತುತಲಿ ||
ಬಲುಗಾಳಗದೊಳು |
ಚಲವತೋರುತಿರೆ |
ನಿಲಿಸಿದನಾಗುರುವಿರ್ವರನು || ೪೧

ಬಂದನು ಫಲುಗುಣ |
ನಂದಾಕುಂಭಜ |
ನಿಂದನುಜ್ಞೆಪಡೆದೆರಗುತ್ತ ||
ಕುಂದದ ಕವಚವ |
ನಂದದಿ ತೊಟ್ಟು |
ನಂದದಿ ಬಿಲ್ವತ್ತಳಿಕೆಗಳಿಂ || ೪೨

ತೋರಿದನನಲನ |
ವಾರಿಧರನ ಮೋಹ |
ವಾರಣಸಂಚಾಸ್ತ್ರ್ಯಸ್ತ್ರಗಳ ||
ವಿಾರಿದ ಭುಜಗವ |
ಗಾರುಡವಸುತಮು |
ಸೌರಾಸ್ತ್ರಂಗಳ ಪ್ರಕಟಿಸುತ || ೪೩

ಅಲ್ಲಗೆ ನಡೆತಂ |
ದೆಲ್ಲರುನೋಡಲು |
ಘುಲ್ಲರವಿಜನತಿ ಸಂಭ್ರಮದಿ ||
ಬಿಲ್ಲಾಳುಗಳೊ |
ಳ್ಬಲ್ಲಿದನಹುದೆಂ |
ಬುಲ್ಲಸದಿಂದಾರ್ಭಟಿಸಿದನು || ೪೪

ದ್ರೋಣನನರ್ಚಿಸಿ |
ಜಾಣಿಂಬಿಲ್ಲೊಳು |
ಬಾಣವತೊಡಿಸಿಯೆ ಛಲದಿಂದ ||
ತ್ರಾಣದೊಳಿಂದ್ರನ |
ಸೂನುವನೆಚ್ಚನು |
ಕಾಣುತೆ ಬೆರಗಾಗಲು ಸಭೆಕರ್ || ೪೫

ಇನಜನಬಿಲ್ಲಾ |
ಳ್ತನವನು ಕಂಡಾ |
ಜನರೆಲ್ಲರ್ವಿಸ್ಮಯವಡಲು ||
ಮನದೊಳೆಲಜ್ಜಿಸಿ |
ದನುನರನಾಗಳೆ |
ಜನಸಸುಯೋಧನ ಹರುಷಿಸಿದ || ೪೬

ದ್ವಂದ್ವಯುದ್ಧವನು |
ಚಂದದಿ ಮಾಳ್ಪೆನು |
ಕುಂದದೆನರನೊಳ್ತಾನೆನಲು ||
ಇಂದು ತನಗೆಹಿತ |
ವೊಂದುವುದೆನುತಾ |
ನಂದದೊಳಾಳ್ದನು ಕುರುರಾಯ || ೪೭

ಪಗೆಯುಸಾಹಸವ |
ಬಗೆಯುದೆ ಮರುಳಿಂ |
ಬಗುಳುವವನುನುಜನಗತಿಯಂತೆ ||
ನಗೆಗೆಡೆಯಾಗುವೆ |
ತೆಗೆತೆಗೆಯೆನುತಲಿ |
ಪಗೆಯನುಜರಿದನು ಫಲುಗುಣನು || ೪೮

ಸಾಕೆಲವ್ರೋತೆಗೆ |
ಯೇಕೆಜಲ್ಪಿಸುವೆ |
ಯಿಾಕೂರಲಗಿಮಸ್ತಕವ ||
ನೂಕಿ ಕೆಡಹುವೆನು |
ಜೋಕೆಯೆನುತಲಾ !
ಪಾಕಶಾಸನಿಯುನಿದಿರಿಸಿದ || ೪೯

ಗೌತಮವರನೀ |
ವಾತನಾಲಿಸಿಯೆ |
ಚಾತುರಿಯದನುಡಿಯಿಂದೆಂದ ||
ಸೂತಪುತ್ರನೀಂ |
ಖ್ಯಾತೆರಾಜರೊಳ ||
ಗೇತರಸಲುಗೆಯೊ ಸಲ್ಲದಿದು || ೫೦

ಕುರುಪತಿಯಾಗ |
ಳ್ಗುರುವ್ರೊಳೆನುಡಿದನು |
ಸರಿಯೆನಿಸಿದು ನಿನ್ನೀವಾತು ||
ವರಬಲಶಾಲಿಗೆ |
ಧರೆಯೊಳುಹೀನವೆ |
ಪರಿಕಿಸೆ ಜನ್ಮಸ್ಥಳದಿಂದ ೫೧

ಉದುಭವಿಸಿದನಾ |
ಪದುಮನಾಭಮು |
ನ್ನೊದೆದ ಕಂಭದೊಳುನೀನರಿಯಾ ||
ಅದರಿಂದೇಂನಿ |
ಮ್ಮುದಯುವಚಿಂತಿಸು |
ವುದು ಶರಕುಂಭಂಗಳೊಳಲ್ತು || ೫೦

ಎಂದಲ್ಲಿಯೆಸಾ |
ಸಂದದಿ ಸಕಲ |
ರ್ನಿಂದೀಕ್ಷಿಸುತಿರೆ ಪೊಂಗೊಡದಿಂ ||
ಸಿಂಧುವನೀರನೆ |
ತಂದಭಿಷೇಕಿಸಿ |
ಕುಂದದಂಗದೇಶವನಿತ್ತು || ೫೭

ಇನಸುತನಾನಾ |
ಡನುಪಡೆದತಿಮುದ |
ವನೆ ತಳೆದಂಕುರುಭೂಪತಿಯುಂ ||
ಇನಜನನೇಹದ |
ಘನತೆಯಿಂದೆ ಪರಿ |
ಗಣಿಸದೆಪಾರ್ಥರಗರ್ವಿಸಿದ || ೫೪

ಕುರುಪಾಂಡುಜರಾ |
ಶರಶರಾಸನದ |
ವರವೇದದೆಪರಿಣತರಾಗೆ ||
ಗುರುವೆ ಬೇಡಿದನು |
ಗುರುದಕ್ಷಿಣೆಗಾ |
ನರಪಪಾರ್ಷತನ ತಹುದೆಂದು || ೫೫

ಬಿಡದೆ ರಥಂಗಳ |
ನಡರುತೆಬಿಲ್ಗೊಂ |
ಡೊಡನೆಯೆ ಪೊರಮಡಲಾಸುತರು ||
ಪೊಡೆವವಾದ್ಯಗಳ |
ಗಡಣಂಧೂಳಿಯು |
ಮಡರುತೆ ಸಭವಂ ಮುಚ್ಚಿದುವು || ೫೬

ಕಳಶಜನಾಣತಿ |
ತಳೆದಾಸೇನೆಯು |
ಬಳಸಿಮುತ್ತಿದುದು ಪುರವರವ ||
ಜಳಧರಮಾಲೆಯು |
ತೊಳಲುವನಿಲನಿಂ |
ಬಳಸಿಮೇರುವನು ಮುತ್ತುವವೊಲ್ || ೫೭

ಕುರುಬಲಮೆಂಬಾ |
ಕರಿಗಳಬೃಂಹಿತ |
ಮಿರದೊದರಲ್ಪಾರ್ಷದಸೇನೆ ||
ಬೆರೆಯುತೆ ಪುರದಿಂ |
ಪೊರಮಟ್ಟುದು ಕೇ |
ಸರಿಯು ಬಳಗದಂತಾರ್ಭಟಿಸಿ || ೫೮

ಸೋಮಕಕುರುಗಳ |
ತಾಮಸಕದನದೆ |
ಭೀಮಾನುಜನುರುಬಲಮೆಂಬ ||
ಆಮ್ನಾಯಕೆರಣ |
ಭೂಮಿಯೆ ಪ್ರಾಣಾ |
ಯಮಮಮದಾದುದು ಜನಮರಿಯೆ || ೫೯

ಕೌರವವೀರರ |
ನೂರ್ವರನರನಾ |
ಧರಿಣಿಯೊಳ್ಸೋಲಿಸೆ ದ್ರುಪದಂ ||
ಕಾರುವನೆತ್ತರ |
ಧಾರೆಯುನವನಿಗೆ |
ಸಾರಣೆಗೆಯ್ಸಿದ ವೇಗದಲಿ || ೬೦

ಸರಳಿಂಬಿಲ್ಲನು |
ಮುರಿದು ಪಾರ್ಷದನ |
ಶಿರವಪಿಡಿದನಾಫಲುಗುಣನು ||
ಮೆರೆವಚಂದ್ರಮನ |
ಭರದಿಂ ಪಿಡಿವಾ |
ಸುರರಿಪು ರಾಹುವಿನಂದದಲಿ || ೬೧

ಫಲುಗುಣನಾಕುರು |
ಬಲದಿಂ ಬೆರಸಿಯೆ |
ಚಲದಿಂ ತಂದಾಪಾರ್ಷದನ ||
ನಿಲಿಸಲು ಬಾಗಿಸಿ |
ತಲೆಯಂದ್ರುಪದನು |
ಸಿಲೆಗುರು ನಸುನಗುತಿಂತೆಂದಂ ೬೨

ಪಾರುವನೀನಾಂ |
ಧಾರಿಣೀಶನೆಂ |
ದಾರುತಲವಮತಿಸಿದೆಯೆನ್ನಂ ||
ತೋರಿದರೆಮ್ಮಯ |
ವೀರಶಿಷ್ಯರದ |
ಕೋರಗೆಯೆನಿಸುವ ಸತ್ಫಲವ || ೬೩

ಅರೆನೆಲವನು ನೀ |
ನಿರದೊಪ್ಪಿಸೆ ತ |
ನ್ನರುತರಸೌಖ್ಯವ ಪಡೆಯೀಗ ||
ನರವಾಹನನಾ |
ಸ್ಮರಹರನಾಸನ |
ದರೆಯನು ಪಡೆವಂದದೆ ಹಿತದಿ || ೬೪

ಆನುಡಿಯಿಂದು |
ಮ್ಲಾನವಾನುತಲೆ |
ಮಾನವೇಶನರ್ಜುನನಳವ ||
ಜಾನಿಸುತಲ್ಲಿಂ |
ತಾನೇತಳರ್ದನು |
ಮಾನಸದೊಳು ಚಿಂತಿಸುತಾಗ || ೬೫

ಅರಿಕಳಶಜನನು |
ಶಿರವನು ಕೆಡಹುವ |
ತರುಣನನಾ ವಿಜಯನವರಿಪ ||
ತರುಣಿಯುಬಯಸಿಯೆ |
ಧರಣಿಪಾಲಕಂ |
ಸುರನದಿಯೆಡೆಗೇಳ್ತರುತಿರ್ದ || ೬೬

ಗಂಗೆಯ ತಡಿಯೊಳ್ |
ಭಂಗಮಾದವನ |
ರಂಗದಿ ಮಖಶಾಲೆಯರಚಿಸಿ ||
ಮುಂಗಡೆಯೊಳು ಮುನಿ |
ಪುಂಗವನಿರಲು |
ತ್ತುಂಗ ಪಶುಗಳರ್ಬುದವಿತ್ತ || ೬೭

ಸುತರನು ಪೊಂದುವ |
ಮತಿಯಿಂದವನೀ |
ಪತಿತಾಂ ಯಾಗಕೆಕುಳ್ಳಿರಲು ||
ಚತುರಮುನಿಪನಾ |
ಕ್ರತುವನೆ ಮಾಡಿಸಿ |
ಹಿತದಿಂ ತಣಿಸಿದ ವಿಪ್ರರನು || ೬೮

ಸವನದ ಸಮಯದಿ |
ಹವಿಯನುಕುಡಲೆಂ |
ದವನಿಪ ಪತ್ನಿಯನಾಮುನಿಪ ||
ತವಕದಿ ಕರೆಯಿಸ |
ಲವಳೈತಂದಳು |
ನವಮೋಹಿನಿಯೈತರುವಂತೆ ೬೯

ಬೆದರುತ ಸರಿದಾ |
ಸುದತಿಯ ನೀಕ್ಷಿಸಿ |
ಮದವತಿ ನಿನ್ನಿಂದೇನೆನುತ ||
ಗದರಿಸಿ ಮುನಿಹೋ |
ಮದ ಬೆಂಕಿಗೆ ಕೆಡ |
ಹಿದನಾಹವಿಯನು ರೋಷದಲಿ || ೭೦

ಬಳಿಕಲಿಮುಕುಟವ |
ತಳೆದಂಗದ ಕುಂ |
ಡಲಗಳ ಧರಿಸಿಯೆ ಪೊರಮಟ್ಟು ||
ಕಳೆಯಂ ನೋಟಕ |
ರೊಳೆಚೆಲ್ಲುತ ಕಂ |
ಗೊಳಿಪ ತೇರೊಳರ್ಭಕನಿರ್ದ || ೭೧

ಪೂರಿಪ ಶಂಖದ |
ಚಾರುನಿನದದಿಂ ||
ದಾರುತ ಗಗನವನುಸುಕುತ್ತ ||
ತೋರುವ ಕುವರನ |
ಪೌರರೀಕ್ಷಿಸುತ |
ವಿಾರಿದ ಹರುಷದೆ ಮುಳುಗಿದರು || ೭೦

ಪುನರಪಿ ಹೋಮದೆ |
ಮುನಿಪತಿ ವರಹವಿ |
ಯನುಹುತಿಸಲುತಾಂ ನಡೆತಂದಳ್ ||
ಅನಲನಿಂದೆ ಚೆಲು |
ವಿನಸುತೆ ಪಂಕಜ |
ವನದಿಂ ಬರುವಿಂದಿರೆಯಂತೊಲು || ೭೩

ಮಳೆಗಾಲದ ಪೊಸ |
ನಳಿನವನದವೋ |
ಲಿಳೆಯುಲಿ ಕ್ಷತ್ರಿಯಕುಲವೆಲ್ಲ ||
ಅಳಿವುದು ಕೃಷ್ಣೆಯ |
ಚಲದಿಂದೆನುತಾ |
ಗಳೆ ಗಗನದ ನುಡಿ ಕೇಳಿಸಿತು || ೭೪

ಮುಕ್ಕಳುದಯದಿಂ |
ದುಕ್ಕಿದ ಹರುಷದಿ |
ಸೊಕ್ಕಿದ ನರಪತಿಮನದಲ್ಲಿ |
ತಕ್ಕವದ್ರೋಣನ |
ನಿಕ್ಕಲುಕುವರಂ |
ವಿಾಕ್ಕರ್ಜುನ ಸತಿಯಿವಳೆನುತ || ೭೫

ಪಗೆತನಗೆಸುತಲಿ |
ಬಗೆಯುದೆ ಗುರುವಾ |
ಮುಗನಿಗಸ್ತ್ರಗಳ ಕಲಿಸಿದನು ||
ಸುಗುಣಶಾಲಿಗೀ |
ಜಗದೊಳುಜಸದಿಂ |
ಮಿಗೆಲೆನಿಸುವ ಕಾಂಕ್ಷಿತಮುಂಟೆ || ೨೬

ಅವನಿಪನಾ ಪೊಂ |
ಡವನತನಯುನಿಗೆ |
ಯುವರಾಜ್ಯದಪಟ್ಟವಕಟ್ಟೆ ||
ಸನಿನುಡಿಯಿಂ ಸಂ |
ತವಿಸಿದ ನಿಳೆಯೊ |
ಳ್ಸುವಿನಯುಗುಣವನು ದೂಷಿಪರೆ || ೨೭

ಸ್ವೈರಣೆಯಿಲ್ಲದೆ |
ಕೌರವನಾಗಳೆ |
ವೈರವನೆನೆಯುತ್ತೆ ಪಿತನೆಡೆಗೆ ||
ಸಾರಿಬಂದೆರಗಿ |
ಚಾರುವಾಕ್ಯದಿಂ |
ತೋರುತೆ ವಿನಯುವ ನಿಂತೆಂದ || ೨೮

ಪಟ್ಟವನಿತ್ತೊಡೆ |
ಕೆಟ್ಟೆವು ನಾವೀ ||
ಸುಟ್ಟಬಾಳ್ಕೆಯಿಂದೆಮಗೇನು ||
ನೆಟ್ಟನೆ ಕಾನನ |
ಕಟ್ಟು ನಮ್ಮನವ |
ರುಟ್ಟುಣುತಿರಲೀಪಟ್ಟಣದಿ || ೨೯

ಎನೆ ನಸುನಗುತಲಿ |
ಜನಪತಿ ನುಡಿದನು |
ತನಯನೆ ಮುಳಿಯದಿರಿವರೊಡನೆ ||
ವಿನುತಗುಣಂಗಳ |
ಗಣಿಯೆನಿಪರಿವ |
ರ್ಜನದೊಳ್ಭೇದವತಾರದಿರ್ಕೆ || ೮೦

ಬಳ್ಳಿದರವರಾ |
ಸುಳ್ಳನರಿಯರೀ |
ಪಳ್ಳಿಪಟ್ಟಣದ ಜನರೆಲ್ಲ |
ಚುಲ್ಲಮುಳಿದುಕೆಳೆ |
ಗೊಳ್ಳುವರವರೊಳು |
ಸಲ್ಲದು ವೈರವು ನಿನಗೆಂದ || ೮೧

ಅದನಾಲಿಸಿ ದುಗು |
ಡದೊಳೆಂದನು ನಿಜ |
ವಿದು ಗುರು ಗುರುಸುತ ಕೃಪಮುಖರು ||
ಮುದವಾಂತವರೊಳು |
ಮದಮುಖನೆನುತಲಿ |
ಬೆದರಿತನ್ನ ದೂಷಿಪರನಿಶಂ || ೮೨

ಈ ನೆರೆದಪ್ಪಿಸಿ |
ನೀನವರನುಸನು |
ಮಾನದೊಳಿಂದ್ರಪ್ರಸ್ಥಕ್ಕೆ ||
ಜಾಣನೆ ಕಳುಹಲು |
ಸಾನುಜರಿಂ ಸೊಗ |
ಮಾನುತಲಿಲ್ಲಿರ್ಪೆವು ನಾವು || ೮೩

ಸಮ್ಮತಿಸದೆ ನೀಂ |
ಸುಮ್ಮನಿರಲವರ್ |
ತಮ್ಮದಿರೊಡಗೂಡುತಲೀಗ ||
ಎಮ್ಮನು ಕೊಲುವರು |
ನೆಮ್ಮದಿತೋರದು |
ದುಮ್ಮಾನಕೆ ಕಾರಣಮುಹುದು || ೮೪

ಆಲಿಸುತಂಧ ನೃ |
ಪಾಲನು ಚಿಂತಿಸಿ |
ತಾಳಲರಿಯರಿವರೆಂದೆನುತ ||
ಕಾಲಸುತನಿಗನು |
ಕೂಲವು ತೋರುವ |
ವೋಲವನೊಳು ನುಡಿದನು ಮುದದಿ || ೮೫

ಸುತನೆ ವಾರಣಾ |
ವತದೊಳು ನಡೆವುದು |
ಶಿತಿಕಂಠನ ಸೇವೆಯು ಪಿರಿದು ||
ಹಿತವುವ್ಪೊಡೆ ನೀ |
ನತಿವೈಭವದಿಂ |
ಕ್ಷಿತಿಯನುಪಾಲಿಸು ಸಮ್ಮತದಿ || ೮೬

ಜನಪನಾಣತಿಗೆ |
ಸನುಮತಿಸುತೆ ತ |
ನ್ನನುಜರ ನೊಡಗೊಂಡುತ್ಸವದಿ ||
ಮನದಾನಂದದಿ |
ಜನಪತಿ ನಡೆದನು |
ವಿನುತೇಂದ್ರಪ್ರಸ್ಥಕೆ ಕೂಡೆ || ೮೭

ಮೂರನೆಯ ಸಂಧಿ ಸಮಾಪ್ತಂ.

ನಾಲ್ಕನೆಯ ಸಂಧಿ.

ಭೋಗಷಟ್ಪದಿ.

ವಾರಣಾವತಕ್ಕೆ ಮೊದಲೆ |
ಕೌರವೇಶನಾಜ್ಞೆಯಿಂದೆ |
ಧೀರನೆನಿಪ ಮಂತ್ರಿಬಂದನಾ ಪುರೋಚನಂ ||
ವೀರಪಾಂಡುಸುತರನುರಿಪ |
ಗಾರವೊಂದ ನರಗಿನಿಂದ |
ಚಾರುತರಮಿದೆನಿಸೆ ಸಮೆದಶೀಘ್ರದಿಂದಲಿ || ೧

ಅಂದುಧರ್ಮಜಾತ ಮುದದಿ |
ಬಂದುವಾರಣಾಪುರಕೆ |
ನಿಂದಜನರ ನೇತ್ರಗಳ್ಗೆ ಚಂದ್ರನಂದದಿ ||
ಮುಂವೆತೋರ್ದ ರಾಜಗೃಹವ |
ನಂದದಿಂದ ನೋಡುತೊಳಗೆ |
ಕುಂದದಿರ್ಪಸರಕನೋಡಿ ಪೊಕ್ಕನಾಗಲೆ || ೨

ಕುಂತಿಸುತರು ಮನೆಯೊಳಿರ್ಪ |
ನಂತವಸ್ತುಗಳೊಳೆವಿಷವ |
ನಂತೆಭವನದಲ್ಲಿ ಯುರಗು ಸಜ್ಜರಸಗಳ ||
ಸಂತತಿಯನೆ ಕಂಡುಜನಪ |
ಮಂತ್ರಿಯಹಿತನೆಂದು ಬಗೆದು |
ಚಿತೆಯಾಂತರೊಡನೆ ಕೇಡುತಪ್ಪದೆನುತಲಿ || ೩

ಅವನುತಂದುಕೊಡುವ ಭೂಪ |
ಣವನು ವಸನಲೇಪನಾದಿ |
ಕವನು ಪರಿಕಿಸುತ್ತ ಗೂಢದಿಂಗಿತಂಗಳಿಂ ||

ಅವನಿಪಾಲರ ರಿದುಭೋಗಿ |
ಸುವರಿದೇನೊ ಕೌರವೇಶ |
ನೆಮಗೆ ಮುಳಿದು ಕೊಲಿಪ ಬಗೆಯೊಳಿರ್ಪನೆನುತಲಿ || ೪

ವಾಸರಂಗಳಲ್ಲಿ ಬೇಂಟೆ |
ಯಾಸರಿಂದೆ ಕಾಡಿನಲ್ಲಿ |
ವಾಸಿಸುತ್ತೆ ಪಾಂಡುಸುತರು ತಿರುಗುತಿರ್ದರು ||
ಬೇಸರುಳಿದಿರುಳ್ಕಳಲ್ಲಿ |
ವಾಸಗೃಹದೊಳೆಚ್ಚರಿರ್ಪ |
ರಾಸರೀನೃಪೇಂದ್ರರಂತೆ ಮೋಸಗೊಳ್ಳದೆ || ೫

ಭೀಮಸೇನನೊಂದು ರಾತ್ರಿ |
ಯಾಮವೆರಡು ಸಲ್ಲುತಿರಲು ||
ತಾಮಸಾತ್ಮ ನಿದ್ರೆಗೊಳ್ಳಲಾ ಪುರೋಚನಂ ||
ಆಮಹಾಗೃಹಕ್ಕೆ ಶಿಖಿಯ |
ನೇಮಕೊಳಿಸಿ ಸುಷಿರದಿಂದ |
ಲಾ ಮರುತ್ತಿನಂತೆ ಪೊತ್ತುತಳರ್ದನೆಲ್ಲರಂ || ೬

ಉರಿದುಪೋಗೆ ಬಳಿಕ ಗೃಹವೆ |
ದುರುಳಮಂತ್ರಿ ಮತ್ತಮಲ್ಲಿ |
ತರುಣಿಪಂಚಸುತರಸಹಿತ ಮೋರ್ವಬೇಡಿತಿ ||
ಉರಿಗೆಸಿಲ್ಕಿಮಡಿದಳಾಗ |
ಮರುತಸಖನ ನಿನದದಂತೆ |
ತುರಿಹದಲ್ಲಿ ಬೇವಸದ್ದು ಕೇಳಬಂದುದು || ೭

ಉದಯದಲ್ಲಿ ಬಂದುಜನಸ |
ಮುದಯಮಲ್ಲಿ ನೋಡಿಮಡಿದ |
ಸುದತಿಯೊಡಲ ಪಂಚಿಸುತ ಕಳೇವರಂಗಳ ||

ಯದುತನೂಜೆ ಸುತರ ಸಹಿತ |
ಸದನಲ್ಲಿ ಬೆಂದಳೆನುತ |
ಬೆದರಿಶಂಕಿಸುತ್ತಲಿರ್ದರಾರ್ತರವದೊಳ್ ॥ ೮ ॥

ಮಡಿದಪಾಂಡುಸುತರ ಸುದ್ದಿ |
ಯೊಡನೆತಿಳಿಯೆ ಕೌರವೇಶ |
ರಿಡಿದಕಣ್ಣನೀರಿನಿಂದೆ ಮರುಗುತಿರ್ದರು ॥
ಸುಡುವಬಿಸಿಲಿನಿಂದ ಕಾಯ್ದು |
ಮೊಡಲೊಳಿರ್ಪ ಶೀತಜಲದ |
ಮಡುವಿನಂತೆ ಮನದೆಮುದದಿ ಪೊರಗೆದುಃಖದಿ ॥ ೯ ॥

ಮರುತಸುತನು ತಾಯತಮ್ಮ |
ದಿರನೆ ಪೊತ್ತು ಪಥದೊಳಿರ್ಪ |
ತರುವನೂರುವಿಂದೆ ಮುರಿದುನಡೆದುಬೇಗದಿ ॥
ವರವಿಪಿನದ ಸನಿಹನೆಯ್ದಿ |
ಬರುತೆನಿದ್ರೆ ತೀರದಿರಲು |
ಸರಸಿಯೆಡೆಯ ಮರದಕೆಳಗೆಕುಳಿತನಾಗಳೆ ॥ ೧೦ ॥

ನಾರಿಯೊರ್ವಳಲ್ಲಿಬಂದು |
ಚಾರುರೂಪಧರನನಾ ಸ |
ಮೀರಜಾತನಾನನವನೆ ಕಂಡುನುಡಿದಳು ॥
ಆರುನೀನುಧೀರ ಮತ್ತೆ |
ದಾರುನಿದ್ರಿಸುತ್ತಲಿಹರು |
ದಾರುಣಾಟವಿಯೊಳ ದೇನುಕಾರ್ಯಮಿರ್ಪುದು ॥ ೧೧ ॥

ಕಾನನಾಂತರದೊಳುವಸಿಪ |
ದಾನವೇಂದ್ರನಾ ಹಿಡಿಂಬ |
ನೀನರಾಧಮರನುಕೊಂದು ತರ್ಪುದೆನುತಲಿ ॥

ಹೀನಬುದ್ಧಿಯಿಂದ ಕಳುಹ ।
ಲಾನುಬಂದು ನಿನ್ನಕಂಡೆ ।
ಸಾನುರಾಗದಿಂದೆ ಕೊಲಲುಮನವ್ರಬಾರದು ॥ ೧೨ ॥

ಮಾರವೀರನೆನ್ನೊಳೀಗ ।
ಸಾರಪುಷ್ಪ ಶರವನೆಚ್ಚು ।
ಧೀರನೋಯಿಸುತ್ತಲಿಹನು ತಾಳಲಾರೆನು ॥
ಚಾರುಸುರತ ಕೇಳಿಗೊಟ್ಟು ।
ಪಾರಗಾಣಿಸೆನ್ನನಿನಿಯ ।
ತೋರುತಿರ್ಪಲತೆಗೆ ತಳಿರುಶೋಭಿಸಂದದೆ ॥ ೧೩ ॥

ಮೆರೆವನಿನ್ನ ರೂಪುಗಂಡು ।
ಮರುಳುಗೊಂಡು ಬೇಡುತಿಹೆನು ।
ಕರುಣದೋರಿ ಪೊರೆಯೊವೀರ ಚಂಚಲಾತ್ಮಯು ॥
ವರುಷರಿತುವು ಕಳೆಯೆಪಂಕ ॥
ವಿರದೆನಿರ್ಮಲಾಂಬುವಿಂದೆ ।
ಪರಿದುಸಾಗರಕ್ಕೆ ಸಾರ್ವತಟಿನಿಯಂತೆನ್ನೊಲ್ ॥ ೧೪ ॥

ತಳುವಮಾಡೆ ಕೂಡೆಬಂದು ।
ಖಳಹಿಡಂಬ ಮಾಂಸದಾಸೆ ।
ಗೊಳುತೆಕೊಂದು ತಿಂಬಕೋಪದಿಂದೆನಿನ್ನ್ರಸು ॥
ಪುಳಕಗೊಂಡುಕೈಗಳಿಂದ ।
ತಳೆಯೆತನ್ನನಿನ್ನಕೂಡೆ ।
ಘುಳಿಲನಭ್ರ ಮಾರ್ಗದಿಂದ ಪಾರ್ದುಪೋಪೆನು ॥ ೧೫ ॥

ಅದನುಕೇಳ್ದು ನಗುತನುಡಿದ ।
ಸುದತಿಕೇಳುಪೂರ್ವಜಂಗೆ ।
ಮದುವೆಯಿಲ್ಲತಾನುವರಿಸೆ ನಿನ್ನಲೋಕವೆ ॥

ಮದದಪರಿವಿತೆಂಬತೆಗಳ |
ಬದುಕುಬಹುದುನಿಂದೆಗೊಂಡ |
ಹೃದಯಮೇಕೆ ಸಾಕುಸಲ್ಲದೀಮುರುಕ್ತಿಯು || ೧೬ ||

ಪೇಳವತಿಂಬದುರುಳಗಂಜೆ |
ಜನನಿಸೋದರರನುವಿಜನ |
ವನದೆತೊರೆದುಪೋಗೆತನ್ನಧೀರನೆಂಬರೆ ||
ವನಿತೆಬೆದರಬೇಡನಿಲ್ಲು |
ದನುಜನನೇಕೊಲ್ವತನ್ನ |
ವಿನುತವಿಕ್ರಮವನೆನೋಳ್ಪ ಕ್ಷಣದೊಳಿಲ್ಲಿಯೆ || ೧೭ ||

ಬಂದನಸಿತರಲ್ಲಿ ಕಣ್ಗ |
ಳಿಂದ ಕೆಂಡಗಳನುಸುರಿಸು |
ತಂದುಪುರ್ಬಗಂಟನಿಕ್ಕಿ ಘೋರರವದೊಳು ||
ನಿಂದುಸೃಕ್ವಿಣಿಗಳರಸನೆ |
ಯಿಂದನೆಕ್ಕುತಾನಿಶಾಟ |
ಮುಂದುತೋರದಾಹಿಡಿಂಬಿ ಮರೆಯೊಳಡಗಿರೆ || ೧೮ ||

ನರರಮಾಂಸವೆಳಸುತಿರ್ದೆ |
ತರುಣಿಮುನ್ನವಿಾಗಳೊರ್ವ |
ನರನಕಾಮಿಸುತ್ತೆನಿಂದೆ ಪಾಪಬುದ್ಧಿಯಿಂ ||
ಕೊರತೆತಂದು ಕುಲಕೆನೀನು |
ಪೊರಗೆನಿಸುತೆ ಸಂದೆಯೆಂದು |
ಮರುಳನನುಜೆಯನ್ನು ಗದರಿಸುತ್ತಲಿರ್ದನು || ೧೯ ||

ಸುಂದರಾಂಗ ಬಿಡುಬಿಡಿವಳ |
ನಂದಗಾತಿಯಲ್ಲರಣದೆ |
ನಿಂಮುಕಾದಿಮಡಿದೊಡೀಗ ನಾಕಲೋಕದೆ ||

ಸಂದದೇವಕಾಂತೆಯರೊಳ |
ಮಂದಭೋಗಗಳನುಪಡೆಸೆ |
ಯೆಂದುನುಡಿದು ಖಳನುಬಂದಭೀಮನಲ್ಲಿಗೆ ‖ ೨೦ ‖

ಧುರಕೆನಿಂದು ವೀರರಿರ್ವ |
ರಿರದೆಮುಳಿಸಿನಿಂದೆಕಾದು |
ತಿರಲು ಘೋರಸಿಹ್ಮನಾದ ದಿಶೆಗಳಡರಲು ‖
ತರಳರೊಡನೆ ಕುಂತಿಯಾಗ |
ಭರದೊಳೆದ್ದು ಸಿಂಗವೆಣ್ಣು |
ಮರಿಗಳಂದ ಮೇಳ್ವತೆರದೆನೋಡುತಿರ್ದಳು ‖ ೨೧ ‖

ಮೋದದಿಂಹಿಡಿಂಬನೊಡನೆ |
ಕಾದಲೆಳಸಿನಿಂದುನೆರೆವಿ |
ನೋದದಿಂಹಿಡಿಂಬಿ ಸಿರಿಯತೆರದೆನಿಂದಿರೆ ‖
ಸೋದರನನೆ ಹರುಷದಿಂದ |
ಯಾದವೀತನೂಜರೆಲ್ಲ |
ರಾದರದಿಂ ನೋಡುತಿರ್ದರೆ ಮೆಯುಹಾಯ್ಕದೆ ‖ ೨೨ ‖

ಬಲಿದಭುಜಗಳಿಂದಮಂತೆ |
ಕುಲಿಶಮುಷ್ಟಿಯಿಂದಲಾಗ |
ಕಲಿಸವಿಹಾರಜಾತನಾ ನಿಶಾಟನಂಗವ ‖
ಬಲದೆತಿಳಿದ ನಾದಿಮೂರ್ತಿ |
ಖಲನನುಧುವ ಪಿಳಿದತೆರದಿ |
ನಲವಿನಿಂದೆಜಯುವನು ಸಿರೆನಭದೆಖಚರರು ‖ ೨೩ ‖

ಬೆಳಗುತೋರೆ ನಭದೊಳಾಗ |
ಖಳನಬಿಸಿಯುರಕುತವೀಂಟಿ |
ಲೆಳಸುವಂತೆನಿದ್ದೆಯುಳಿದು ಖಗಗಳೆದ್ದವು ‖

ಅಳಿದ ದುರುಳನೆಂಬ ಮರ್ಬ |
ತೊಲಗಿಸುತ್ತೆ ಪಾರ್ಥ ಹೃದಯು |
ನಳಿನಗಳ ನರಳ್ಚುವಂತೆ ನೇಸರುದಿಸಿದ || ೧೪

ಮನಸಿಜಾಸ್ತ್ರದಿಂದೆ ನವೆದ |
ವನಿತೆ ಯಿರವ ಕಂಡು ಧರ್ಮ |
ತನಯನಾಗ ಜನನಿಗುಸುರಿ ವರಿಸೆನುತ್ತಲಿ ||
ಅನುಜಗಾಜ್ಞೆ ಯಿತ್ತು ತಮ್ಮ |
ಸನಿಹದಲ್ಲಿ ಪೆರುವವರೆಗ |
ಮಿನಿಯೊಳಿರ್ಕೆ ಯೆನಲು ಸೊಗದೊಳಾಳ್ದರೀರ್ವರು || ೧೫

ಹರುಷದಿಂ ಹಿಡಿಂಬಿಯೊಡನೆ |
ತೆರಳ್ದು ನೆರೆದು ಶಾಲಿಹೋತ್ರ |
ಸರಸಿಯೆಡೆಯೊಳೊಂದು ನೆಲೆಯ ಸಮೆದುನಿಂದರು ||
ಪರಮಮೌನಿ ವ್ಯಾಸನಾಗ |
ಭರದಿ ಬಂದು ಮಾತನಾಡಿ |
ಕರುಣಿಸುತ್ತೆ ಹಿತವಪೇಳ್ದು ಸಾದನತ್ತಲು || ೧೬

ದನುಜೆಯಾ ಹಿಡಿಂಬಿ ಪಗಲೊ |
ಳನಿಲ ತನಯನೊಡನೆ ಕೂಡಿ |
ಬನದೆಮ್ಮೆಯಿಂದೆ ಸಮೆದ ಗೃಹದೆ ಸೊಗದೊಳು ||
ಬಿನದಿಸುತ್ತ ಮಿರುಳೊಳತ್ತೆ |
ಯನುಪಚರಿಸುತಿರ್ದಳಿಂತು |
ತನಯರೊಡನೆ ನಿವಸಿಸುತ್ತ ಮಿರ್ದಳಾಪೃಥೆ || ೧೭

ಗಿರಿಯಸಾನುಗಳೊಳು ವನಿತೆ |
ಚರಿಸುತಿನಿಯನೊಡನೆಸೊಗದೆ |
ಬೆರೆಯುತೂರ್ವಶೀಪುರೂರವರನ್ತೊಲಿರುತಿರೆ ||

ವರತನೂಜನಾಗಳುದಿಸಿ |
ನರಕನಾ ವರಾಹದಿಂದೆ |
ಧರೆಯೊಳುದಿಸಿದಂತೆ ಮೆರೆದನಾ ಘಟೋತ್ಕಚಂ || ೨೮

ಉದಿಸಿದೊಡನೆ ಹರೆಯವಾಂತು |
ಮುದದಿ ಜನಕ ನಡಿಗೆ ಮಣಿದು |
ಬೆದರಬೇಡ ಬೊಪ್ಪ ತನಗನುಜ್ಞೆಗೊಡುವುದು ||
ಒದವಿದೆಡರೊಳೆನ್ನ ನೀಂ ನೆ |
ನೆದೊಡೆ ಬಂದುಸಾಹ್ಯ ವೆಸಗಿ |
ವ್ಯಥೆಯಬಿಡಿಪೆನೆಂದು ಜನಸಿಸಹಿತ ನಡೆದನು || ೨೯

ಪುರುಕುಲಜರು ವೇತ್ರಕೀಯ |
ಪುರಕೆ ನಡೆದು ಬಂದು ವಿಪ್ರ |
ವರರವೇಷವಾಂತು ಪೂರ್ವ ಗೃಹದೊಳೊಂದೆಡೆ ||
ಇರುತೆಭಿಕ್ಷವೃತ್ತಿಯಿಂದೆ |
ತಿರಿದುತಂದುಣುತ್ತ ಮಿತರ |
ರರಿಯದಂತೆ ಸೊಗದೊಳಿರ್ದರಗ್ರಹಾರದೆ || ೩೦

ಇಂತುಪಲವು ದಿವಸಮಿರ್ದ |
ನಂತರದೊಳಗೊಂದು ದಿನದೆ |
ಚಿಂತೆಯಿಂದೆ ಸುತನಸಪ್ಪಿ ಪತಿಯುಮುಂಗಡೆ ||
ಕಾಂತೆಯಳುತಲಿರಲು ಕಂಡು |
ಕುಂತಿದೇವಿ ಯೇನಿದೆನುತ |
ಸಂತವಿಟ್ಟುಪೇಳ್ದಳಾದ್ವಿಜಾತಸತಿಯೊಳು || ೩೧

ಅದನು ಕೇಳ್ದು ದುಃಖದಿಂದೆ |
ಸುದತಿನುಡಿದಳವ್ವೆ ಕೇಳು |
ಮದಿಪಬಕನೆನಿಪ್ಪ ದೈತ್ಯನೊಬ್ಬ ನಿರ್ಪನು ||

ಪದಪಿನಿಂದ ಮಾಂಸಭೋಜ |
ನದೊಳೆ ಕಾಂಕ್ಷೆಗೊಂಡು ಯಮುನೆ |
ನದಿಯ ದಡದ ಕಾಡಿನಲ್ಲಿ ಬೆರೆದು ಸಂತತಂ || ೨೦

ಪುರಕೆಬಂದು ದನುಜನಿಲ್ಲಿ |
ನರರನೆಲ್ಲ ಕೊಂದುತಿನುತ |
ಲಿರಲು ಜನರು ನೆರೆದು ಬೇಡಿ ಕೊಲೆಯನಿಲಿಸಿಯೆ ||
ಪುರುಷನೊಬ್ಬನನ್ನೆ ಕಳುಹಿ |
ಪರಿಹರಿಪೆವು ಕ್ಷುಧೆಯನೆಂದು |
ದುರುಳ ಖಳನ ಸಮ್ಮತಿಸಿದರದರಪರಿಯೊಳು || ೨೨

ವೇತನಮಿದು ಸಲುತಲಿಹುದು |
ಯಾತುಧಾನ ಗಂದಿನಿಂದ |
ಖ್ಯಾತಿಯಾದ ಭುಜಬಲಕ್ಕೆ ಫಲಮಿದೆನಿಸುತೆ ||
ಮಾತೆ ಕ್ರಮದೊಳಿಂದು ಬಂದು |
ದೋತುನಮ್ಮ ಭಾಗ್ಯದಿನವು |
ರೀತಿದಪ್ಪದೇನಪೇಳ್ವೆ ಮುಂದೆತೋರದು || ೨೪

ಕುಲಕೆ ತಂತು ಪುತ್ರನೋರ್ವ |
ನಿಳೆಯೊಳಿವನ ನೀಯಲರಿದು |
ಚೆಲುವೆ ಮಗಳು ಪೆರರಸೊತ್ತು ಸಮ್ಮದಲ್ಲವು ||
ಬಲುಮೆಯಿಂದೆ ಪೋಪೆನೆಂದೊ |
ಡೊಲಿದು ಕೊಡನು ಪತಿಯುತನ್ನ |
ಸಲುವದುಃಖವನ್ನು ಸಹಿಸಲಾರೆ ವೀಗಳೆ || ೨೬

ಪುರುಷನೋರ್ವನನ್ನು ಕೊಂಡು |
ತರುವೆವೆಂದೊಡೆಮ್ಮಬಳಿಯೊ |
ಳುರುಧನಂಗಳಿಲ್ಲ ಮುಂದುತೋರದೆನ್ನಲು ||

ತರುಣಿತನ್ನ ಕುವರನೋರ್ವ |
ನಿರುವ ಸುರನನ್ನೆ ಮಥಿಸಿ |
ಬರುವನಂಜಬೇಡ ವೆಂದಳಾಗ ಳಾಪ್ರಥೆ ‖ ೭೬

ಎಂದುನುಡಿಯು ಕೇಳ್ದು ಬೆರಗ |
ನೊಂದಿದಂಪತಿಗಳು ಮೋದ |
ದಿಂದ ವಂದಿಸಿದರು ತಾಯೆ ಕರುಣಿಸೆನುತಲಿ ‖
ಮಂದಹಾಸದಿಂದ ಭೀಮ ‖
ನಿಂದುಸಮರ ದೊರೆದುದೆಂದು |
ನಿಂದುಮಾತೆ ಯಾಣತಿಯನೆ ಪಾರುತಿರ್ದನು ‖ ೭೭

ಖಳಹಿಡಿಂಬನನ್ನು ಕೊಂದ |
ಬಲವನೆನೆದು ದುರುಳ ಬಕನ |
ಕೊಲುವನೆಂದು ನಚ್ಚಿ ಸೋದರರ್ಕಳೊಪ್ಪಲು ‖
ನಲಿದುವಿಪ್ರ ನಧಿಕಭಕ್ಷ್ಯ |
ಗಳನು ಭೋಜ್ಯಗಳನು ಸವಿಯು |
ಗೊಳಿಸಿಭೀಮಸೇನಗುಣಿಸಿ ತೃಪ್ತಿವಡಿಸಿದ ‖ ೭೮

ಮರುತಸುತನು ಬಳಿಕ ರಕ್ತ |
ಪರಿಮಳವನು ಸುಮವ ವಸ್ತ್ರ |
ವರವಧರಿಸಿ ಭಕ್ಷ್ಯಭೋಜ್ಯದಿಂದ ತುಂಬಿದ ‖
ವರಶಕಟವ ನಡರ್ದು ಬೇಗ |
ಪೊರಮಡಲ್ಕೆ ಹರುಷದಿಂದ |
ಪುರದ ಜನರು ನೆರೆದುನೋಡಿ ಬೆರಗುಗೊಂಡರು ‖ ೭೯

ಎಲ್ಲಿನೋಡೆ ಗುಳ್ಳೆನರಿಗ |
ಳೆಲ್ಲಿನೋಡ ಲಸ್ಥಿಯುಗುರು |
ಪಲ್ಲರಾಶಿ ಕಾಣುತಿಹುದು ಘೋರವಾಗಿಯೆ ‖

ಝಲ್ಲಿಕಾರವಂಗಳಿಂದೆ |
ಚೆಲ್ವವಿಟಪಿನರರಶವಗ |
ಳೆಲ್ಲಿನೋಡೆ ಪೂತಿಗಂಧ ವಿಹುದು ಮಾರ್ಗದೆ || ೪೦

ಅಳಿಯಲೀಗ ಯುದ್ಧದಲ್ಲಿ |
ಖಳನು ಬಳಿಕ ತಿನ್ನಲರಿಯೆ ||
ಬಲಿಯನೆಂದು ಭಯವತೊರೆದು ಭೀಮಸೇನನು ||
ನಲಿದುಭಕ್ಷ್ಯ ರಾಶಿಗಳನು |
ಮೆಲುತಲಿರ್ದ ಮೌನದಿಂದ |
ಫಲವುಕಾಲದಿಂದ ಮುಣಿಸನರಿಯದವನವೋಲ್ || ೪೧

ಗಣನೆಗೊಳದೆ ಬಕನನಾಗ |
ಳುಣಿಸನೆಲ್ಲ ತಿಂದುಬಳಿಕ |
ನಲಿವುತಟ್ಟ ಹಾಸಗೆಯ್ದು ತೇಗಲೊಡನೆಯೆ ||
ಖಲನು ಗಿರಿಗುಹಾಂತರಾಳ |
ದೊಳಗೆ ಕೇಳಿ ಭೀಮರವವ |
ಘಳಿಲನೆದ್ದು ಪಲ್ಗಡಿಯುತ ಬಂದನಲ್ಲಿಗೆ || ೪೨

ಮುಳಿದು ಧನುಜನಾಗ ತನ್ನ |
ಬಲ್ದ ಮುಷ್ಟಿಯಿಂದ ಬಡಿಯು |
ಲೊಳಗೆ ಸೇರ್ದ ಕಬಳಮೆಲ್ಲ ಮೊಂದು ಗೂಡಲು ||
ಬಳಿಯೊಳಿರ್ಪ ಯಾತುಧಾನ |
ನಳವಗಣಿಸ ದನಿಲಸೂನು |
ಘಳಲನುಣುತಲಿರ್ದ ನಿನಿಸುಭೀತಿ ಯಿಲ್ಲದೆ || ೪೩

ಎಣಿಕೆ ಬೇಡ ತರಳನಿನ್ನ |
ಮನಕೆಬಂದ ತೆರದೆ ಭುಜಿಸು |
ತನಗೆ ಕೊರತೆಯಿಲ್ಲ ಮತ್ತದೆತ್ತ ಪೋದಪೆ ||

ಕ್ಷಣದೆನಿನ್ನ ಕೊಂದು ತಿಂಬೆ |
ನುಣಿಸುಸಹಿತ ಚಿಂತೆಯುಳಿದು |
ಮನುಜಮಾಂಸ ರುಚಿಯುಬಲ್ಲೆ ಮೊದಲಿನಿಂದೆನಾಂ || ೪೪

ಇಂತುನುಡಿದ ಖಳನ ನುಡಿಯ |
ಸಂತಸದೊಳು ಕೇಳ್ದು ನಗುತ |
ಚಿಂತೆತೊರೆದು ಮೌನದಿಂದ ಭುಜಿಸಿಯೆಲ್ಲವ ||
ಅಂತೆ ಪೊಡೆಯ ನಿಮಿರಿಕೊಳುತ |
ನಂತರದೊಳ್ಖಳನೊಳೆಂದ |
ಪಂತಮುಳಿದು ಹರುಷದಿಂದ ಭೀಮಸೇನನು || ೪೫

ಘಾತುಕಾತ್ಮನೀನು ನಿಚ್ಚ |
ಮಾತೆರದಿಂ ನರರಕೊಂದು |
ಪಾತಕಕ್ಕೆ ಸಂದೆನಿನ್ನ ಶೌರ್ಯವೆಲ್ಲವ ||
ಭೂತಳದೊಳು ಬಲ್ಲರೆಲ್ಲ |
ರೋತುನಿಲೆಲ ತನ್ನಮುಂದೆ |
ಖ್ಯಾತಿಯಿಂಹಿಡಿಂಬನಸುವ ಪಿಳಿದುದರಿಯೆಯಾ || ೪೬

ಬಳಿಕಲೊಂದು ಮರವಕೊಂಡು |
ಖಳನುಮುರುತ ಸುತನಮೇಲೆ |
ಘಳಿಲನೆಚ್ಚೊಡಾ ಹಿಡಿಂಬ ವೈರಿಯಾಗಳೆ ||
ಎಲೆಯುದಿರ್ಚಿ ಲೀಲೆಯಿಂದ |
ಸಲಹಿದಂಡಜವನು ಪಿಡಿವ |
ವೊಲು ವಿನೋದದಿಂದ ಪಿಡಿದು ಕೆಲದೊಳೆಸೆದನು || ೪೭

ಪಿರಿಯ ಶಿಲೆಗಳಿಂದ ಮತ್ತೆ |
ತರುಲತಾಳಿಯಿಂದ ಮುಳಿದು |
ವರುಷಿಸುತ್ತ ಮುಷ್ಟಿಯುದ್ಧ ದಿಂದಲಾಡುತ ||

ಬೆರೆಯುತಿರಲು ಗಗನದೊಳು ಖ |
ಚರರು ನುತಿಸುತಿರ್ದರಾಗ ||
ಳರರೆ ನೀವೆ ವೀರರಿರ್ದರೆಂದು ಹರುಷದಿ || ೪೮

ಮಲ್ಲಯುದ್ಧದಲ್ಲಿ ಭೀಮ |
ನಲ್ಲಿ ಖಳನಕಾಲು ಪಿಡಿದು |
ಚೆಲ್ಲಿಗಗನ ತಳಕೆ ಮತ್ತೆ ಭೂಮಿಗೆಸೆಯಲು ||
ನಿಲ್ಲದಳಿದನವನ ಪೋವ |
ಚೆಲ್ಲಿಪುರದ ಬಾಗಿಲಲ್ಲಿ |
ಗೆಲ್ಲನಾಂತು ಸಿಂಗದಂತೆ ಮನೆಯಪೊಕ್ಕನು || ೪೯

ಕೊಂದು ಬಕನ ತನ್ನ ಮನೆಗೆ |
ಬಂದ ಮರುತ ಸುತನ ಕಂಡು |
ಚಂದದಿಂದ ವಿಪ್ರನಾಶಿಷವನು ಪೇಳ್ದನು ||
ಅಂದು ಕುಂತಿ ಸುತರುಸಹಿತ |
ಮಂದಹರುಷದಿಂದಲಪ್ಪಿ |
ಕುಂದದಳವ ನುತಿಸುತಿರ್ದಳಾತ್ಮಜಾತನ || ೫೦

ಬಾಗಿಲಲ್ಲಿ ಬಿರ್ದ ಶವವ |
ನಾಗಕಂಡು ನೆರೆದ ಪುರದ |
ನಾಗರಿಕರಿದೇನೆನುತ್ತ ಬೆರಗುಗೊಳ್ಳುತ ||
ಕೂಗಿವಜ್ರತಿಂದ ಮುರಿದ |
ನಾಗವರನ ತೆರದೊಳಿಹನು |
ನೀಗಿತೆಮ್ಮ ಕಷ್ಟವೆಂದು ಷರುಷಗೊಂಡರು || ೫೧

ಮಡಿದಬಕನ ಕಂಡುಜನಗ |
ಳೊಡನೆ ಭೀತಿಯುಳಿದು ನೆರೆದು |
ಸಡಗರದಿಂ ಪೊಗಳ್ದು ವಿಪ್ರನಟುವ ನೆಲ್ಲರು ||

ಕೆಡದಪುಲಿಯು ಕಂಡುಮಿಗಗ |
ಳಡವಿಯೊಳಗೆ ಹರುಷಿಸಂತೆ |
ಕಡುಪ್ರಮೋದದಿಂದ ತಮ್ಮ ಮನೆಗೆ ನಡೆದರು ‖ ೫೦

ಒಂದುದಿನದೆ ಮಾರ್ಗವಶದೆ |
ಬಂದನಲ್ಲಿ ಗೊಬ್ಬ ವಿಪ್ರ |
ನಿಂದು ದ್ರುಪದ ಪುರಿಗೆಪೋಪೆ ನೀವುಬರ್ಪುದು ‖
ಸುಂದರಾಂಗಿ ಯಾಜ್ಞಸೇನಿ |
ಚಂದವರಗುವರನವರಿಪ |
ಳೆಂದುಪೇಳೆ ಕುಂತಿಸುತರು ಮೊಡನೆನಡೆದರು ‖ ೫೭

ಪೋಗುತಿರ್ಪ ಬಟ್ಟೆಯಲ್ಲಿ |
ಯೋಗಿಪರಾಶರನಸೂನು |
ವಾಗಬಂದು ವಿಪ್ರವೇಷಧರರನೀಕ್ಷಿಸಿ ‖
ರಾಗದಿಂದ ಕೇಳುತವರ |
ಯೋಗಕುಶಲಗಳನುತಿಳಿದು |
ನಾಗಧರನ ಕರುಣವೆಂದು ನುತಿಸಿನುಡಿದನು ‖ ೫೮

ಅರಗುಮನೆಯೊಳಳಿದರೆಂದು |
ಮರುಗುತೆ ಪಾಂಚಾಲನಿರಲು |
ಗುರುವೆಬಂಬು ಮಡಿಯಲಿಲ್ಲವೆಂದು ನುಡಿದನು ‖
ಹರುಷದಿಂದ ಮಗಳಸ್ವಯಂ |
ವರಕೆ ಬರ್ಪರವರೆನುತ್ತೆ |
ತರಿಸಲವಿನೊಳಹನು ನಿಮ್ಮಬರವಪಾರುತ ‖ ೫೫

ಪಗಲಿರುಳ್ಗಳಲ್ಲಿ ನಡೆದು |
ಮಿಗಿಲುವೇಗದಿಂದ ದ್ರುಪದ |
ನಗರವನೀಂಸೇರಿ ರಾಜಸಭೆಯೊಳಪ್ಪುದು ‖

ನೆಗಳ್ದಯೋನಿಜಾತೆ ನಿಮ್ಮ |
ಬಗೆಗೆ ಸಂದುವರಿಪಳು ಬಳಿ |
ಕೊಗೆವುದು ಶುಭತತಿಯೆನುತ್ತೆ ನುಡಿದನಾಮುನಿ || ೫೬

ಮುನಿಪನಿಂತುಸಿರ್ದು ತೆರಳ |
ಲನುವಿನಿಂದೆ ನಡೆದುಗಂಗೆ |
ಯನು ನಿರೀಕ್ಷಿಸುತ್ತ ರಾತ್ರಿಯಲ್ಲಿತುರಿಪದಿ ||
ಘನವಹಕಾರ್ಗತ್ತಲೆಂದು |
ಮನದೆಭೀತಿಗೊಳದೆ ನಿರ್ಝ |
ರಿಣಿಯದಾಂಟಿ ಪಾಂಡುಸುತರು ಬರುತಲಿರ್ದರು || ೫೭

ಸತಿಯರಿಂದೆಬೆರೆದು ಚಿತ್ರ |
ರಥನುಸಲಿಲಕ್ರೀಳಗೊಳುತ |
ಪಥದೆಪೋಪ ನರರಕಂಡುಮುಳಿದುಕವಿಯುಲು ||
ಶತಮುಖಾತ್ಮಜಾತನಾನಿ |
ಶಿತಶರಾಗ್ನಿಯಿಂದಲವನ |
ರಥವನುರುಹಿ ಸುಟ್ಟುಸೋಲಿಸಿದನುಸಾಸದಿ || ೫೮

ಬಳಿಕಲವನು ಪಾರ್ಥರೊಡನೆ |
ಕೆಳೆಯುಗೊಂಡುಶುಭವನುಸಿರಿ |
ತಳರಲಾಗ ಮುಂದೆವೇಗದಿಂದನಡೆಯುಲು ||
ಕೆಲದೊಳೊರ್ವ ಧೌಮ್ಯನೆಂಬ |
ಮಳಮುನೀಂದ್ರನಿರಲುಕಂಡು |
ಕುಲಪುರೋಹಿತನನೆಮಾಡಿ ಕೂಡಿಕೊಂಡರು || ೫೯

ಒಡನೆಬರುತಲಿರ್ಪ ದ್ವಿಜರ |
ಗಡಣದಿಂದ ಕುಂತಿಸುತರು |
ನಡೆದುಬಂದು ದ್ರುಪದಪುರವ ಸೇರಿನೋಡಲು ||

ಪೊಡವಿಪಾಲರೆಲ್ಲ ನೆರೆದು |
ಕಡುವಿಲಾಸದಿಂದ ಕೃಷ್ಣೆ |
ಮಡದಿಯುಹಳುತಮುಗೆಸುತ್ತ ಭ್ರಮಿಸುತಿರ್ದರು ॥ ೬೦

ಅವರುನೋಡುತಾ ಕುಲಾಲ |
ಭವನದಲ್ಲಿ ತಾಯನಿರಿಸಿ |
ಜವದಿಮದುವೆಮಂಟಪಕ್ಕೆ ಬಂದುಸೇರಲು ॥
ಅವನಿಪಾಲರೆಲ್ಲ ನೆರೆದು |
ಸುವಿಹಿತದಾಸನಗಳೊಳುವಿ |
ಭವದೆಕುಳ್ಳಿರಲ್ಕೆ ತೂರ್ಯನಾದವೊಪ್ಪಿತು ॥ ೬೧

ಸಾಲುಗೊಂಡು ಕುಳಿತಪೊಡವಿ |
ಪಾಲರೆಲ್ಲ ನೋಡುತಿರಲು |
ಲೀಲೆಯಿಂದೆಕೃಷ್ಣೆ ಮಂಚಮೇರಿಮೆರೆದಳು ॥
ಲೋಲಲೋಚನೆಯನೆಕಂಡು |
ಸೋಲದರಾರ್ಪಾಂಡುಸುತರು |
ಶೀಲಮುಳಿಮ ಮದನಶರಕೆ ಸಿಲ್ಕಿಸವೆವರು ॥ ೬೨

ಮೀನಯಂತ್ರವನ್ನು ನಭದೆ |
ತಾನುನಿಲಿಸಿ ಬಾಗದಿರ್ಪ |
ನೂಸಧನುವ ಬಾಣಗಳನು ಪಿಡಿದುಸಭೆಯೊಳು ॥
ಮಾನವೇಂದ್ರ ಪಾರ್ಷದೇಶ |
ಸೂನುಬಂದು ತೋರಿಸುತ್ತ |
ಸಾನುರಾಗದಿಂದನುಡಿದ ನೆಲ್ಲರಾಲಿಸೆ ॥ ೬೩

ಬಲುಮೆಯಿಂದೆ ಬಿಲ್ಲೊಳೇಸ |
ರಳನೆತೊಡಿಸಿ ಗಗನದಲ್ಲಿ |
ತೊಳಪಮತ್ಸ್ಯಯಂತ್ರವನು ಕೆಡಹಿದನರನನೆ ॥
ಬಲಿಸಿನರಿಪಳೆನ್ನತಂಗಿ |
ಬಳಿಕ ಮದುವೆಗೈಯ್ದುಕೊಡುವೆ |
ಬಲವತೋರಲಿದುವೆ ಸಮಯುವೆಂದುಸಾರಿದ ॥ ೬೪

ಐದನೆಯ ಸಂಧಿ.

ನರಪಾಲಸುತಂ ಸಾರುತೆ ಸಭೆಯೊಳ್ |
ಶರಕಾರ್ಮುಕಗಳ ಮುಂದರಿಸುತ್ತಂ |
ನೆರೆದಿಪ ರಾಜಕುಮಾರರ ತಂಡವನೀಕ್ಷಿಸಿಸಮ್ಮದದಿಂ ||
ಧರಣೀಪಾಲರ ಬಿರುದಾವಳಿಗಳ |
ನೊರೆಯುತೆ ತಂಗಿಗೆ ಪೆಸರಿಸತೊಡಗಿದ |
ನಿರುಕಿಸು ಸೋದರಿ ರಾಜರಿವಂದಿರ ಕುಲಶೀಲವನುಸಿರ್ವೆ || ೧

ಅನುಜೆಯೆ ನೋಡೀ ಮನಸಿಜಸನ್ನಿಭ |
ಜನಪತಿ ದುರ್ಯೋಧನನೆನಿಸಿರ್ಪನು ||
ಘನವೈಭವದಿಂ ಪಡಿ ತನಗಿಲ್ಲೆನೆ ಕೌರವವಿಭುವೀತಂ ||
ಧನದಂಪರಿಕಿಸುತೀತನಸಿರಿಯುಂ |
ಮನದೊಳ್ನಾಚುತಲುತ್ತರದತ್ತಲೆ |
ಮನೆಮಾಡಿಯೆಗೂಢದೊಳಡಗಿರ್ಪನೊ ಪೇಳೆನುವಂದದಲಿ || ೨

ಈತನ ಸೋದರರೀಕಡೆಯಿರ್ಪರ್ |
ಖ್ಯಾತಿಯದುಶ್ಯಾಸನಮುಖಭೂಪರ್ |
ಜಾತಿಯರತ್ನಂಗಳಮಗುಟಂಗಳ ಧರಿಸಿಯೆ ತಲೆಗಳಲಿ ||
ಭೂತಳವನು ಪೊತ್ತಿಹ ನಾಗೇಂದ್ರನ |
ಚಾತುರಿಯದೆ ಸೇವಿಪಭುಜಗಂಗಳ |
ರೀತಿಯೊಳಾಕಾಂಚನಕಾಂತಿಯು ಪಸರಿಸುತಲಿ ದೆಸೆದೆಸೆಗೆ | ೩

ಶಕುನಿಯೆನಿಪನೀಗಾಂಧಾರೇಶನು |
ಯುಕುತಿಯ ಪಗಡೆಯ ಕೇಳಿಯಬಲ್ಲವ |
ಸುಕುಟಿಲವಂತನೆನುತ್ತಲೆ ಪೊಗಳುವರೆಲ್ಲರು ಧರೆಯೊಳಗೆ ||

ಚಕಿತಾಂಬಕಿ ನೋಡಿವನೇಗುರುಸುತ ।
ನಕಳಂಕದಶೌರ್ಯದೊಳೀತಂಗೆಣೆ ।
ಮಖವಿಧ್ವಂಸಕನಲ್ಲದೆ ಪೆರರಿಲ್ಲಶ್ವತ್ಥಾಮಸಿವಂ ॥ ೪

ಬಾಲಾದಿತ್ಯನ ತೆರದೊಳ್ಪೊಳೆವವಿ ।
ಶಾಲವಕ್ಷನಿವಕರ್ಣನೆನಿಪ್ಪನು ।
ತಾಳುತೆ ಮೆಯ್ಯೊಳ್ ಸಾಜದಕವಚವನಂದವದಿಮ್ಮಡಿಸೆ ।
ನೀಲಾಳಕೆ ಕೇಳಿಂದ್ರನ ಮೊಣ್ಬು ।
ಪಾಲಶಿಬಿಯನಾವಮೌನಿದಧೀಚಿಯ ।
ಸಾಲೊಳಿವನೆ ಪೆರರೋರ್ವರುಮಿಲ್ಲೆನಿಸಿರ್ಪರ್ ಬಾಗದೊಳು ॥ ೫

ಅಳಿಕುಂತಳೆ ನೋಡೀತನೆ ರಾಮಂ ।
ಹಲಧರಮೂರ್ತಿಯು ರಜತಾದ್ರಿನಿಭಂ ।
ತಳೆದಾನೀಲಾಂಬರಯುಗಳವನೀ ಸೌಂದರ್ಯಾಕೃತಿಗೆ ॥
ಮುಳಿಸಿಂ ಕಾಳಿಂದಿಯ ಪರಿವೊನಲಂ ।
ಹಲದಿಂದೆರಡಾಗಿಯೆ ಭಾಗಿಸಿದಾ ।
ಬಲುಮೆಯತೋರಿಸಬಂದವನಂದದಿ ಚೆಲುವಿಂದೊಪ್ಪುವನು ॥ ೬

ಮುದದಿಂದೀಕ್ಷಿಸುಯದುಭೂಪಾಲನ ।
ಸುದರೇ ಭೂಭಾರವ ತಗ್ಗಿಸಲೆಂ ।
ದುದುಭವಿಸಿರ್ಪ ಪುರಾಣಪುರುಷನ ಶ್ರೀವತ್ಸಾಂಕನನು ॥
ಪದಪಿಂದೀತಂತರುವಂದಾಸ ।
ಗ್ಗದತರುವನೆ ನೋಡುತಲಾಶಚಿಯಾ ।
ವದನಂ ನಂದನದಂದದೆ ವಿಚ್ಛಾಯದೆ ಕಾಣಿಸಿತಲ್ಲಿ ॥ ೭

ಕುಸುಮಾಂಬಕಿ ನೀನೊಸೆದೀಕ್ಷಿಪುದೀ ।
ಕುಸುಮಾಸ್ತ್ರನತಾತನ ಕೆಲದೋಳ್ತಾ ।
ವೆಸೆದಿರ್ಪರು ಸಾತ್ಯಕಿ ವೃಷ್ಣ್ಯಂಧಕಭೋಜಾದ್ಯರುಯಮಗಳ್ ॥

ಕುಸುಮಾಸ್ತ್ರೋದಯಕಾರಣನೆನಿಪಾ |
ಶಶಧರನೆಡೆಯೊಳ್ ಜ್ಯೋತಿರ್ಗಣ ಶೋ |
ಭಿಸುವಂದದಿ ಚಂದದರೂಪಿಂದಾನಂದಂಗೊಳಿಸುತ್ತಾ ‖ ೮

ಕಮಲಾಂಬಕಿನೋಡು ಮಹಾಭುಜ ವಿ |
ಕ್ರಮನ ಜರಾಸಂಧನನಿವನೀ ಸಂ |
ಭ್ರಮದಿಂದಷ್ಟಾದಶವಾರದೆ ಶ್ರೀಕೃಷ್ಣನ ಸೋಲಿಸಲು ‖
ವಿಮುಖತೆಯಾನಲ್ ಮುರರಿಪುವಾಗಳ್ |
ಕಮಲೆಯೆ ಶೂರರೊಳನುರಕ್ತತೆಯಿಂ |
ಸಮರಕೆ ಮುಂಬರಿದೈತಂದಳೆನಲ್ಕಿರಿದೇಂ ಸಾಹಸವೋ ‖ ೯

ನಿರುಕಿಸು ತರುಣೀ ಪ್ರಾಗ್ಜ್ಯೋತಿಷಭೂ |
ವರನಂ ಭಗದತ್ತನ ನೀನಿತ್ತಲ್ |
ನೆರೆಸಂಗರದೊಳಗರಿಭೂಪಾಲರ ಮುಖಕಮಲಂಗಳನು ‖
ಸೊರಗಿಸಿ ಕೀಳುವುದೀಶಾನಾಶೆಯ |
ಕರಿ ಯತ್ನಮದಿಲ್ಲದೆ ತಾನೆಯೆನಲ್ |
ಧರಣೀಪಾಲರೊಳಾರೀತಂಗೆಣೆವಿಶ್ವಂಭರೆಯೊಳಗೆ ‖ ೧೦

ಶೌರಿಯನಾತೃಣದಂದದೆ ಬಗೆವಂ |
ವೀರಂ ಚೇದೀಶ್ವರ ಶಿಶುಪಾಲಂ |
ನಾರಿಯೆ ನಿರುಕಿಸು ಸಂಗರಧೀರನನಕ್ಕರೆಯಿಂದಿವನಂ ‖
ಪಾರುತೆ ತವಸ್ವಾಳ್ದವನೆಂದೆನುತಂ |
ಸಾರಿಯೆ ಸೇವಿಸುತಿರ್ಪರು ಮಾದ್ರೀ |
ಧಾರಿಣಿಯುವರೀ ಶಲ್ಯನ ಶಂಕರ ತುಲ್ಯನ ಭಕ್ತಿಯೊಳು ‖ ೧೧

ಇವನೇ ಮಾಹೀಷ್ಮತಿ ಯಧಿನಾಥಂ |
ಸುವಿಹಿತ ಮಹಿಮೆಯು ನಿಧಿಯೆಂದೆನಿಪಂ |
ಯುವತಿಯೆ ನೀನೀಕ್ಷಿಸು ನೀಲನ ಪರಕಾಲನ ಸಮ್ಮುದದಿಂ ‖

ತವಕದಿ ಶಿಖಿಯಂ ತಾಳ್ದ ಸಂಗರ |
ಭುವಿಯೊಳ್ದಹನಂ ನೆರವಾಗಿರ್ದಪ |
ನವನೀಪಾಲರೊಳತಿಶಯ ಕೀರ್ತಿಯ ತಳೆದಿರ್ದಪನೀತಂ || ೧೨

ಇತ್ತಲೆ ನೋಡೌ ನೆರೆದಿಹ ರಾಜರ |
ಮೊತ್ತಮನೀ ಭೂಪಾಲರ್ಮಹಿಮೆಯು |
ಪೆತ್ತಿಹ ರಿಲ್ಲಿಗೆ ನಡೆತಂದಿರ್ಪರ್ನಿನ್ನಂ ಬಯಸುತ್ತಾ ||
ತೆತ್ತಿಹ ಲಕ್ಷ್ಯವ ಭೇದಿಪವೀರನೊ |
ಳಿತ್ತು ಮನವಂ ವರಿಸುವುದವನಂ |
ಮತ್ತದ್ವಿಪಗಾಮಿನಿ ಕಾಮಿಸುತಂ ಪೂಮಾಲೆಯುಸಹಿತ || ೧೩

ತದನಂತರದೊಳ್ ಧರಣೀಪಾಲರ್ |
ಮುದದಿಂ ಚೆನ್ನೆಯೆ ತನ್ನವಳೆನುತಂ |
ಪದಪಿಂ ಪೇಳುತೆ ಕನಕಾಸನದಿಂದೇಳುತೆ ಸಂಭ್ರಮದಿಂ ||
ಸದಸಿನೊಳಾ ಸಜ್ಯದ ಧನುವಂ ಪಿಡಿ |
ವುದರೊಳಹಂ ಪೂರ್ವಿಕರಾಗುತ್ತಂ |
ಚದುರರ್ನಡೆತರುತಿರ್ದರ್ಸಡಗರದೊಡನಾತಾಣಕ್ಕೆ || ೧೪

ಬಿಲ್ಗೊಳ್ಬಾಣವ ನೇರಿಪೆನೆನುತಂ |
ಮಲ್ಲರ್ ಯಾದವ ವೀರರ್ಬರುತಿರೆ |
ಸಿಲ್ಲಿಸಿ ತಡೆದಾ ವಸುದೇವಸುತಂ ತನ್ನಯ ಬೆರಲಿಂದಂ ||
ಅಲ್ಲಿಯೆ ನೆರದಿಹ ವಿಪ್ರರಮಧ್ಯದೆ |
ಸಲ್ಲಲಿತಾಕೃತಿಯಿಂ ತೊಳಗುವ ಭೂ |
ವಲ್ಲಭರಂ ಪಾರ್ಥರನಾಮುಸಲಿಗೆ ತೋರಿದ ನೊಲವಿಂದ || ೧೫

ವರರಂಗಸ್ಥಳ ಭೂಷಣಮಾಗಿಹ |
ಗಿರಿವರನಂದದ ಬಾಣಾಸನಮಂ |
ಕರದಿಂ ಪಿಡಿಯಲುಮಾರದೆ ನೋಡುತಲಿರ್ದರ್ಪಲರರಸರ್ ||

ಪರಿಕಿಸುತೇರಿಸಲಳವಲ್ಲೆನುತಂ ।
ಧರಣಿಪರರೆಬರ್ಕೆವ್ಮನೆ ನಿಂದರ್ ।
ತರುಣಿಯ ಬಯಕೆಯೆ ತಮಗೇಕೆನುತಂ ಮೌನದೆ ಕೆಲರಿರ್ದರ್॥ ೧೬

ಏರಿಸಿ ಬಾಣಾಸನದೊಳ್ತೊಳಗುವ ।
ನಾರಿಯ ಮಾಷಾಂತರದೋಳ್ಕಿಡಹಲು ।
ಧೀರಸುನೀಥನುರುಳ್ದಂ ಧರೆಯೊಳ್ಸಭಿಕರ್ಕೈವೊಯ್ಯೆ ॥
ಶೂರಾಗ್ರೇಸರ ಶಲ್ಯಂ ಕೆಡೆದಂ ।
ಧಾರುಣಿಗಾ ಮುದ್ರಾಂತರಮಾಗಲ್ ।
ನೀರೆಯ ಕಾಮಿಸಿ ಮಾಗಧ ಕೆಡೆದಂ ಸಾಸಿವೆಯನಿತರೊಳೆ ॥ ೧೭

ಹರಿದಶ್ವಸುತಂ ಬಾಣಾಸನಮಂ ।
ತುರಿಹದೊಳೇರಿಸಿ ರೋಮಾಂತರ ಮಾ ।
ಗಿರೆ ಕೆಡೆದಂ ಚೆಲ್ಲಿದ ಪೂಮಾಲೆಗಳುದಿರಲ್ಭೂತಳದೆ ॥
ಸರಭಸದಿಂ ಹಾಸ್ತಿಪಕನಮುದಿಸಿದ ।
ಕರಿ ಮುಳಿಸಿಂ ಕೆಡಹುವ ಲೀಲೆಯೊಳಾ ।
ನರರೆಲ್ಲರ್ನಗೆಗಡಲೊಳಗಾಳಲ್ಕಾಣ್ಬುತೆ ಸರಿದನವಂ ॥ ೧೮

ಕಾಮಿತ ಮೆಲ್ಲಂ ಬಯಲಾಗಲ್ಕಾ ।
ಭೂಮಿಪ ದುರ್ಯೋಧನ ಮುಖರೆಲ್ಲರ್ ।
ತಾಮಸದಿಂ ಕುಳ್ಳಿರೆ ಮುಂತೋರದೆ ತಂತಮ್ಮಾಸನದೆ ॥
ಭೂಮಿಸುರ ವೃಂದದೆ ಕುಳಿತಿಹ ಸು ।
ತ್ರಾಮ ಸುತಂ ಸಂಭ್ರಮದಿಂದೆಳ್ದಾ ।
ಭೂಮಿಗೆ ಮದಗಜ ಮೆಯ್ತೃರ್ಪಂದದೆ ಬಂದಂ ಸಮ್ಮದದಿಂ ॥ ೧೯

ಧರಣೀ ಸುರರತಿ ಹರುಷಂ ಗೊಂಡಿರೆ ।
ನರನಾ ರಂಗಸ್ಥಳಕೆಯ್ತಂದಾ ।
ಸರಳಂ ಬಿಲ್ಲೊಳೆ ಸೇರಿಸಿ ತುಡಲಾ ಚಣದೊಳ ಗುರುಳಿದುದು ॥

ನರಪರ್ಗವಮತಿ ಗೊಳಿಸಿದ ಯಂತ್ರಮಂ |
ದಿರದಾ ಧರೆಯೊಳ್ನೆರೆದಿರ್ದರಸರ್ |
ಬೆರಗಾಗಿಯೆ ನೋಡುತ್ತಿರೆ ಸೋದರರಾನಂದಂ ಗೊಳಲು || ೨೦

ಸುರಿದುದು ಮಂದಾರದ ಸುಮಸಂತತಿ |
ಭರದಿಂ ಮನಸಿಜ ಸನ್ನಿಭನಾಗಿಯೆ |
ಕರದೊಳ್ಬಿಲ್ಲಂ ಪಿಡಿದಿಹ ಪಾರ್ಥನ ಮಸ್ತಕದೊಳಗಾಗಳ್ ||
ಸರಸಿಜದಂದದಪಾಂಗವನಾ ಘೂ |
ವರಸುತೆ ನರನೊಳ್ಚೆಲ್ಲಿದ ಳೊಡನೆಯೆ |
ಹರುಷದಿ ಪೊಗಳಿದ ರಾಳಿಯರೆಲ್ಲರ್ವಿಜಯನ ಸಾಹಸಮಂ || ೨೧

ನಾರಿಯೆ ಕರದಿಂ ತುಡಿಸಿದಳಾ ಕ |
ಲ್ಹಾರದ ಮಾಲೆಯು ಪಾರ್ಥನ ಕಂಠದೊ |
ಳೋರಣದಿಂದಂ ಸಭೆ ಜಯಮೆಂದೆನೆ ವಾದ್ಯವು ಮೊಳಗಲ್ಕೆ ||
ರಾರಾಜಿಸಿದಂ ಸುರರಾಜಸುತಂ |
ಗೈರಿಕಮಂ ಕಾರುವ ಗಿರಿರಾಜಂ |
ತೋರುವ ತೆರದಿಂ ಹೃದಯದೊಳೊಪ್ಪಿರಲಾ ಕುಸುಮದ ಮಾಲೆ ||

ಪುಲ್ಲಿಗೆ ಸಮಮೆಂದೆಣಿಸುತೆ ರಾಜರ |
ನೆಲ್ಲರನಾ ಶೌರ್ಯಾಂಬುಧಿ ಶುಲ್ಕದ |
ಬಿಲ್ಲಂ ತಳೆದಾ ಕನ್ನೆಯು ನೊಯ್ಯುತ್ತಿಯ್ತುರುತಿರ್ಪಾಗಳ್ ||
ಖುಲ್ಲಂ ನಮ್ಮಂ ಗಣಿಸದೆ ಕೃಷ್ಣೆಯ |
ನೆಲ್ಲಿಯು ಪಾರ್ವಗೆ ಕೊಟ್ಟನೊ ಎನುತಂ |
ನಿಲ್ಲಿಸಿ ತಡೆದವರ್ಮುಳಿಸಿಂ ಭೂಮೀಪಾಲರ್ಪಾರ್ಥನನು || ೨೩

ದುರುಳರಿವಂದಿರ್ನರಪರ್ಗರ್ವದೆ |
ಬೆರೆದಿಹ ರಿವರಂ ದಂಡದೆ ಮರ್ದಿಸು |
ತೊರಗಿಪೆ ವೆನುತಂ ವಿಪ್ರರ್ಸಭೆಯಿಂ ದೇಳುತಿರಲ್ಕಾಗಳ್ ||

ನರನವರಂ ಸಂತವಿಸುತೆ ತಡೆದಾ ।
ತುರದಿಂ ಭೀಮನ ಕೂಡಿಯಿದಿರ್ಚಲ್ ।
ವರಕಾರ್ಮುಕವಂ ಸೆಳೆದಂ ತಲ್ಲಣಿಸಲ್ಕರಿ ಭೂಪಾಲರ್ ॥ ೨೪

ಹರಿದಶ್ವ ಸುತಂ ಪಾರ್ಥನೊಳಾಸಂ ।
ಗರಮಂ ಶಲ್ಯಂ ಭೀಮನೊಳತಿ ನಿ ।
ಷ್ಠುರದಿಂ ಕಾದುತಲಿರೆ ಸಮವಾಗಿಯೆ ನೋಡುತೆ ಸಂತಸದಿಂ ॥
ಸುರರುಂ ಮುನಿಗಳು ಮಿವರ ಪರಾಕ್ರಮ ।
ದಿರವಂ ಪೊಗಳುತೆ ಬಣ್ಣಿಸುತಿರ್ದರ್ ।
ಪರಿಪರಿಯಿಂದಂ ಪ್ರೇಕ್ಷಕರಂದದೆ ಸಂಗರ ರಂಗದೊಳು ॥ ೨೫

ಭೂಸುರನಿವನೆನುತಂ ರವಿತನಯಂ ।
ಗಾಸಿಯು ತೋರದೆ ಮೃದುಬಾಣಂಗಳ ।
ನಾಸುರದೊ ಳ್ಪಾರ್ಥನಮೇಲೆಸುತಿರಲವುಗಳ ಲೆಕ್ಕಿಸದೆ ॥
ಸಾಸದೆ ಮರ್ಮಸ್ಥಳದೊ ಳ್ಮಳಿಸಿಂ ।
ಭಾಸುರ ಶರಗಳ ನೆಚ್ಚರೆ ನೋಯಿಸ ।
ಲಾ ಸೂರಸುತಂ ಬ್ರಾಹ್ಮ್ಯಮೆಪಿರಿದೆಂ ದೋಡಿದ ನಳವಿಯೊಳು ॥ ೨೬

ಮರುತಾತ್ಮಜನಾಮದ್ರೇಶನೊಳತಿ ।
ಭರದಿಂ ಭುಜಸಂಗರದೊ ಳ್ಕಾದುತ ।
ಮುರವಣಿಸುತೆ ಬೀಳ್ಗೆಡಹಿದ ನವನಿಗೆ ಮೆಯ್ಮರೆ ವಂದದೊಳು ॥
ಕರುಣೆಯಿ ನಾಪ್ತಂ ಮಾತುಲ ನೆನುತಂ ।
ಧುರದೊ ಳ್ಕೊಲ್ಲದೆ ಯುಳುಹಿದನೆನುತಂ ।
ಸುರರೆಲ್ಲ ಭೀಮನ ಕೀರ್ತಿಸುತಿರೆ ವಿಸ್ಮಯಯೆನಲು ॥ ೨೭

ಅಳವಿಯೊಳೋಡಿದ ರವಿಸುತ ಶಲ್ಯರ್ ।
ತಿಳವೆವಿವಂದಿರ ಶೌರ್ಯವನೆನುತಂ ।
ಮುಳಸಿಂ ದೇಳ್ತರೆ ಧುರಕಾ ಕೃಷ್ಣಂ ತಡೆಯಲ್ನೀತಿಯೊಳು ॥

ಬಳಿಕತಿ ವಿಸ್ಮಯ ಲಜ್ಜಾ ಭರದಿಂ |
ದುಳಿದರ್ತಮ್ಮಯ ಪುರಿಗಳಿಗಾಗಲೆ |
ಬಲದೊಡನೆಯೆ ನಡೆವರ್ತಮಗೀಕೆಯ ಚಿಂತೆಯದೇಕೆನುತಂ || ೨೮

ನೋಯದೆ ಭೀಮಾರ್ಜುನರಾ ಯುದ್ಧದೆ |
ಸಾಯಂಕಾಲದೊಳಾ ಪಾಂಚಾಲಿಯ |
ಕಾಯುತೆ ತಂದಾ ಕುಂಬಾರನ ಮನೆಯೊಳವೊಕ್ಕತಿ ಭರದಿಂ ||
ತಾಯೆತಂದೆವೀ ಭಿಕ್ಷೆಯನೆನಲಾ |
ಮಾಯವ ನರಿಯದೆ ನೀವಯ್ವರು ವಿಾ |
ದಾಯವ ಭೋಗಿಸಿರೆಂದೊಳಗಿಂದಮೆ ನುಡಿದಳ್ಯಮತನುಜೆ || ೨೯

ಕುವರರೆ ಸಮವಾಗಿಯೆ ಭುಜಿಸುವುದೆಂ |
ದವಳೆರೆಯುತ್ತಂ ಪೊರಗೆಯ್ತಂದಾ |
ಯುವತಿಯನಾ ಪಾಂಚಾಲಿಯ ನೀಕ್ಷಿಸಿ ವಿಸ್ಮಿತೆಯಾಗುತ್ತಂ ||
ಕವಡರಿಯದೆ ನಾನೇನೆಂದೆನೊ ಕೇ |
ಶವನೇ ಬಲ್ಲನೆನುತ್ತಂ ಲಜ್ಜಾ |
ರ್ಣವದೊಳೆ ಮುಳುಗಿಯೆ ಧರ್ಮಕ್ಕಂಜುತೆ ನಿಂದಳ್ಮಾನದಲಿ || ೩೦

ಅನಿತರೊಳೈತಂದಾ ಯಮತನಯಂ |
ಘನಯೋಚನೆಯಿಂ ಮರುಗುವ ತಾಯಂ |
ವಿನಯದೆ ವಂದಿಸಿ ನುಡಿದಂ ಸಜ್ಜನಸಮ್ಮತ ಮಪ್ಪಂತೆ ||
ಜನನಿಯೆ ನಿನ್ನಯ ನುಡಿ ಪುಸಿಯಾಗದು |
ವನಿತೆಯೊಳೊಲ್ದಿಹೆ ವೆಲ್ಲಮರ್ಮದದಿಂ |
ಸನುಮತ ಮಾಗಿಯೆ ಭುಜಿಪುದು ತಕ್ಕುದು ಚಿಂತೆಯನುಳಿಯೆನುತೆ ||

ಮರುದಿನದುದಯದೊಳೀ ಭೂಪಾಲಂ |
ಚರರಂ ಕಳುಹಿಸಿ ಪರಿಕಿಸುತಿವರಂ |
ಧರಣೀಪಾಲರೆನುತ್ತಂ ತಿಳಿವತಿಹರುಷದೊಳಾಳುತ್ತಂ ||

ಕರೆತರುವುದು ನೀನೆನುತ ಪುರೋಹಿತ |
ವರನಂ ಕಳುಹಲ್ಕವನೈತಂದಾ |
ತರುಣರ ನೊಡಗೊಂಡಾ ರಾಜಗೃಹಕ್ಕೆಳ್ತಂದಂ ಭರದಿಂ || ೩೦

ಕುಳಿತಿರ ಲುಚಿತಾಸನಗಳೊಳವರಂ |
ನಲವಿಂ ದೀಕ್ಷಿಸಿ ಪೃಷದತನೂಜಂ |
ನೆಲೆಯಾವುದು ನಿಮ್ಮಯ ಕುಲವಾವುದು ತಿಳಿಪುವುದೆಂದೆನಲು ||
ಮುಳಿಸೇತಕೆ ನಾಂ ಪಾಂಡುಕುಮಾರರ್ |
ಸಲೆಲಾಕ್ಷಾಗೃಹ ಮೃತ್ಯುವ ಮುಖದಿಂ |
ದುಳಿದೆಯ್ತಂದೆವೆನುತ್ತಂ ನುಡಿಯಲವಂದಿರ ಪೊಗಳದನು || ೩೩

ಅವರಂ ಸತ್ಕರಿಸುತೆ ಸಂತಸದಿಂ |
ದವನೀಪಾಲಂ ಧರ್ಮತನೂಜಗೆ |
ಸುವಿಹಿತದಿಂ ಪೇಳಿದ ನತಿಸಂತಸವಾದುದು ತನಗೀಗ ||
ಕುವರಂ ನಿಮ್ಮೊಳು ಲಕ್ಷ್ಯವ ಭೇದಿಸಿ |
ದವನಾವನೊ ತಾಂ ನಾಳೆಯೆನಮ್ಮಾ |
ಕುವರಿಯ ಕೈವಿಡಿವುದು ವಿಧಿಯಿಂದಮೆನುತ್ತಂ ನಿರವಿಸಿದಂ || ೩೪

ಅದನಾಲಿಸಿ ಧರ್ಮಾತ್ಮಜನೆಂದಂ |
ಮುದದಿಂ ರಾಜನೆ ನಾವಯ್ವರುಮುಂ |
ಸುದತಿಯ ಪಾಣಿಗ್ರಹಣಕೆ ಕುಳ್ಳಿರ್ದಪೆವೀ ಕ್ರಮದಿಂದ ||
ಬೆದರದಿರೆಲ್ಲರ್ಕನ್ನೆಯ ಭೋಗಿಸು |
ವುದೆನುತೆ ನಮ್ಮೊಳ್ಸಮಯಂ ನಡೆದಿಹು |
ದಿದಕೆ ವಿರೋಧಂ ಬಾರದತೆರದಿಂ ಮದುವೆಯ ಮಾಡುವುದು ||೩೫

ಬೆರಗಾಗುತಲಯ್ವರ್ಗಂಡದಿರ್ |
ಸರಿಯೇ ಸತಿಯೊಬ್ಬಳಿಗೆಂದೆನುತಂ |
ಧರಣೀ ಪಾಲಂ ಚಿಂತಿಸಿ ಮೌನದೆ ಮುಂದೋರದೆ ಯಿರಲು ||

ವರಮುನಿ ವೇದವ್ಯಾಸಂ ನಡೆತರೆ ।
ಹರುಷದೊಳವನಂ ಸತ್ಕರಿಸಿಯೆ ಭೂ ।
ವರನತಿ ವಿನಯದೆ ತನ್ನಯ ಚಿಂತೆಯ ಬಿನ್ನವಿಸಿದನಾಗಳ್ ॥ ೩೬

ಲಾಲಿಸಿ ಮುನಿವರ ನೊಲವಿಂದಂ ಕುಲ ।
ಪಾಲಿಕೆಯೆನಿಪಾ ಬಾಲೆಯು ಪಾಂಡವ ।
ರೋಳಿಯೊಳಿರಿಸಿಯೆ ನುಡಿದಂ ಭೂಪತಿಯೆ ಚಿಂತಿಸಬೇಡಿದಕೆ ॥
ಪೇಳುವೆ ನಿದರ ನಿಧಾನವನೆಲ್ಲವ ।
ಬಾಲೆಯ ಪಿಂತಣ ಜನ್ಮಂಗಳೊಳೀ ।
ಶೀಲವೆಸಂದಿಹುದದನನುಸರಿಸಿಯೆ ನಡೆವುದು ಹಿತಮಲ್ತೆ ॥ ೩೭

ಭೂಪನೆ ಕೇಳ್ಜನ್ಮಾಂತರದೊಳಗೀ ।
ಸೃೖಪಿನ ಕಣಿಯಾದಬಲೆಯೆ ಚೆಲ್ವಿನ ।
ರೂಪಿಂ ನಾಳಾಯನಿ ಯೆಂದೆನಿಸುತೆ ಜನರೆಲ್ಲರ್ಪೊಗಳೆ ॥
ತಾಪಸ ಮೌದ್ಗಲ್ಯಂ ಪತಿ ವೃದ್ಧಕು ।
ರೂಪಿಯು ಕುಷ್ಠವ್ಯಾಧಿಯೊಳಿರೆತಾಂ ।
ಕೋಪಿಸದೆಯೆ ಸೇವಿಸುತಿರ್ದಾಳು ಹದಿಬದೆಯತಿಭಕ್ತಿಯೊಳು॥ ೩೮

ಒಂದುದಿನದೊಳಾ ವನಿತೆಯ ಶೀಲವ ।
ಚಂದದೆ ಪರುಕಿಸಿ ಮೆಚ್ಚುತೆ ಮುನಿಪತಿ ।
ಮಂದಗಮನೆಯಭಿಲಾಷೆಯನಿಂಗಿತದಿಂದಂ ತಾಂತಿಳಿದು ॥
ಸುಂದರ ರೂಪುಗ ಳೈದನೆತಾಳ್ದಾ ।
ನಂದಂ ಗೊಳಿಸಿಯೆ ಸತಿಯೊಳುರಮಿಸಿದ ।
ಕುಂದದ ಭೋಗಗಳಿಂದಂ ಪಲದಿನಮೆಡೆವಿಡದೆಯೆ ಸುಖದಿಂ ॥ ೩೯

ಇದನನುಸರಿಸಿಯೆ ಯಿಾಜನ್ಮದೊಳಂ ।
ಸುದತಿಗೆ ಸಂದಿಹುದೀ ಪಂಚಪತಿ ।
ತ್ವದ ಭಾವವು ತಾಂತಪ್ಪಿಸಲರಿದಾ ಸಂಚಿತಫಲಗಳನು ॥

ಅದರಿಂ ಪಿಂತಣ ಚರಿತೆಯನಾಲಿಸು |
ಪದಪಿಂದಾತನೆ ಪತಿಯಾಗಿರಲತಿ |
ಮುದದಿಂ ಸೇವಿಸುತಿಂದ್ರಸೇನೆಯೆನಿಪಾಖ್ಯೆಯೊಳೊಪ್ಪಿದಳು || ೪೦

ಮುನಿಪನು ತನ್ನಯ ಜಪತಪಕರ್ಮ |
ಕ್ಕನುದಿನಮುಂ ವಿಘ್ನಗಳೊದಗುವುವೆಂ |
ದೆನುತಂ ಪತ್ನಿಯನುಳಿಯಲ್ಮತ್ತಂ ಕಾಮಿಸಿಬೇಡಲ್ಕೆ ||
ವನಿತೆಯೆ ನೀನತಿ ನಿಯಮದೆ ಶೂಲಿಯ |
ಮನವೊಪ್ಪುವವೊಲ್ತಪವಂವಿರಚಿಸೆ |
ಮನಸಿಜವೈರಿಯೆ ಕರುಣಿಪನೆನುತಂ ಬೆಸಸಿದನಾಸತಿಗೆ || ೪೧

ಯುವತಿಯು ನಿಯಮದೆ ತಪವಂ ವಿರಚಿಸ |
ಲವಳಕುಟಿಲಭಕ್ತಿಗೆ ಮೆಚ್ಚುತಲಾ |
ಶಿವನೈತಂದಿದಿರೊಳೆ ನಿಂದಿರಲಾತನ ಕಾಣುತೆ ಸಾಧ್ವೀ ||
ಸವಿನಯದಿಂದೆರಗಲ್ಕೆಲೆ ತರುಣೀ |
ಧವನಂ ಬಯಸಿಹೆ ತಪ್ಪದೆ ಮುಂತಣ |
ಭವದೊಳ್ಪತಿಗಳ ನೈವರ ವೀರರ ಪೊಂದುವೆ ಸುಂದರರಾ || ೪೨

ದೇವಿಯೆ ಚಿಂತೆಯನುಳಿದೀಗಳ್ನೀಂ |
ದೇವನದೀಜಲದೊಳ್ಮುಳುಗಿದೊಡಾ |
ದೇವಸಮಾನನ ವೀರನನೋರ್ವನ ಕಾಣ್ಬೈಸುಂದರನ ||
ಭಾವಿಸುತವನಂ ಕರೆದುತರುವುದೆಂ |
ದಾ ವೇಳೆಯೊಳಾಪರಶಿವನಂತ |
ರ್ಭಾವವ ಪಡೆಯಲ್ಬಂದಳು ಸತಿಯಾ ಗಂಗಾತೀರಕ್ಕೆ || ೪೩

ಮುಳುಗುತೆ ಗಂಗಾನದಿಯೊಳ್ಸ್ವರ್ಣದ |
ನಳಿನಂಗಳನಶ್ರುಗಳಿಂ ತೋಯಿಸಿ |
ಪೊಳೆಯುದಡಕ್ಕೈತರಲಲ್ಲಿರ್ದನು ಮಾರನವೋಲೊರ್ವಂ ||

ತೊಳಗುವ ಸಾಸಿರ ಕಂಗಳನೊಪ್ಪುವ |
ಚೆಲುವನು ಸುರಪತಿ ಕಾಣುತಲೀಕೆಯು |
ನೆಳನಗೆಯಿಂ ಬೆಸಗೊಂಡನು ನೀನಾರೆಂದೆನುತಕ್ಕರೆಯಿಂ || ೪೪

ಚಿಂತಿಪೆಯೇತಕೆ ತರುಣೀನಿನ್ನಯ |
ಪಂತವಿದೇನೆನೆ ಪೇಳುವೆನೆಲ್ಲವ |
ನಂತರಿಸದೆತನ್ನೊಡನೆಯ್ತರ್ಪುದೆನಲ್ಕವ ನೊಡಬಡಲು ||
ಕಾಂತೆಯು ಪುರುಹೂತನ ನೊಡಗೊಂಡಾ |
ಕಂತುಹರನ ಸನ್ನಿಧಿಗೈತಂದಳ್ |
ಸಂತಸದಿಂ ತನ್ನಯ ಕಾಮಿತಗಳು ಕೈಸಾರುವುವೆನುತಂ || ೪೫

ಮೇರುಗಿರಿಯಸಾನುವ್ರೊಳೊಂದೆಡೆಶಾಂ |
ನಾರಿಯಕೂಡಿಯೆ ಸುಖಿಸುತಮಿರ್ಪಾ |
ಧೀರನನೀಕ್ಷಿಸುತೊರ್ವನ ಮುಳಿಸಿಂದಿಂದ್ರಂ ಗದರಿಸುತ ||
ಆರೆಲೆ ಮೂಢಾತ್ಮಕ ತನ್ನಂ ಬೃಂ |
ದಾರಕವಿಭುವಂ ಗಣಿಸಿದೆಯಿದಿರೊಳ್ |
ತೋರುತೆ ಕೇಳಿಯ ನವಮತಿಗೊಳಿಸಿದೆ ಯೆಂದಂ ಸ್ಯೈರಿಸದೆ|| ೪೬

ಗಿರಿಜೆಯು ಮಾಶಂಕರನುಂ ಕ್ರೀಡಿಸು |
ತಿರುವುದನರಿದಾಖಂಡಲನಾಗಳ್ |
ಬೆರಗಾಗುತೆ ಕಂಬದ ತೆರನಾಗಿಯೆ ನಿಂದಿರೆ ಮೌನದಲಿ ||
ಕರದಿಂ ಜಾರಿದುದಾಗಳೆ ವಜ್ರವು |
ಕಿರುನಗೆಯಿಂ ದೀಕ್ಷಿಸಿ ಗರ್ಜಿಸೆ ಶಂ |
ಕರ ನತಿಕೋಪದೆ ನಿಟ್ಟಿಸುತಿವನಂ ಗುಹೆಯನೆ ನೋಡಿದನು|| ೪೭

ಶಿವನಾಣತಿಯಿಂದಾಗಳೆ ತೆರೆದುದು |
ಗವಿಯಕವಾಟಮುದೊಳಗಿರ್ದಾವಾ |
ಸವರಂ ನಾಲ್ವರ ಘೋರಾಕೃತಿಗಳ ತೋರುತಲಿಂದ್ರಂಗೆ ||

ಭವಸುರೆಮುಳಿಸಿಂದಿಂತೆಂದಂ ನೀ |
ನಿವರಂದದೊಳೀ ನರಕವ ಪೋಲ್ವಾ |
ವಿವರದೊಳಿಹುದು ಪದಚ್ಯುತನಾಗುತೆ ಭೋಗಂಗಳನುಳಿದು || ೪೮

ನಡುಗುತಲಾಖಂಡಲ ನಾಗಳೆ ತಾಂ |
ಮೃಡನಡಿಯೊಳೆ ಬಿದ್ದೆಲೆದೇವಾ ನಿ |
ನ್ನಡಿಯಾಳನ ತಪ್ಪುಗಳಂ ಮನ್ನಿಸಿ ರಕ್ಷಿಪುದೊಲವಿಂದಂ ||
ಒಡೆಯನೆ ತಾನೇಂ ಕಾಲನೆ ತ್ರಿಪುರದ |
ಗಡಣವೆಮೆಮ್ಮನ್ಮಥನೇ ನಿನ್ನಯ |
ಕಡುಮುಳಿಸಿಗೆ ಗುರಿಮಾಳ್ಪೆಯ ಕರುಣಿಸು ಶಂಕರ ಕಿಂಕರನಾ ||

ನಗುತಂ ಬೆಸಸಿದ ಮೃತ್ಯುಂಜಯನಾ |
ಮಘುವಂತಂಗೆಲೆ ಸುತ್ರಾಮನೆಯಿದು |
ಪಗೆಯುಲೊಪ್ಪಿದೆ ಮನ್ನಿಪೆ ನಿನ್ನಯ ತಪ್ಪನು ತಾನೀಗ ||
ಸುಗುಣದಿನಿವರುಂ ನೀನುಂ ಭೂಮಿಯೊ |
ಳೊಗೆದವತರಿಸುವುದಂಶಂಗಳಿಂದಂ |
ಬಗೆಮೆಚ್ಚುವಭೋಗಗಳ ನನುಭವಿಸಿಯೆ ಪಿಂದಿರುಗೆಂದು||೫೦

ವಿಮಲರೆ ನಿಮ್ಮಂಶಗಳಿಂ ಜನಿಪುದು |
ಶಮನನು ಮನಿಲನು ಮಿಂದ್ರನೆನೀನುಂ |
ಕ್ರಮದಿಂದಾಶ್ವಿನರುಂ ನಿಮ್ಮುದ್ಭವಕಾರಣರೆಂದೆನಿಸಿ ||
ಅಮಳಪತಿವ್ರತೆ ಯಿವಳುಂ ಪುಟ್ಟಿಯೆ |
ನಿಮಗನುಕೂಲದ ಸತಿಯಹಳೆನುತಂ |
ಪ್ರಮಥಾದಿಪನೆಂದಂತರ್ಧಾನದೆ ಮರೆಯಾದಂ ಬಳಿಕ || ೫೧

ಅವರೈವರು ವಿಾ ಪಾಂಡವರಾಗಿಯೆ |
ಬುವಿಯೊಳ್ಜನಿಸಿಹ ರಾಹದಿಬದೆಯೇ |
ಸುವಿಶೇಷದ ಸುಕೃತದೆ ಸುತೆಯಾಗಿರ್ಪಳು ನಿನಗೀ ಭವದೆ ||

ಅವನೀಶನೆನೀಂ ಪರಿಕಿಪುದೆನುತಂ ।
ತವಸಿಯು ನೃಪನಿಗೆ ದಿವ್ಯದೃಷ್ಟಿಯಿಂ ।
ದವೆತೋರಿದನಾ ನಿರ್ಜರರೊಡನೊಪ್ಪುವ ಸಾಧ್ವೀಮಣಿಯಾ ೫೨

ನರಪತಿಯಾಗಳ್ ತನ್ನಯ ಮನದೊಳ್ ।
ಬೆರಗುಂ ಸಂತಸಮುಂ ಪೊರವೊಣ್ಮು ।
ತ್ತಿರಲಾ ಶಂಕರನಾಜ್ಞೆಯೆ ತಥ್ಯಮಿದೆನುತಂ ನಿಶ್ಚಯಿಸಿ ॥
ತರುಣಿಯನಾ ಪಾಂಡವರ್ಗೈವರ್ಗಂ ।
ಭರದಿಂ ಮದುವೆಯ ಮಾಳ್ಪುದನಂಗೀ ।
ಕರಿಸಿದ ನಾನೇ ಜಗದೊಳ್ಧನ್ಯನೆನುತ್ತಂ ಹರುಷದಲಿ ॥ ೫೩

ತದುಪರಿಯಾ ವಾಸರದೊಳವಂದಿರ್ ।
ಹೃದಯದೊಳಂ ಪ್ರಾಣಿಗಳೊಳವೊಪ್ಪಿರ ।
ಲೊದವಿದ ಕೌತುಕಮತಿಸಂಭ್ರಮದಿಂದೊಡನೆಯೆ ನಡೆತಂದು ॥
ಪದಪಿಂ ಧರಿಸಿಯೆ ಭೂಷಣಗಳನಾ ।
ಮದುವೆಯಮಂಟಪಕಲ್ಲಿಯಜನರತಿ ।
ಮುದದಿಂದಂ ವಂದಿಸಲವರಂ ಮನ್ನಿಸುತಾ ಪಾಂಡುಸುತರ್ ॥ ೫೪

ಬಳಿಕಯುಧಿಷ್ಠಿರ ನೊಲವಿಂ ಮಂಟಪ ।
ದೊಳವೊಕ್ಕಾಪಾರ್ಷದ ಭೂಪನ ಕರ ।
ತಳದಾಲಂಬನದಿಂ ವೈಡೂರ್ಯದ ಸೋಪಾನವನಡರ್ದು ॥
ಕುಲದ ಪುರೋಹಿತನಿರೆ ಮುಂಗಡೆಯೊಳ್ ।
ತೊಳಗುವ ವಸ್ತುಗಳಿಂ ಪರಿರಂಜಿಪ ।
ಸುಲಲಿತವೇದಿಗೆ ಬಂದಾಸಂದದೆ ಮಂಡಿಸಿದಂ ಮುದದಿಂ ॥ ೫೫

ಒಡನೆಯೆಕುಲಪಾಲಿಕೆಯರ್ನೆರೆದಾ ।
ಮಡದಿಗೆ ಮಿಸಿಸಿಯೆ ಚೀನಾಂಬರಗಳ ।
ನುಡಿಸಿ ವಿಭೂಷಣತತಿಯುಂ ತೊಡಿಸಿದರತಿಕೌಶಲದಿಂದ ॥

ಕಡುರಾಗದಿ ನಾಮಿಸುನಿಯು ಪೀಠದೊ |
ಳೊಡೆಯನಕೆಲದೊಳ್ಕುಳ್ಳಿರಿಸಿಯೆ ಬಡ |
ನಡುವಿನ ಜಾಣೆಯು ರಾಜೀವಾಭಾನನವ ಪಾಡಿದರೊಲವಿಂದ ||೫೬||

ಹಿತದಿಂ ವಧುವ್ರೊಡನಾ ಧರ್ಮಸುತಂ |
ಹುತವಹನಂ ಬಲವಂದಂ ಧೌಮ್ಯಂ |
ಜತೆಯೊಳ್ಬರೆ ಪೊಗೆವೆರೆದುರಿಯಂ ಸುತ್ತಿದರೆಲ್ಲರ್ಬಳಕ ||
ಸತಿಯೊಡವೆರೆದಾ ಹಂಸಂ ಭ್ರಮರದ |
ಜತೆಯೊಳ್ಕೆಂದಾವರೆಯುರುಷಂಡವ |
ನತಿಶಯದಿಂ ಸುತ್ತುತೆಬರ್ಪನ್ರೊಲಾ ವೇದೀತಳದೆಡೆಯೊಳ್ ||೫೭||

ಗುರುವಿನಬೆಸನಂ ಮನ್ನಿಸುತಾಗಳ್ |
ಭರದಿಂಚೆಳ್ಳಿದಳುರಿಯೊಳ್ಪೊನ್ನೆ |
ಲ್ಲರಳಂ ಗುಣಶಾಲಿನಿಯಾ ಪಾಂಚಾಲೇಶನ ಸುಕುಮಾರಿ ||
ಮರುತನ ವೇಗದಿನೂರ್ಮಿಯೆ ತಾಂ ಸಾ |
ಗರದೊಳ್ಪವಳದ ಮಣಿಗಳಚೆಲ್ಲುವ |
ತೆರದಿಂ ಮಂತ್ರಧ್ವನಿಗಳ್ಮೊರೆಯಲ್ ವೇದಿಯಬಳಯಲ್ಲಿ ||೫೮||

ಇದನಿಕ್ಕುವದಿಂದರಿಭೂಪಾಲರ |
ಸುದತಿಯರಾ ಬೈತಲೆಯೊಳ್ಮರೆವಾ |
ಪದುಮರಾಗದರಳುಗಳೊಳ್ಪಹರಿಪುದೆನುತಂತೋರ್ಪಂತೆ ||
ಮುದದಿಂಧರ್ಮಜನಾಗಳ್ಕರದಿಂ |
ವಧುವಿನ ಕಾಲ್ಪಿಡಿದಿರಿಸಿದನೊಪ್ಪುವ |
ಪದಮಲದಶ್ಮದೊಳಾಗುರುವಾಣತಿಯಿತ್ತವ್ರೊಲಾವರನು ||೫೯||

ಕುರುರಾಜಕುಮಾರರು ಬಳಿಕಂ ಸಾ |
ಲ್ವರು ವಿಪಾಪರಿಯೊಳ್ಬೆಮರಿಂ ತೊಯ್ದಿಹ |
ಕರಿಪಸ್ತಾಗ್ರದತೆರದಿಂ ದೊಪ್ಪುವಪಾಂಚಾಲೀವಧುವಾ ||

ಕರಮಂ ಪಿಡಿದರ್ಜುನದೊಳ್ಕರಿಣಿಯು |
ಕರಮಂ ಪಿಡಿವಾಯುಧಾಧಿಪನಾ |
ಪರಿಯಿಂ ಕ್ರಮದಿಂಭೀಮಾರ್ಜುನ ಮಾದ್ರೀಸುತರೊಲವಿಂದ ||೬೦||

ನೀರಾಜನ ಮಂಗಳಮಂ ತೀರ್ಚಿದ |
ವೀರಕುಮಾರರೊಳತ್ತಂ ಬಳುವಳಿ |
ಗಾರಾಶಿಯು ಪೊಂಗಳನೆಳವೆಂಡಿರ ಬಳಗಮನೈನೂರಂ ||
ತೇರುಗಳಂ ನೂರಾರಂ ಮೇಣಾ |
ವಾರುವೆಗಳನಯುತವ ನಾಮದಗಜ |
ವಾರವ ಸಾಸಿರವಂ ಪ್ರಿಯದಿಂದಮೆ ಜಾಮಾತರ್ಗಾಗಳ್ ||೬೧||

ಕುರುವರನಾ ಪಾಂಡವರೇಳಿಗೆಯುಂ |
ಚರರಿಂ ಕೇಳುತೆತನ್ನಯ ಮನದೊಳ್ |
ಮರುಗುತೆ ಬಲಮಂ ಕೂಡಿಸಿಕೊಂಡೈತಂದಾ ಪಾರ್ಷವನಾ ||
ಪುರಮಂ ಮುತ್ತಿದನವರುಬ್ಬಟೆಯುಂ |
ಪರಿಪರಿಪೆನೆನುತ್ತುರೆ ಮುಳಿಸಿಂದಂ |
ನರಪಾಲರ್ನೆರೆದರು ಸಂಗರಕವನೊಡನತಿ ಸಂಭ್ರಮದಿಂ ||೬೨||

ಸುರಸುಂದರಿಯುತ್ಕೌತುಕದಿಂದಮೆ |
ಪರಿಕಿಸುತಿರಲಾದ್ರುಪದನ ಸೈನ್ಯಂ |
ಬೆರೆಯುತ ಶಸ್ತ್ರಾಸ್ತ್ರಂಗಳಪಿಡಿದುಬ್ಬರದಿಂ ಪುರದಿಂದ ||
ಪೊರಮಟ್ಟುದು ಶೂರರಬಿರುದುಗಳಂ |
ಧುರದೊಳಗರಿವೀರರ ಚೆಂಡಾಡಿಯೆ |
ತಿರುಗಿಪೆವೆನುತಂ ಸಾಸವನುಡಿಗಳನಾಡುತೆ ಸಂಭ್ರಮದಿಂ ||೬೩||

ಅನಿತರೊಳಾ ಸೈನಿಕರಬ್ಬರಿಸುವ |
ಘನರವಮಂ ಕೇಳ್ದಾ ಪಾಂಡುಸುತರ್ |
ಮನದೊಳ್ಕೋಪಿಸಿ ವಿಕ್ರಮಮಂ ತೋರಿಸುತೀಕ್ಷಾತ್ರವರ ||

ತನುವಂ ಸಿಗಿದೊಟ್ಟುವೆವೆನುತಂ ಸ್ಯಂ |
ದನಗಳನಡರುತಲೇಳ್ತಂದಾಯೋ |
ಧನರಂಗವ ನೊಳಪೊಕ್ಕರಿವೀರರ ನಿದಿರಿಸಿದರ್ಮ್ಮಳಿದು ||೬೪||

ಹರಿದಶ್ವಸುತಂಮೇಣ್ ಸೌಬಲನೆಂ |
ಖರತರದಂಷ್ಟ್ರಗಳೊಪ್ಪಿರೆ ಕೌರವ |
ವರನೆಂದೆನಿಸುವ ಘೋರವಿಷಂ ಪರಿದುರ್ಕುತ್ತಿರೆ ಮೊರೆದು ||
ಕುರುಬಲಮೆಂಬಾ ಭುಜಗವನಾಗಳ್ |
ಭರದಿಂದರ್ಜುನ ಕಾರ್ಮುಕಮೆನಿಪ್ಪುದೆ |
ತಿರುಗಿಸಿದುದು ವಿಸ್ಫಾರದಮಂತ್ರದಿಸುರ್ಕದತೆರದಿಂದ ||೬೫||

ಫಲುಗುಣಸಾಭೀಮನ ನೊಡಗೊಂಡುರು |
ಮುಳಿಸಿಂದೊಳಪೊಕ್ಕಳವಿಯನರಿಗಳ |
ಬಲಮಂತರಿದೊಟ್ಟುತಲಿರ್ದನು ಸುರರಚ್ಚರಿಗೊಳುವಂತೆ ||
ಛಲದಿಂ ಲಂಬೋದರನಂ ಕೂಡುತ |
ಅಳವಿಯೊಳಾಶಿಖಿವಾಹಂ ನಡೆದಾ |
ಖಳನಾಗಾಸುರ ಸೇನೆಯ ಸದೆಬಡಿವಂದದೆ ಕೋಪಿಸುತ ||೬೬||

ಅಂದಂಗೆಟ್ಟಾ ಕುರುರಾಜಬಲಂ |
ಕಂದುತೆಮುರಿದಿಹಕೇತನದಿಂದಂ |
ಪಿಂದಿರುಗಿದುದಾ ಪುರಕೆ ಪುರೋಚನನಂ ನಿಂದಿಸುತಾಗ ||
ಚಂದದಿನರಿಗಳ ಗೆಲ್ದಾ ಕುಂತೀ |
ನಂದನರುಂ ಜಯಮುಂ ತಳೆಯುತೆನಡೆ |
ತಂದಾದ್ರುಪದನ ಮಂದಿರದೊಳು ಸುಖದಿಂದಲಿ ಸಂದಿರ್ದರ್ ||೬೭||

ತನುಜನ ದುರ್ಮಂತ್ರಗಳಂ ನಿಂದಿಸಿ |
ಮನದೊಳ್ಮರುಗುತೆ ಭೀಷ್ಮದ್ರೋಣರ |
ಸನುಮತದಿಂಧೃತರಾಷ್ಟ್ರವನಿಪಂ ಪಾಂಡುಕುಮಾರರಸು ||

ಸನಿಹಕೆ ತರ್ಪುದು ನೆಲದರ್ಧವನಾಂ |
ತನಯುರ್ಗಿತ್ತಪೆನೆನುತಂ ಕಳುಹಲು |
ಜನರಂಮನ್ನಿಸಿನಡೆತಂದರ್ಥಾರದಿಂದಂ ಪಾಂಡುಸುತರ್ ||೧೮||

ಸಿರಿಯುರಸಂ ಮೇಣ್ ದ್ರುಪದನಕೂಡಿಯೆ |
ಪರಿರಂಜಿಸಪಾಂಡವರಂಕಂಡಾ |
ನರಪಾಲಂ ಸಂತಸದಿಂ ಕುಶಲವ ಬೆಸಗೊಂಡಂಬಳಿಕ ||
ಕುರುವೀರದುರ್ವ್ಯಾಸದೆನೊಂದರು |
ಪುರಜನರೆಲ್ಲರ್ ಹಿತವೆಂಬಯಸುತೆ |
ಹರುಷಿಸಿಕೊಂಡಾಡಿದರಾ ವೀರರಶೌರ್‍ಯವನಕ್ಕರೆಯಿಂ ||೧೯||

ಬಳಿಕಲಿಶುಭವಾಸರದೊಳಗೊಂದರೊ |
ಳೆಯುರಸಂಧರ್ಮಜನಿಗೆ ರಾಜ್ಯವ |
ನೊಲುಮೆಯಿನಿತ್ತಪೆನೆನುತಂ ನಿರ್ಣಯುವಾಗಿಸಿ ಪುರವರವ ||
ಚೆಲುವಿಂ ಸಿಂಗರಿಸಿದನಾ ದಿನದೊಳ್ |
ತೊಳಗುವ ಮಂಟಪಕ್ಕೈತಂದಂ ಭೂ |
ತಿಲಕಂಮಂತ್ರಿಗಳುಮನಾವಿಪ್ರರಸಂದಣಿಯೊಡಗೊಂಡು ||೨೦||

ವಿನುತೌದುಂಬರ ಭದ್ರಾಸನದೊಳ್ |
ಜನಪಾಲಸುತಂ ಮಂಡಿಸಲಾಗಳ್ |
ಜನನಿಸದಂಪ್ರೋಕ್ಷಿಮುದಾಶಂಖದೊಳಭಿಷೇಕವನರುಹಿ ||
ಜನರಾನಂದದಿ ಜಯ ಜಯ ಜಯ ಎಂ |
ದೆನುತಂ ಕೂಗಿದರೆತ್ತೆತಲುವಾ |
ತನಕೀರ್ತಿಯ ಕೊಂಡಾಡಿದರಪ್ಸರರುತ್ಸವದಿಂಸಭದಿ ||೨೧||

ವರಮುನಿ ವೇದವ್ಯಾಸಂ ಧೌಮ್ಯಂ |
ಸುರಮುನಿಗಳ್ಗೆಣೆಯುಹವಿಪ್ರವರರ್ |
ವರಮಂತ್ರಗಳಿಂ ಪಾವನವೆನಿಸಿದಪೊಂಗೊಡಮುದಕವನು ||

ಭರದಿಂ ರತ್ನವ ಧರ್ಭ್ರಾಂಕುರಗಳ |
ಕರದಿಂ ಪಿಡಿದಾನರಪನ ಶಿರದೊಳ್ |
ಗರೆದರ್ಬಾಳುಗೆ ಸುಚಿರಮೆನುತ್ತಂ ಹರಸುತೆ ಹರುಷದಲಿ ||೭೦||
ಅವನಂಬುಧಿಮೇಖಲೆಯೈಂದೆನಿಸಿ |
ರ್ಪವನಿಯು ತಳೆದಂಭುಜದೊಳಗಾಗಳ್ |
ಯುವತಿಯರಾತನ ವಿಕ್ರಮ ಶಿಖೆಯುಂಕುರದಂದದಿ ತೋರ್ಪ ||
ನವಮಣಿ ಪಾತ್ರೆಯೊಳಾ ಕರ್ಪೂರ ಖಂ ||
ಡವ ಬೆಳಗಿಸಿ ಮಂಗಳದಾರತಿಯಂ |
ನಿವಳಿಸಿದರ್ಭೂಪಾಲಗೆ ಪಾಡುತ ಮಂಗಳ ಪದಗಳನು ||೭೩||
ನಿರುಕಿಪೆನೀಗಳ್ಸಿಂಗಾರಿಸಿದೀ |
ಪುರಮನೆನುತ್ತಂ ಭೂಪಂ ಮದಿಸಿದ |
ಕರಿಯನಡರ್ದತಿ ಸಂಭ್ರಮದಿಂದಂ ಬರುತಿರಲಾಪಥದೆ ||
ವರತಾರಕದಂದದೆ ಕೆದರಿರುತಿ |
ರ್ಪರಳುಗಳೊಪ್ಪಿರಲೈತಂದಂ ಭಾ |
ಸ್ಕರನವೊಲಾ ವರರಾಜಮಾರ್ಗದೊಳಗೀಕ್ಷಿಸುತೆಡಬಲವ ||೭೪||
ಮೊಲೆಯುಂ ತೊಡೆಯುಂ ಕುಂಭಹಸ್ತಿಗಳ |
ವೊಲು ತೋರಲ್ತಾಂ ಹಸ್ತಿನಿಯರೆ ದಿಟ |
ಜಲಮುಚದೊಳ್ತೋರುವ ಮಿಂಚೆನಿಪುದು ತಪ್ಪದೆ ದೃಷ್ಟಿಸಿದ ||
ಚೆಲುವೆಯರಿಗೆ ಸೋಲದರಿಲ್ಲೆನಲಾ |
ಲಲನೆಯರತಿ ಸಂಭ್ರಮದಿಂ ಚೆಲ್ಲಿದ |
ರಲರಂಬನ ಬಾಣವ ಪೋಲ್ವ ಕಟಾಕ್ಷವನಾನೃಪನಲ್ಲಿ ||೭೫||
ಜನಪತಿಯಾಪುರಮಂ ಬಳಸುತ ಬಂ |
ದನು ಸಕಲಜನಂ ನೋಡುತೆ ಜಯಜಯ |
ನಿನದದಿ ವಂದಿಸುತ್ತೈತರಲವರಂ ಮನ್ನಿಸುತೊಲವಿಂದಂ ||
ಅನುಜರ ಕೂಡಿಯೆ ಸಂತಸದಿಂದಂ |
ಘನವಿಭವಂಗಳ ನನುಭವಿಸುತ್ತಂ |
ದಿನಗಳಪಲವಂ ನೂಕಿದನಾ ಕರಿಪುರದೊಳ್ಸುಖದಿಂದಂ ||೭೬||

ಕುರುವರನಾಣತಿಯಿಂ ಪಾಂಡುಸುತಂ |
ಹರಿಯೊಡನನುಜರನಾ ಸೇನೆಗಳಿಂ |
ತೆರಳಿದನೊಂದಿನ ಮುನ್ನಿನ ಭೂಮಿಪರಾಳಿದ ಪಟ್ಟಣಕೆ ||
ಇರುವುದು ಕಾಡೊಳಗೆಂದೆನುತಂ ತಾ |
ನುರುಚಿಂತೆಯೊಳಿರಲಿಲ್ಲಿಗೆ ಬಂದಾ |
ಸುರವರ್ಧಕಿ ಮಣಿದಾ ಶೌರಿಗೆ ಬಿನ್ನವಿಸಿದನೀಪರಿಯೊಳ್ ||೭೭||

ಹರಿಯೇ ಕೇಳುವುದಿಂದ್ರಂ ಮುನ್ನಂ |
ವರಪುರಮಂ ತನ್ನಯ ಪೆಸರಿಂ ಸಮೆ |
ದುರುಭೋಗಂಗಳನನುಭವಿಸಿದ ನಿಂದ್ರಪ್ರಸ್ಥಮೆನಲ್ಕೆ ||
ಕರುಣಿಸೆನಲ್ಕಾಣತಿಗುಡೆ ದೇವಂ |
ಭರದಿಂತ್ವಷ್ಟೃವೆ ನಿರ್ಮಿಸಿದನದಂ |
ಧರೆಯೊಳ್ಪ್ರಭಾಕರಮೆಂದೆನಿಪಂದದ ಸುಂದರದಿಂದ ||೭೮||

ತೋರಿದನಾಧರ್ಮಜನಿಗೆ ತ್ವಷ್ಟೃಂ |
ವೀರನೆ ಪರಿಕಿಸು ಸೌಧವನೀಗಳ್ |
ಸಾರತರಂಗಳೆನಿಪ್ಪುವು ವಸ್ತುಗಳೆಲ್ಲವು ಲೋಕದೊಳು ||
ಪೌರರ್ಸಂಪದದಿಂದಂ ಪಳಿದು ಕು |
ಬೇರನಸಿರಿಯುಂ ಸೊಗದಿಂದಿರ್ಪರ್ |
ಮೀರುವುದಮರಾವತಿಯುಂ ವಿಭವದ ಸರಿ ತನಗಿಲ್ಲೆಂದು ||೭೯||

ಎನುತಲಿ ತೋರಿಸಲಾತಂ ಪುರಮಂ |
ಜನಪತಿ ಹರುಷವಸಾಂತೊಳಪೊಕ್ಕಾ |
ತನ ಚಾತುರ್ಯಕೆ ಮೆಚ್ಚುತೆ ಮನ್ನಿಸಿ ಸಗ್ಗಕೆ ತೆರಳಿದನು ||
ಅನುಜರುಮಾತನನುಡಿಯುಂ ಮೀರದೆ |
ಮನವೊಲಿದಿರ್ದರ್ಸತಿಯಾಕೃಷ್ಣೆಯು |
ಮಿನಿಯರ ಮನದಿಂಗಿತದಂದದೆ ವರ್ತಿಸಿದಳ್ಭಕ್ತಿಯೊಳು ||೮೦||

ಒಂದುದಿನದೊಳಾ ವೀಣಾಮುನಿಯೈ |
ತಂದಾಪಾಂಡವರಂ ಕಾಣಲ್ಕಾ |
ನಂದದಿ ವಂದಿಸಿ ಸತ್ಕರಿಸಲ್ಸುಖದಿಂ ಕುಳ್ಳಿರ್ದಲ್ಲಿ ‖
ಮಂದಹಸನದಿಂ ನುಡಿದಂ ಕೇಳಿರಿ |
ಸುಂದರರೈವರ್ ಕೃಷ್ಣೆಯುಮಿಳೆಯೊಳ್ |
ಸುಂದರಿ ಲೋಕದೆ ಸತಿಯರೆ ಕಲಹಕೆ ಮೂಲಮೆನಿಸರಲ್ತೆ ‖೮೧‖

ಸುರಸುಂದರಿಯು ತಿಲೋತ್ತಮೆ ಯೆನಿಪಳ |
ವರಿಸಿ ಪಿತಾಮಹನಿಂ ವರವೊಂದಿಯೆ |
ದುರುಳರ್ತಾಮುಪಸುಂದಂ ಸುಂದನು ಮೊರಗಿದರಳವಿಯಲಿ ‖
ತರುಣಿಯನೆವದಿಂ ನೀವುಂ ಕಲಹಕೆ |
ಗುರಿಯಪ್ಪಿರಿ ತಪ್ಪದು ನಿಂದೆಯಿದಂ |
ಪರಿಪರಿಪ್ರಿಯ ಹಿತಮೆನಲವರೊಪ್ಪಿಯೆ ಸಮಯವನಾಡಿದರು ‖೮೨‖

ಮುನಿಪನ ಸಾಕ್ಷಿಯೊಳಾಪಾಂಡುಸುತರ್ |
ವನಿತೆಯನೊಂದೊಂದಬುದಂ ಸುಖದಿಂ |
ದನುಭವಿಸುತಲಿರ್ಪುದು ಮಧ್ಯದೊಳರಿದೊಡೆ ವತ್ಸರದನ್ನಂ ‖
ಮುನಿವೇಷದಿ ಭೂಮಿಯಸಂಚಾರವ |
ನನುಗೊಳಿಸುವುದೆಂದೆನುತಂ ಶಪಥವ |
ನನುಮತದಿಂ ನುಡಿದರ್ ಸುರರೆಲ್ಲರ್ಪೊಗಳಲ್ಸೈಯೆನುತಂ ‖೮೩‖

ಬಳಿಕಂ ನಾರದನೈದಿದನಾನೃಪ |
ತಿಳಕರ್ಸಮಯವ ವಿಸಾರದೆ ಸಕೃಪ |
ಬೆಳೆಸುತೆ ವರ್ತಿಸುತಿರ್ದರ್ ಸತಿಯುಂ ತತ್ಕಾಲದಲಿ ‖
ಬಳೆಸುತೆ ನೇಹವನೋಪರಮಾನಸ |
ವೊಲಿಸುತೆ ಸೇವಿಸುತಿರ್ದಾಳ ನದೊಳ |
ಗಳಿಸಿ ಸುಮಂಗಳೆಯೊಳಾಸ್ವಂದದೊಳಾನಂದವ ಪೊಂದುತ್ತಂ ‖೮೪‖

ಐದನೆಯ ಸಂಧಿ ಸಂಪೂರ್ಣಂ.

ಆರನೆಯಸಂಧಿ.

(ವಾರ್ಧಕಷಟ್ಪದಿ)

ಕುಂದದಾನಂದದಿಂ ಪಾಂಡವರುಪಾರ್ಷದನ | ನಂದನೆಯ ಕೂಟದೊಳ
ಗೊಂದೊಂದು ವತ್ಸರಂ | ಸಂದಸುಖದೊಳಗಿರಲು ಬಳಿಕೊಂದುದಿನ ದಿರು
ಳೊಳೈತಂದು ವಿಪ್ರನೋರ್ವಂ ‖ ಮುಂದೆಕೈನೀಡಿ ಗೋಳಿಡುತಲೆಲೆ ಭೂ
ಪಾಲ ! | ಇಂಪೆನ್ನ ಗೋಗಳನು ಕದ್ದೊಯ್ದರೇವೇಳ್ವೆ | ತಂದುಕೊಟ್ಟೆ
ನ್ನ ಸಲಹೈ ವಿಜಯ ! ಯೆಂದಾರ್ದನಾಗಳತಿ ದೈನ್ಯದಿಂದ ‖೧‖

ಬೆದರದಿರು ಭೂದೇವನಿನ್ನ ಪಶುಗಳ ನೀಕ್ಷ | ಣದೊಳೆ ತಂದೀವೆನೆಂದಭ
ಯವಂ ಕೊಟ್ಟು ಶ | ಸ್ತ್ರದ ಸದನಕಾಪಾರ್ಥನೈತರಲ್ಕಲ್ಲಿ ಧರ್ಮಜನು
ಪಾಂಚಾಲಿಯೊಡನೆ ‖ ಮುದದಿ ವಿಹರಿಸುತಿರಲ್ಕಂಡು ತಮ್ಮಯ ಶಪಥ | ಕೊ
ದಗಿದುದು ವಿಘ್ನವೆಂದಭಿನಮಿಸುತಗ್ರಜಗೆ | ತದುಪರಿಯೊಳಸ್ತ್ರಗಳ ತಂ
ದನತಿ ಧೀರಮಾನಸನಾಗಿ ಭರದೊಳವನು ‖೨‖

ಬನದೆಡೆಯೊಳಾ ಕಳ್ಳರನು ಪಿಡಿದು ಕೆಡಹಿ ಫಲು | ಗುಣನಸ್ತ್ರತತಿ
ಯಿಂದ ಪಿಂದಿರುಗಿ ಬಂದು ಗೋ | ಧನವನಾ ಭೂಸುರಂಗಿತ್ತು ಪಡೆದುರು
ಯಶೋಧನವನಾ ಬಳಿಕತನ್ನ ‖ ಮನೆಗೆಬಂದಣ್ಣನಡಿಗಳಿಗೆರಗಿ ಸತ್ಯಸಂ | ಧನು
ತೀರ್ಥಯಾತ್ರೆಯಂ ಗಮಿಸಲಾಣತಿವಡೆದು | ಸನುಮತಿಸಿ ಸೋದರರನಲ್ಲಿಂ
ತಳರ್ದ ನುತ್ತರಕಾಗಿ ಮೊತ್ತಮೊದಲು ‖೩‖

ತನ್ನ ಜತೆಯೊಳ್ಬಂದ ಭೂಸುರರ ನೊಡಗೊಂಡು | ಸನ್ನುತಾಂಗಂ
ನಡೆದುಬರೆ ಜಾಹ್ನವೀತೀರ | ಕನ್ನೆಗಂ ಸಂಜೆಯಾಗಲ್ನಿಲಿಸಿ ಸಕಲರಂತಾನು
ನೀರೊಳ್ಮುಳುಗಲು ‖ ಚೆನ್ನೆಯಾನಾಗ ರಾಜನ ಕುವರಿ ಕಂಡಿವನ | ಮನ್ನಿ
ಸುತೆ ಮನದಬಾಣಕೆ ಸಿಲುಕಿ ಮೋಹದಿಂ | ತನ್ನ ಮನೆಗೊಯ್ದಳಾ ಪಾ
ರ್ಥನನುಲೂಪಿ ಪಾತಾಳಕತಿ ಸಂಭ್ರಮದೊಳು ‖೪‖

ಅವಳ ಕುಲನಾಮಗಳ ತಿಳಿದು ಭೀಭತ್ಸುವಾ | ಯುವತಿಯುಂ ಕೈವಿಡಿದು ಭುಜಗತಲ್ಪದೊಳು ಬಾ | ರ್ಗವಿಯೊಡನೆ ರವಿಸಹರಿಯುಂದದಿಂ ಕ್ರೀಡಿಸುತಲಿರ್ದನಾ ರಾತ್ರಿಯಲ್ಲಿ || ಕುವರನುದಿಸಿದನಧಿಕ ವಿಕ್ರಮಂ ತತ್ಕ್ಷಣದೊ | ಳವಳ ಬಸಿರಿಂದಿರಾವಂತ ನೆಂಬಂ ಬಳಿ | ಕ್ಕವಿರಳಾನಂದದಿಂ ಸುತನ ನೀಕ್ಷಿಸಿ ಸುಖದೊಳಿರ್ದನಾ ಪಾರ್ಥನಲ್ಲಿ ||೫||

ನೇಸರುದಿಸಲ್ಪಾರ್ಥನಾಸತೀ ಸುತರನುಳಿ | ದಾ ಸರಿತ್ತಟಕೆಯ್ದಿ ವಿಸ್ಮಯಂ ಗೊಂಡಿರ್ದ | ಭೂಸುರರ ಕೂಡೆಲ್ಲಮಂ ವಿವರಿಸುತ್ತವರ ನೊಡಗೊಂಡು ಬೇಗ ನಡೆದು || ಆ ಶೀತಗಿರಿ ಯೆಡೆಯೊಳಿರ್ಪ ತೀರ್ಥಗಳನು | ಲ್ಲಾಸದಿಂ ಕಂಡು ಸೇವಿಸಿ ಮಿಂದು ನಡೆತಂದು | ವಾಸವಾಶಾ ವಿಭೂಷಣಮೆನಿಪ ಮಾಹೇಂದ್ರಗಿರಿಯ ಕಂಡನು ಮುದನೊಳು ||೬||

ಅಲ್ಲಿ ಪಲದಿನಗಳಂ ಕಳೆದು ಭೀಭತ್ಸುವಾ | ಫುಲ್ಲಕೇತಕ ಸುಮದರೇಣುವಿಂದುರ್ದಿನದ | ಸಲ್ಲಲಿತ ವಿಪಿನ ಮಾರ್ಗದೆ ನಡೆದು ದಕ್ಷಿಣಾಶಾಪಥದೆ ಸಂಚರಿಸುತ || ಚೆಲ್ವಪೂಗಾರಣ್ಯಮಂ ಕಳೆದು ಚೋಳೋರ್ವಿ | ಯಲ್ಲಿರ್ಪ ತೀರ್ಥಗಳ ಸೇವಿಸುತ ಪಾಂಡ್ಯಭೂ | ವಲ್ಲಭನ ಮಳಲೂರುಪುರಕೆ ನಡೆ ನಡೆತಂದನಾ ವಿಪ್ರರೊಡಗೂಡಿ ಮುದದೆ ||೭||

ಪುರಜನರ ಕಣ್ಗಳ್ಗೆ ಹಬ್ಬಮಂಮಾಡಿಸುತ | ನರಪ ಮಲಯಧ್ವಜನ ಮಗಳ ಚಿತ್ರಾಂಗದೆಯ | ಪರಿಣಯಂಗೊಂಡು ಸುಮುಹೂರ್ತದೊಳ್ಸಂತೋಷದಿಂದಲವಳೊಡಗೂಡಿಯೆ || ನರನಾಗ ತಾಮ್ರಪರ್ಣೀವೀಚಿಶೀಕರದ| ಹರಿಚಂದನಂಗಳಿಂ ಶೋಭಿಸುವ ಮಲಯಭೂ | ಧರದ ಸಾನುಗಳಲ್ಲಿ ವಿಹರಿಸುತಲಿರ್ದ ನೆಡೆವಿಡದಹೋರಾತ್ರಿಗಳೊಳು ||೮||

ಬಳಿಕಲಾ ಚಿತ್ರಾಂಗದಾದೇವಿ ಗರ್ಭಮಂ | ತಳೆದು, ವಿರಹದೆ ಬೆಳ್ತೆರದಿಂದೆ ಬೆಳ್ಪಾಗಿ | ಕಳೆನಡೆದು ಶುಭದಿನದೆ ಪೆತ್ತಳಾ ಬಭ್ರುವಾಹನನೆಂಬ ಸುತನನಾಗ || ತೊಳಪಮಣಿಯನು ತಾಮ್ರಪರ್ಣಿಯುಂ ದಕ್ಷಿಣಾ | ನಿಳನ ಸಾಮಳಯ ಸಿರಿಯುಂ ಪಡೆವವೊಲು ಕಾಂತೆ | ಕುಲವಿವರ್ಧನನೆನಿಪ ಪುತ್ರನಂ ಕಂಡು ಸಂತಸಗಡಲೊಳಾಳ್ದರವರು ||೯||

ಮಣಿಪುರದ ಭೂಪನಾ ದೌಹಿತ್ರನುದಯದಿಂ | ತಣಿದು ಕುಲಪಥಂ ಪದವಿಯುಂ ಬಳೆದುದಿಂದೆನುತ | ಕುಣಿದು ಸಂತಸಗೊಂಡನರ್ಜುನನು ಮಲ್ಲಿಂದೆ ಮುಂದೆ ಪೊರಮಟ್ಟು ನಡೆವಾ || ದಿನಮಣಿಯ ತೇರದಂದದ ತೊಳಗುತ್ತ ಗೋಕರ್ಣ | ಮೆನಿಪ ಸುಕ್ಷೇತ್ರಕ್ಕೆ ಬಂದು ಪೂಜಿಸಿ ಮುಂದೆ | ಘನಮಹಿಮೆಯಾಂತ ಪ್ರಭಾಸತೀರ್ಥಕೆ ಬಂದು ಸೇವಿಸಿದ ನಲ್ಮೆಯಿಂದ ||೧೦||

ಫಲುಗುಣಂ ಯದುಕುಮಾರಿಯ ನೋಲಿಸಬಯಕೆಯಿಂ | ನಿಲಿಸಿ ತನ್ನೊಡನಿರ್ದ ಜನವನಲ್ಲಿಯೆ ತಾನು | ಚಲುವಭಿಕ್ಷುಕನರೂಪವನಾಂತ ನಿರುಳು ಬಳಿಸ್ನೇನೆ ಸುರಿಯುತ್ತಿರಲ್ಕೆ || ಲಲನೆಯುಂ ಕಾಣ ಬಗೆಗೊಂಡುರೆ ಚಿಂತೆಯಿಂ ಬಳಲ್ದು ಲಕ್ಷ್ಮೀರಮಣ ನತಿಗಳಂ ನೆನೆಯುತಾ | ನಳಿನನಾಭಂ ತಿಳಿದು ದ್ವಾರಕಾಪುರದಿಂದ ತಾಂ ಬೇಗ ಪೊರಮಟ್ಟನು ||೧೧||

ತೇರನೇರಿಯೆ ನಗರಜನಕನಲ್ಲಿಂ ನಡೆದು | ಕಾವಡವಿಯೊಳ್ಕುಳಿತು ಚಿಂತಿಸುವ ಪಾರ್ಥನ ಕು | ಮಾರನಂ ಸಂತೈಸಿ ರೈವತಕಗಿರಿಯಲ್ಲಿ ಕುಳ್ಳಿರ್ಪುದೆಂದು ಬೆಸಸಿ || ಶೌರಿ ತಿರುಗಿದನಿತ್ತ ನಡೆತಂದು ಕಂಡರಾ | ಪೌರಜನರಾನಂದದಿಂದಿವನ ಬಳಿಕವರ | ನಾರೀಗಣಂ ನಲಿದು ನೋಡಿದುದು ನಯನ ಕೃತ್ಸ್ನವಮಾಗಲಾವತಾನಿಯುಂ ||೧೨||

ಹರಿಯೊಡನೆ ನಡೆತಂದು ಸಖಿಯರೊಡವೆರೆದಿರ್ಪ | ಹರಿಣಾಕ್ಷಿಯಂ ಸುಭದ್ರೆಯ ನೀಕ್ಷಿಸಿದನು ಸಾ | ಗರರಾಜ ತನುಜೆಯಂದದಿ ರಾಮಣೀಯ ಮೂರ್ತಿಯಿನೊಪ್ಪುವಾಕಾಂತೆಯುಂ || ಮೆರೆವ ಶಂಪಾಕಾಂತಿವೆರೆದ ಘನರೇಖೆಯುಂ | ನಿರುಕಿಸುತ್ತಿಹನಿಪ ಕುಜನಂತೆ ಪೊಂಜು ಭೂ | ವರನ ತನಯುಂ ಪುಳಕಿತನುವಾಗಿ ಹರುಷದಿಂ ತನ್ನರಿಯ ನೋಸುವಿನೊಳು ||೧೩||

ವನಿತೆಯಂ ಬಯಸಿ ಮೆಯ್ಯಂ ಪೊರೆಗೆ ಪೊಣ್ಮಿಪ್ಪ | ದನುರಾಗಮೇನುಮಾರ್ತಿಗೊಂಡೆಂಬ ವಾಕ್ಯಯಿಂ | ವಿನುತಕಾಷಾಯವಸನವನಾಂತ ಕಪಟಯತಿವರನಾನನವ ನೀಕ್ಷಿಸಿ || ವನಜಾಂಬಕಂ ನುಡಿದನೆಲೆ ಕುರುಕುಲಾಧಿಪನ ಮನದೆ ಪಾಲಿಸುವರಾರ್ ಬಿಂಬಾಧರದ ವಸ್ತು | ನನಗದರೊಳಪ್ರಾಪ್ಯ ವಸ್ತುವಾಗಿದನು ಪರಿಕಿಪ್ಪುದು ಯೋಗದಿಂದ ||೧೪||

ಕೇಳು ಕುಂತೀತನಯ, ಯಮುನೀರಲೊಡನೆಮ್ಮ | ತಾಲಾಂಕನಾಸುಯೋಧನಗೀಯೆವೆಳ್ಕವಿಸಾ | ಬಾಲೆಯನೆನುತ್ತ ಚಿಂತಿಸುತಿರ್ದನದರಿಂದಿನ್ನಿನ್ನೊಡೆ ಕೈಗೂಡದು || ನೀಲಾಳಕಿಯನನ್ಯರರಿಯದವೊಲೊಯ್ಯುದೀ | ಕೀಲವೋ ಬಾಹುಜರ ಧರ್ಮಮೆನಿಪ್ಪುದು ಚಿಂತೆ | ಬಾಳದಿರು ನೀನೆಂದು ಸಂತವಿಸೆ ಶೌರಿ ನಿಜಪುರದತ್ತ ಪೊರಮಟ್ಟನು ||೧೫||

ದ್ವಾರವತಿಗೈತಂದನಾತಂಗಿಯೊಡಗೊಂಡು | ಶೌರಿಯುತ್ತಲ್ಲಾರ್ಥನೆಸೆವ ವಿರಹದೆ ನೊಂದು | ಮಾರಶರಕೀಡಾದ ನೀಕಿರಿಯಂ ತಪಿಸುತಿರ್ದನಿಳ್ಪಿಯೋಗಜ್ವರದಲಿ || ಕಾರಡವಿಯುರಿಗಿಕ್ಕಿ ಸಂದಿಸುತ ಮಳೆಗರೆದ | ನೀರದನುದೊರ್ನಾಯುಂ ಶಾಂತಿಯಂ ಪೊಂದಿಸದು | ಸ್ವಾರಾಜನೊಲಗನಾರ್ತಿಯನೆಂದೆಸಲ್ಕದಂಬಣ್ಣಿಸಲ್ಕಳವೆ? ಜಗದಿ ||೧೬||

ಇನಿಯಳಾನನವೆಂಬ ಚಂದ್ರನೆಳನಗೆಯೆಂಬ | ವಿಸುತ ಚಂದ್ರಿಕೆಯಚೆಲ್ವುತ್ತಿ ದೊರ್ಣಂ ಪೋಪ | ಮೆನಿಸ ಕಗ್ಗತ್ತಲಡಗದು ರಾಜಸೂನುವಿನ ಹೃದಯದೊಳ್ಬಿತ್ರಮಿಸಲು || ಮನಸಿಜನ ಬಾಣದಿಂ ನವೆಯುತಿರ್ದಂ ನರಂ | ಜನರೆಲ್ಲರೈತಂದು ನೋಡುತಿರೆ ಬಳಿಕೊಂದು | ದಿನದೊಳಾ ಬಲಭದ್ರನೀಕ್ಷಿಸುತೆ ಕರೆದೊಯ್ದನಾ ರಾಜಭವನಕೊಲಿದು ||೧೭||

ತವಸಿಯನು ಕನ್ನೆಯರ ಮನೆಯ ಮಧ್ಯದೊಳಿರಿಸಿ | ನವಿನಯದಿ ಶುಶ್ರೂಷೆಗೆಯ್ಯಲೆಂದಾಬಲಂ | ಕುವರಿಯನೆ ನಿಯಮಿಸಿದನನಳು ಮತಿಭಕ್ತಿಯಿಂ ಸೇವಿಸುತಲಿರ್ದಳವನ || ದಿವಸಗಳು ಕೆಲವು ಸಂದುವು ಕಪಟಯತಿವರಂ | ಸುವಿಲಾಸ ವಿಭ್ರಮೇಂಗಿತಗಳಂ ಪರಿಕಿಸುತ | ಲವಳಸೇವೆಗೆಮೆಚ್ಚಿ ದಂದಲಿ ಸಮಯಮಂ ಪಾರುತಿರ್ದಂ ಭರದೊಳು ||೧೮||

ಇಂತಿರಲ್ಕೊಂದುದಿನದೇಕಾಂತದಲ್ಲಿಯಾ | ಕಾಂತೆ ವಿಜಯನ ಕೆಲದೆ ನಿಂದಿರ್ದಬಾಹುಪ್ರೊಳು | ದಂಚಿತಜ್ಯಾಕಿಣದ ಕುರುಹನೀಕ್ಷಿಸುತುಳಿದಲಕ್ಷಣಗಳಿಂದ ನೋಡೆ || ಕುಂತೀಕುಮಾರಕನ ಪೋಲ್ವನೀಯತಿವರನ | ದೆಂತಿಪ್ಪುದೋ ದೈವಮಾದೊಡಂ ತಿಳಿವೆನೆಂ | ದಂತರಿಸದತಿ ಭಕ್ತಿಯಿಂ ನಮಿಸಿ ವಿನಯದಿಂ ಬಿನ್ನವಿಸಿದಳ್ಸುಭದ್ರೆ ||೧೯||

ದೇವನೀಂತೀರ್ಥಗಳ ತೊಳಲುತ್ತಮಿರ್ಪಿರೀ | ಭೂವಳಯದೊಳಗೆಲ್ಲಿಯೊದೊಡಂ ಕಾಣಿಸಿದ | ನೇ? ವಿಜಯನಾವೆಡೆಯೊಳೆಂತಿರ್ಪನೆಂಬುದಂ ಕರುಣದಿಂ ಬೆಸಸುವುದೆನೆ || ತೀವಿದೆಳನಗೆಯ ಬೆಳ್ದಿಂಗಳಂ ಪಸರಿಸುತ | ಭಾವೆ, ಕೇಳ್ಕಪಟಯತಿವೇಷದಿಂ ನಿನ್ನಿದಿರ್ಕೊ | ಳಾವಾಸವಾತ್ಮಜಂ ಕುಳ್ಳಿರ್ಪ ನಂಗಜನತಾಪದಿಂದೆಂದನವನು ||೨೦||

ಎಂದನುಡಿಯಂ ಕೇಳ್ದುಮುನ್ನವೊಗೆದಿಹ ಪುಳಕ | ದಿಂದಲಾನಂದಾಶ್ರುಸುರಿಯುತಿರೆ ಕಣ್ಗಳಿಂ | ಮಂದಹಾಸಂ ಮೊಳೆಯೆ ಮೌನದಿಂ ನಿಂದಿರ್ದ ಯದುತನೂಜೆಯ ನೀಕ್ಷಿಸಿ || ಕುಂದದಭ್ಯುದಯ ಹೇತುವೆನಿಪ್ಪುದೈತರ್ಪು | ದಿಂದಿನಿರುಳೊಳ್ಮೈತ್ರವೆಂದೆನಿಪ ಸುಮುಹೂರ್ತ | ದಂದು ನಿನ್ನನುವರಿಸಿ ಕೈವಿಡಿದು ಕೃತಿಯಪ್ಪೆನೆಂದುಸಿರ್ದಂ ಪಾರ್ಥನು ||೨೧||

ಇಂತುಸಿರ್ದುದ್ಯಾನಕುಂಜವಂ ಪೊಕ್ಕನಾ | ಕುಂತೀಕುಮಾರಕಂ ಬಳಿಕತ್ತಲಾಳಿಯರ್ | ಸಂತೋಷದಿಂದಲಾ ಕನ್ನೆಯನು ದೇವಕಿಯಬಳಿಗೆ ಕರೆತಂದರೊಲಿದು || ಚಿಂತೆಯುಳಿದಾತ್ಮಜೆಯಹಿತವ ಬಯಸುತಲಿರ್ಪು | ದಂತವಂ ಹರಿತಿಳಿದು ನೀಲಾಂಬರಂ ತಿಳಿಯ | ದಂತಖಿಳ ಬಾಂಧವರನೊಡಗೊಂಡು ನಡೆದನಾ ಗಿರಿಶಸೇವೆಗೆಭರದೊಳು ||೨೨||

ಫಲುಗುಣಂ ನೆನೆದನಿರುಳೊಳಬ್ಲಾರಾತಿಯಂ || ಲಲನೆಯುಂ ಸೋದರನನಚ್ಯುತನಭಕ್ತಿಯಿಂ | ಬಳಿಕನಡೆತಂದರವರಿರ್ವರುಂ ದ್ವಾರಕಾನಗರಕ್ಕೆತತ್ಕ್ಷಣದೊಳು || ನಿಲಯಕೈತಂದ ಶಚಿಸುತಾವ್ರವರಂಕಂಡು | ನಲವಿನಿಂದುಪಚರಿಸಿದಂ ವಾಸುದೇವನಾ | ಗಳೆಬಂದರುತ್ಸವದೆ ಸುರಮುನಿಗಳೆಲ್ಲರುಂ ದೇವತಾನಿಕರದೊಡನೆ ||೨೩||

ಬಳಿಕ ಶಚಿಸುತಾವ್ರನುರೊಸಗೆಯಿಂತೊಟ್ಟರ್ದ | ಖಿಳಭೂಷಣವನುರ್ಚಿತುಡಿಸಿ ಸಿಂಗರಿಸಿರ್ದ | ಚೆಲುವಿನಿಂದಿರ್ವರಂ ಕೂಡಿಸಿದನಗ್ನಿಸಾಕ್ಷಿಕಮಾಗಿಯೂವಸಿಷ್ಠಂ || ಕುಲಪುರೋಹಿತ ಮುಖ್ಯರಾಶಿಷವಪಾಡಿವರ್ | ನಲಿದಪ್ಸರೋಗಣಂ ಮಂಗಳಾರತಿಬೆಳಗೆ | ಬಲವೈರಿಯಾಕೃಷ್ಣನಾಣತಿಯಿನೆಯ್ದಿದಂ ಸತಿಸಹಿತ ನಿಜನಿಳಯಕೆ ||೨೪||

ಮುರಮಥನನಾಕಿರೀಟಿಗೆ ಕಜ್ಜಮಂ ತಿಳುಪೆ | ತೆರಳ್ದನಾ ಬಲರಾಮನಿರ್ದ ಸುಕ್ಷೇತ್ರಕ್ಕೆ | ನರನುಮಲ್ಲಿರ್ದ ವರರಥವ ನಡರಿಯೆ ವಧೂಮಣಿಸಹಿತ ಪೊರಮಟ್ಟನು || ಪುರರಕ್ಷಕರ್ತಡೆಯ ಬಂದೊಡವರಂಗೆಲ್ದು | ಭರದಿಂದ ಪೋಗುತಿರೆ ಹಲಧರಂ ಬಲಸಹಿತ | ಧುರಕಿದಿರ್ವಲ್ತಡೆದು ನಿಲಿಸಿದಂ ಕೃಷ್ಣನಿವನೆಮ್ಮ ಮೈದುನನೆನುತ್ತ ||೨೫||

ಯದುವರಾತ್ಮಜೆ ಜಾಣ್ಮೆಯಿಂ ನಡಿಸೆ ತೇರನಾ | ಪದುಮನಾಭನ ಮೈದುನಂ ವಿವಿಧದೇಶಗಳ | ನದನದಿಗಳಂದಾಂಟಿ ಪುರಕೆ ಬಂದಗ್ರಜನ ಕಂಡನತಿವಿನಯದಿಂದ || ಯದುವೀರರಾಮಕೃಷ್ಣರು ವೊಡನೆ ನಡೆತಂದು | ಮುದದಿಂದ ಮದುವೆಯುಂ ಮಾಡಿಕೊಟ್ಟರ್ಬಳಿಕ | ಹೃದಯದಾನಂದದಿರ್ದರಾ ದಂಪತಿಗಳುತ್ಸವಂ ಪೆರ್ಚುತಿರಲು ||೨೬||

ಬಲಭದ್ರನಾಪುರದಿ ಪಲದಿವಸಮಿರ್ದು ನೃಪ | ತಿಲಕನಿಂ ಸತ್ಕೃತಿಯಂ ಪಡೆದು ತನ್ನಯ ಪುರಕೆ | ತಳರ್ದನಿತ್ತಲ್ವಾಸುದೇವ ನಿಂದ್ರಪ್ರಸ್ಥ ಪಟ್ಟಣದೊಳುತ್ಸವದೊಳು || ಫಲುಗುಣನ ಸಖ್ಯದಿಂ ನಿಂದನಾನಂದದಿಂ | ಬಳಿಕ ಬಸಿರಂ ತಳೆದು ಪೆತ್ತಳಾ ಯದುಕನ್ಯೆ | ಕುಲವಿವರ್ಧನನೆನಿಪ ಕುವರನಂ ಪೆಸರಿಸಿದರಭಿಮನ್ಯುವೆಂದು ಮುದದಿ ||೨೭||

ದ್ರುಪದತನುಜಾತೆಯುಂ ಪಡೆದಳಾ ಪತಿಗಳಿಂ | ಸುಪವಿತ್ರಗಾತ್ರರಂ ಪ್ರತಿವಿಂಧ್ಯಮುಖ್ಯರಂ | ನೃಪಕುಮಾರರ ನೈವರಂ ಕರಣಗಳ್ವಿಷಯ ಸಂತತಿಯ ಪಡೆವತೆರದೆ || ಕೃಪೆಯಿಂದಲಾ ಸುತರನರುವರಂ ಸಕಲಾಸ್ತ್ರ | ನಿಪುಣರೆಂದೆನಿಸಿ ಲಾಲಿಸುತ ಸಲಹಿದನು ಮಧು | ರಿಪು ಮುಂದೆ ಯಿವರಿಂದ ಗೆಲಬಹುದು ಶತ್ರುಗಳನೆಂದೆಂಬ ಹರುಷದಿಂದ ||೨೮||

ಭುವನ ಜನರೆಲ್ಲರಾನಂದಮಂ ಪೆರ್ಚಿಸುವ | ಸುವಿಶೇಷಋತುಗಳೊಳಗಾವಸಂತಸತೆರದಿ | ಕುವರರೊಳಗಭಿಮನ್ಯುವೇ ನೆಗಳ್ತೆಯನಾಂತು ಬಳೆವಸಿರ್ದಂ ಕ್ರಮದೊಳು || ಯುವಜನಾನಂದಕರಮಾದ ಮಧುಮಾಸದೋಳ್ | ಳ್ದಿವಸವಾಸಮಾಧವಂಗುತ್ಸಾಹಕರಮೆನಿಸಿ | ಪವಣೆನಿಂ ಪಿರಿದಾದುದಾಪಿಕಸ್ವರದಿಂದಲಿಸಿದೆನಿಸುತಲ್ಲಿನೋತೆ ||೨೯||

ದಿನನಾಥನಾಗ ತನ್ನಯ ವಾಜಿಗಳ್ಬಿಸಿಲ | ಘನತಾಪದಿಂ ಬಳಲ್ದಿರೆ ಪರಿ
ಸವೇಳ್ಕುಮೆಂ | ದೆನುತುತ್ತರಾಶಾಭಿಮುಖನಾಗಿ ನಡೆಯುತಿರೆ ಝಳದಬಾಧೆಗೆ
ಬಳಲ್ದು || ಜನರೆಲ್ಲರುಂ ನೆಳಲನರಸುತಿರ್ದರ್ಸುಖಿಗ | ಳನುಲೇಪನಂಗಳಿಂ
ತಾಪಮಂ ತವಿಸಿದರ್ | ಮನಸಿಜಾಸ್ತ್ರವ್ರಣಕೆ ಮರ್ದೆಂದು ಸತಿಯರ
ಧರಾಮೃತವಪೀರ್ದರರೆಬರ್ ||೨೦||

ವಿಜಯಮಧುಸೂದನರ್ಬೇಸಗೆಯ ತಾಪಮಂ | ಕುಜದ ನೆಳಲುಗಳಲ್ಲಿ
ತವಿಸಲೆಳಸಿಯೆ ಕಳಿಂ | ದಜೆಯ ತೀರದ ಕಾನನಂಗಳೊಳ್ಸತಿಯರೊಡ
ನಿರ್ದು ವಿಹರಿಸುತಲಿರಲು || ದ್ವಿಜವೇಷಮಂ ಧರಿಸಿ ಪಾವಕಂ ಹೇತಿಯೆಂ |
ಬ ಜಡೆಯಂ ಧರಿಸುತಂ ಬಂದನಾ ಕಾಂಚನಾಂ | ಬುಜವಪ್ಪೋಲುವ ಮೊ
ಗಂ ರಂಜಿಸಲ್ಭರದಿಂದಲಂದು ಹರಸಿದ ನಿರ್ಜರಂ ||೨೧||

ವಸುಮತೀಪಾಲರಿರ | ನಾಂ ಪಲವುದಿನದಿಂದ | ಪಸಿದಿರ್ಪೆನೆನಗುಣಿಸ
ನಿತ್ತು ತಣಿಸುತ್ತೆ ಮ | ನ್ನಿಸುವುದೆಂದರ್ಥಿಸಲ್ಕೊಟ್ಟೆನೆಂದಭಯಮಂ ಪಾಲಿ
ಸಿದರವನುಕೇಳ್ದು || ಒಸೆದುನುಡಿದಂ ನಿಜದೆ ತಾಂ ವಿಪ್ರನಲ್ತು ವಾ | ಯು
ಸಖನೆಂದರಿವುದುತ್ತಮ ಭೋಜ್ಯದಿಂದೆನ್ನ | ಪಸಿವನಡಗಿಸಿ ಕಾವಿರೆನುತ
ನಂಬಿಹೆನೆಂದು ನುಡಿದನಾ ಕಪಟವಿಪ್ರಂ ||೨೨||

ಆಲಿಸುವುದೀಖಾಂಡವಾರಣ್ಯಮುಚ್ಚತರ | ಸಾಲಂಗಳಿಂದ ಮುರುಭೂ
ಧರದಿ ನೊಪ್ಪುವುದು | ವ್ಯಾಳತಕ್ಷಕನವಾಸಂ ಕಾವನಿಂದ್ರನಿದನಾತನೋಳ್ಮೋ
ಹದಿಂದ || ಆಲಯಂ ದೈತ್ಯರಾಕ್ಷಸ ಸರ್ಪಗಳ್ಗದನು | ನಾಲಗೆಗಳಿಂದೆ ನಾಂ
ಸುಡಲೆಳಸಿ ಬರೆತಡೆದು | ಪಾಲೋಮಿರಮಣನಾ ಬಿರುಮಳೆಗಳಂ ಕರೆದು
ನಿಲಿಪನಿದನೇವೇಳ್ವೆಸು ||೨೩||

ಈಗನಿಮ್ಮಿಯ ನೆರವಿನಿಂದೆ ನಾಂ ಪರಿಗಣಿಸೆ | ನಾ ಗೋತ್ರವೈರಿ ಸಾಹ
ಸ್ರನ್ಯೈತಂದೊಡಂ | ಬೇಗ ತೀರ್ದುದು ತನ್ನಬಯಕೆ ಸುಸಹಾಯದಿಂ ಫಲಿ
ಸದಿಹುದುಂಟೆ ಎನಲು || ನಾಗಶಯನನಬೋಧೆಯಿಂದರ್ಜುನಂ ಬೇಡ | ಲಾ
ಗಾಂಡಿವವನಕ್ಷಯದ ನಿಷಂಗವನುನೋ | ವೇಗಸಿತವಾಜಿಗಳ ವರರಥವ
ನೊಲಿದಿತ್ತನಗ್ನಿಯರ್ಜುನನಿಗಾಗ ||೨೪||

ಕುಂತೀಕುಮಾರನಾ ಕಪಿಕೇತುಚಿಹ್ನದಿಂ | ಕಾಂತಮಾಗಿರ್ಪ ರಥವ
ಡರ್ದು ಕವಚಂದೊಟ್ಟು | ಸಂತಸದಿ ತೂಣೀರಸಾಯಕಂಗಳಧರಿಸಿ ಗಾಂಡಿ
ವವ ಜೇವೊಡೆಯಲು || ಕಾಂತಾರದೊಳಗಿರ್ದ ಸತ್ವಂಗಳೆರ್ದೆಯೊಡೆದು |
ಚಿಂತೆಯಿಂ ನೊಂದು ಬೆಂಡಾಗಿ ಗೋಳಿಟ್ಟುವು ಕೃ | ತಾಂತನುತ್ಪಾತದಿಂ
ಪ್ರಳಯಕಾಲದೆ ಬಂದನಿಂದುಳಿಯೆವೆನುತ ಭಯದಿ ||೩೫||

ಅವರ ಸಾಹಾಯ್ಯಮಂ ಪಡೆದು ವೈಶ್ವಾನರಂ | ಜವದಿಂದೆ ಘೋರನಿಜ
ರೂಪಮಂ ಧರಿಸಿ ಖಾಂ | ಡವವನವನುರುಹತೊಡಗಿದನಾಗ ಸುತ್ತಲುಂ
ಮುತ್ತಿ ಕ್ರಮದಿಂದ ಬಿಡದೆ || ಕವಿದು ಕಲವಿಂಕದಂದದೆ ನೀಲವರ್ಣದಾ |
ದ ವಿರಳದ ಹೊಗೆವಹ್ನಿಯುರಿಯಿಂದೆ ಮಡಿದುಬೀ | ಳುವ ವಿಹಗನಿವಹದಂತಿ
ರ್ದುದಾ ನೋಟಕರಿಗದ್ಭುತವ ತೋರುತಲ್ಲಿ ||೩೬||

ಹರಿದಶ್ವಕಿರಣಗಳ ತಾವರಿಯದಂತಿರ್ಪ | ಕರಿಘಟೆಗಳಂಧಕಾರದ ಪಟ
ಲದಂತೆದ್ದು | ಕಿರಿಗಳೊಡನಾನಿಕುಂಜಂಗಳಂ ಪೊರಮಟ್ಟು ಬರುತಿರ್ದವತಿ
ಭರದೊಳು || ತರುಶಿಖರದಿಂದಿಳಿದು ಶಿಖಿಸಂಕುಲಂ ಬಂದು | ವುರಗಂಗಳು
ಣಿಸನುಳಿದೆಯುದ್ಧತಂ ಜವದಿಂದ | ಲರರೆ ! ಕಿಚ್ಚಿನಕೆಚ್ಚೊಳೆಚ್ಚರೇಂ ನಚ್ಚಿ
ಕೆಯ ಪೆರ್ಚಿದುದು ಹುಚ್ಚನಂತೆ ||೩೭||

ಚಮರೀಮೃಗಂಗಳಾತುರದಿಂದ ತಿರುಗುತಿರೆ | ಸಮನಾಗಿ ಬೆಂದು ಬಾಲ
ದಭಾರತಗ್ಗಲಾ | ದಮುನನಿಂ ಸುಡುವಂಗಗಳತಿಳಿಯದಾಬುವಾಹ್ಯಚೋಕ
ವಹ್ನಿಯಿಂದ || ಅಮರಾಲಯಾಂಗಣಂಗಳ ಶೋಭಿಸದ್ರುಗಳ್ | ಪ್ರಮ
ದಾಪದಪ್ರಹಾರವ ನೆಳಸದೊಮೊರ್ದಲೆ | ಸುಮಕುಟ್ಮಳಂಗಳಂ ತಳೆದಂತೆ
ಗಿಡುಗಳೊಳು ಪರ್ಬಿದುರಿ ಕಂಗೊಳಿಸಿತು ||೩೮||

ಕೆಂಡಗಳನುದುರಿಸುತ ಗಗನವಂ ಮುಚ್ಚಿಯಾ | ಖಂಡಲನಮಾರ್ಗವಂ
ತಡೆವಂತೆ ಪಾವಕಂ | ಮಂಡಳಿಸಿ ಘೋರಾಟ್ಟಹಾಸದಿಂ ಜೃಂಭಿಸುತಗಹ
ನವಂ ಸುಡುತೆ ಬರಲು || ಗಂಡುಗಲಿಗಳ್ವಜ್ರಿಯನುಜಾತ್ಮಜರ್ಕಳು |
ದ್ದಂಡತನದಿಂದಲಾತದ ತೆರದಿಸುತ್ತುತಂ | ಚಂಡಾಡುತಿರೆ ಕೀಟಗಳ್ಜವದಿ
ಪೊರಮಟ್ಟುಪಾರ್ದುರಿಯೊಳಗೆ ಬೆಂದುವು ||೩೯||

ಅಮರೇಂದ್ರ ಸೂನುವೆಚ್ಚಂಬುಗಳನಾ ಭುಜಂ | ಗನಫಣಾಮಣಿಗಳು ದಿರ್ದೇಳ್ವವೋ ಎಂಬವೋಲ್ |ಭ್ರಮಿಸುತ್ತೆ ಗಗನದೊಳ್ಕಣಿಯುತಿರ್ದುವು ವಿಸ್ಫುಲಿಂಗಂಗಳೆಲ್ಲೆಡೆಯೊಳು || ಅಮಮ ! ಶೈಲಗಳ ತೃಣವಂತೆ ಸುಡುವ ಗ್ನಿಯುಂ | ಕ್ರಮದಿಂದಲುರುಹಿಮಂ ವಿಷ್ಣುಚಕ್ರದಿನುರು | ಳ್ದಮರಾರಿಗಳನುಮಾ ವಿಜಯಬಾಣದೆ ಕೆಡೆದುಬಿದ್ದಿರ್ದಕೌಣಪರನು ||೪೦||

ಬಳಿಕತತ್ಷಕನ ರಕ್ಷಿಪುದೆಂದು ಶತಮನ್ಯು | ಮುಳಿದು ಬೆಸಸಿದ ನಾಬಲಾಹಕ ಕುಲಕ್ಕೆ ತಾಂ | ಘಳಿಲನೈರಾವತವ ನಡರ್ದುವಜ್ರವಧರಿಸಿ ನಡೆತಂದ ನಡವಿಗಾಗ || ಜಲದಂಗಳುಂ ಲೋಕಭೀಕರದ ಗರ್ಜಿತದ | ಮೊಳಗಿನಿಂ ಚಂಚಲದಮಿಂಚಿನಿಂದಾ ದವಾ | ನಲನನಂದಿಸುವಂತೆ ಗಗನಮಂ ಮುಸುಕಿದುವು ಕಲ್ಪಾಂತವೋ ಪೇಳೆನೆ ||೪೧||

ಉರಿವವೈಶ್ವಾನರನಮೇಲೆ ಜಲಧಾರೆಯಾ | ಸುರಕರಿಯ ಹಸ್ತದಂತತಿದೀರ್ಘವಾಗಿ ಸುಂ | ದರದ ಬ್ರಹ್ಮಾಂಡಮಂಟಪದಪಳುಕಿನ ಕಂಬವಂತೆ ಸುರಿಯುತ್ತಿರಲ್ಕೆ || ಉರಿನಂದುವುದಕಂಡು ಪಾರ್ಥನತಿರೋಷದಿಂ | ಶರಪಂಜರವ ಕಟ್ಟಿನಿಲಿಸಿದಂಮೇಘಂಗ | ಳುರವಣೆಯನಂತರಿಕ್ಷದಿ ನೊಂದುಜಲಬಿಂದುವುಂ ಸುರಿಯದಂತೆಬನದೆ ||೪೨||

ಫಲುಗುಣಂಕಟ್ಟಿರ್ದ ಬಾಣಕೂಟದಮೇಲೆ | ಜಲಧಾರೆಸುರಿದು ಧೂಮವಿತಾನವಾಗಿರ್ಪ | ಚೆಲುವಮಂಟಪದ ಸುತ್ತಲುಮುತ್ತಿ ಭಿತ್ತಿವೋಲ್ಕಂಗೊಳಿಸುತ್ತಿರ್ದುದಲ್ಲಿ || ಮುಳಿದು ಸುಡುತ್ತೈತರಲ್ವಹ್ನಿಯಾ ತಕ್ಷಕನ ಲಲನೆತನ್ನಣುಗನಂ ಸೆಳೆಯುತ್ತೆ ಬರಲವಳ | ತಲೆಯನರಿದಂಗಗನದಲ್ಲಿ ಹಾಹಾಕಾರವೊಗೆಯಲರ್ಜುನನುಭರದಿ ||೪೩||

ಅದನುಕಂಡಿಂದ್ರನೊಚ್ಚಣದನ್ನಮೊಡವಿಡದೆ | ಯದುಭುತದವೃಷ್ಟಿಯಂ ಸುರಿಸಿತನ್ನಯಸುತನಿ| ಗೊದವಿಸಲ್ವಿಸ್ಮಯವನನಿತರೊಳ್ತಾಯಬಾಲವನುಪಿಡಿದತಿವೇಗದಿಂ || ಬೆದರುತ್ತಲೋಡಿ ಜೀವವಕಾಯ್ದುಕೊಂಡನಾ ಪದವೊಳೇ ತಕ್ಷಕಾತ್ಮಜನಶ್ವಸೇನನಾ ಸುದತಿ ಮಡಿದಳ್ಪಾರ್ಥನೆಸುಗೆಯಿಂ ಸುತ್ರಾಮನದ್ಭುತದಿ ನೋಡುತಿರಲು|| ||೪೪||

ಅವನಾಯುಷದ ಶೇಷಮುಳಿದಿರಲ್ಬರದಿಂದ | ಜವನಮುರೆವೊಕ್ಕು ತಲೆಯು
ಳಿದು ಬದುಕಿದನು ವಾ | ಸವನಧಿಕರೋಷದಿಂ ವನಭಂಗವೆಸಗಿ ಮಿತ್ರನ ಸತಿ
ಯು ಕೊಂದನೆಂದು || ಕವಿಯಲರ್ಜುನನನಾದಿಕ್ಪಾಲರೆಲ್ಲರುಂ ತವತವಗೆ ಶ
ಸ್ತ್ರಾಸ್ತ್ರಮುಂ ಧರಿಸಿ ವಸುಮುಖ್ಯ ದಿವಿಜರೊಡನೈತಂದು ಕಾದಲೆಳಸಿ
ದರಾಗ ಸಂಭ್ರಮಂಗೊಂಡು ಧುರದೆ || ೪೫ ||

ಎಚ್ಚಂಬುಗಳನು ಪಡಿಯಂಬಿನಿಂ ಕಡಿದಿಡುತ ಮಚ್ಚರದೆ ಕಾದುತಿರೆ
ಕೃಷ್ಣಾರ್ಜುನರಸಾಸ ಕಚ್ಚರಿಯನೊಂದಿ ತಲೆದೂಗಿ ಪೊಗಳುತ್ತಿರ್ದ ನಭ್ರ
ದೊಳಗಮರವಾನಿ || ಪೆರ್ಚಿದಮರರ್ಸೋಲ್ಲುತ್ತದಂ ಕಂಡು ಗೋತ್ರಾರಿ
ಕಿಚ್ಚನುಗಿಪೆನೀಗಳೆಂದು ಕಲ್ಮಳೆಗರೆದು ಮುಚ್ಚಿದಂ ವೀರರಿರ್ವರನದ್ರಿಶಿಖ
ರಗಳ ಮುತ್ತುವಂದದೆ ರಣದೊಳು ||೪೬||

ಮುಳಿದೆಚ್ಚ ಸರಳುಗಳ ತರಿವೊಟ್ಟ ಚಾಪಮಂ | ಚಲದಿಂದ ಕತ್ತರಿಸಿದಂ
ಪಾರ್ಥನನಿಲನಿಂ | ಜಲದಂಗಳಭ್ರದೋಳ್ ಕೆದರ್ದು ಪಾರುವವೊಳ್ಕಯಿಂ
ಮುರಿದುಕೆಡೆದುವಾಗ || ಕೊಳುಗಳದೊಳಶರೀರವಾಣಿ ಕೇಳಿಸಿದುದೆಲೆ |
ಬಲವೈರಿ ನೀನಾವಗೋಸುಗಂ ಕಾದುವೆಯೊ? ನಿಲದೆ ಮುನ್ನಮೆ ಕುರು
ಕ್ಷೇತ್ರಮಂ ಸಾರ್ದಿಹನು ತಕ್ಷಕಂದೈವವಶದೆ || ೪೭ ||

ಅವತರಿಸಿ ಬಂದ ನರನಾರಾಯಣರ್ಕಳೀಭುವಿಯೊಳವರಂ ಪೊಲ್ವರಾ
ರುಮಿಲ್ಲಲೆವಜ್ರೀ ! | ಸುವಿನಯದಿ ನಿವರ ಮನ್ನಿಪುದೆಂದು ನುಡಿಯಲಹುದೆಂ
ದಿವರ ಸನ್ಮಾನಿಸಿ || ದಿವಿಜಪತಿ ತೆರಳಿದಂ ಸುರಲೋಕಕಾಗಳಾ | ಪ್ಲವಗ
ಕೇತನತಾರ್ಕ್ಷ್ಯಕೇತನರ್ಜಯದಶಂ | ಖವನೂದಲಖಿಳ ದೆಶೆಗಳ ತುಂಬಿ
ಭೋರ್ಗರೆದುದಾ ನಾದಮುಬ್ಬರಿಸುತ || ೪೮ ||

ಜಲದಂಗಳಂತಿಂದ್ರಸೇನೆ ಶರವರ್ಷದಿಂ | ತೊಲಗಲೆಡರಿಲ್ಲದಂದದೆ ಜಾ
ತವೇದನಂ | ಪ್ರಳಯಪಾವಕನಂತೆ ಖಾಂಡವದೊಳಗಿಪ ಸತ್ವಜಾತಗಳೊ
ಳೊಂದುಬಿಡದೆ || ಮೆಲುತೆ ಸಂತೃಪ್ತನಾದನು ಮಯಂತಕ್ಷಕನ | ನಿಲಯದಿಂ
ಪೊರಮಟ್ಟು ಬರೆ ತಡೆದು ಕೃಷ್ಣನಾ | ಗಳೆ ಚಕ್ರಮಂ ಪ್ರಯೋಗಿಸಲಂಜಿ
ಮರೆವೊಕ್ಕನರ್ಜುನನ ಸಲಹೆನುತ್ತ || ೪೯ ||

ವಿಜಯನಭಯವನಿತ್ತು ಪೊರೆಯೆ ನಾಗಾಂತಕ । ಧ್ವಜನಾಗಳುಪಸಂಹರಿಸಿದನಾ ಚಕ್ರಮಂ । ನಿಜಮಂದಿರಕೆ ತಳರ್ದನು ಮಯಂ ಕೊಂಡಾಡುತರ್ಜುನನ ಗುಣವನಾಗ ॥ ಅಜಪಿತನೊಡನೆ ಪಾರ್ಥನುಂ ನಗರಿಗೈತಂದ । ನುಜರಗ್ರಜರ ಕಂಡು ಮನ್ನಣೆಯ ಪಡೆದನಾ । ಪ್ರಜೆಗಳುಂ ಸಂತಸದಿ ನಲಿದು ನುತಿಸಿದರಿವರ ಸಾಹಸವ ಬಗೆಬಗೆಯಲಿ ॥ ೫೦ ॥

→ ಆರನೆಯ ಸಂಧಿ ಸಂಪೂರ್ಣಂ ←

ಏಳನೆಯಸಂಧಿ.

(ಆರ್ಯಾವೃತ್ತಂ).

ಹರಿಯಾನರಂಗೆ ಸಭೆಯಂ | ವಿರಚಿಸೆ ನಿಯಮಿಸಿ ನರಂಗೆ ಸಂಭ್ರಮದಿಂ ||
ನರಪತಿಗರಿಪಿಯೆ ನೀಲಾಂ | ಬರ ಮುಖ್ಯರನೋಡೆ ಪುರಕೆಪೊರಮಟ್ಟಂ ||೧||

ಅಸುರಂ ವೃಷಪರ್ವಂ ಬಿಂ | ದುಸರದೆ ಬೈತಿಟ್ಟರನ್ನಗಳ ತಂದಾ || ಪೊ
ನ್ನವಗೆಯಿಂ ಸಭೆಯಂ ವಿರ | ಚಿಸಿದಂ ಲೋಕದೊಳೆ ಚಿತ್ರತರಮೆನಿಸಿ ||೨||

ಜನಪತಿಗೆ ಚಿತ್ರಸಭೆ ಪಾ | ವನಿಗುತ್ತಮಗದೆ ನರಂಗೆ ವರಶಂಖಂ || ಜನ
ಮೆಲ್ಲ ಪೊಗಳೆ ಬಂದುವು | ಸನುಮತದಿಂ ಕಾಣ್ಕೆಯಾಗಿ ಮಯನಿಂದಂ ||೩||

ನಾರದನೊಂದಿನದೊಳ್ಬಂ | ದಾ ರಾಜನಸಭೆಯ ಕಂಡು ಸಂತಸದಿಂ ||
ದೀರೇಳು ಭುವನದೊಳಗಿವ | ಕೋರಗೆಯಹ ಸಭೆಯ ಕಾಣೆನಾನೆಂದಂ ||೪||

ಸುರಮುನಿ ನುಡಿದಂ ಪಲ್ಗಳ | ವರರುಚಿ ಮೆಯ್ವೆಳಗ ಪೆರ್ಚಿಸಲ್ಕಲವಿಂ ||
ನರಪತಿಕೇಳ್ನಿಮ್ಮ ಪಿತಂ | ಸುರಭೆಯೊಳ್ಸೊಗದಿನಿರ್ಪ ನತಿಮುದದಿಂ ||೫||

ರಾಜಸೂಯಮನೆಗೆಯ್ದಾ | ರಾಜೇಂದ್ರ ತ್ರಿಶಂಕು ಸೂನು ಸುರಪತಿಯಾ ||
ರಾಜಿಸ ಸಭೆವಡೆದಂ ನೀ | ನೋಜೆಯೊಳಿದ ನೆಸಗು ತಮ್ಮದಿರ್ಪಹಿತಂ ||೬||

ನಿನ್ನಯ ಪಿತನಾಣತಿಯಂ | ಮನ್ನಿಸಿನೀಂ ಕ್ರತುವ ನೆಸಗೆ ವಾಸವನ ||
ಸನ್ನುತಸಭೆ ಲಭಿಸುವುದು ಜ | ಗನ್ನುತ ಕೇಳೆಂದು ನುಡಿದು ತಾಂ ಪೋದಂ ||

ಅನಿತರೊಳಲ್ಲಿಗೆ ಬಂದಾ | ದನುಜಾಂತಕನೆಂದ ನಿದುವೆ ಕಷ್ಟತರಂ || ಜನ
ಪನೆ ಮಾಗಧನಂ ಗೆ | ಲ್ದನುವರದೊಳ್ಬಳಿಕ ಚಿಂತಿಪುದು ವಿಹಿತಂ ||೮||

ಪಲಸೂಳೊಳೆನ್ನ ನಟ್ಟಿದ | ನಳವಿಯಿನಾಚೈದ್ಯ ನವನಗೆಲಲರಿದೈ || ಬಲ
ರಿಪು ಭಯದಿಂ ಗಿರಿಗ | ಳ್ಜಲಧಿಯಪೊಕ್ಕಂತಡಂಗಿದೆವುನಾವುಂ ||೯||

ಶೂಲದಕೈಯಿಂ ಸಾಸಿರ | ದಾಳ್ಗಳ್ಮತ್ತಿರ್ಪ ನಾಗಿರಿವ್ರಜಮಂ || ಶೂಲಿ
ಯ ವರದಿಂ ಬೆರೆದಿಪ | ನಾಲಿಸು ಮಾರುತಿಯೆ ಬಲ್ಲನವನಳವಂ ||೧೦||

ಮಡಿದೊಡವಂ ಸೆರೆಯೊಳಗಿಹ | ಪೊಡವಿಪರೆಲ್ಲರ್ಸಿಸತ್ತು ವಶವಾಗಿ ||
ನಡೆದ ಪರುಳಿದರು ಮುಜುತೆ | ನುಡಿವಿಾರದೆ ಬಾಗಿಲಲ್ಲಿ ಕಾಯ್ದಿಹರೈ ||

ಎಂದು ಸಮ್ಮತಿಸಿ ದೇವಕಿ | ನಂದನ ನಾಭೀಮ ಪಾರ್ಥರೊಡಗೂಡಿ ||
ಅಂದೆ ನಡೆದಂ ಗಿರಿವ್ರಜ | ಕಂದದ ಕವಿವಚಿಪ ತೆರದೆ ದಂತಗಳಂ ||೧೨||

ಕಳೆದಾನಾಡುಗಳಂ ನೃಪ | ತಿಳಕದ್ವಿಜವೇಷವಾಂತು ಮಾಗಧನ ||
ನಿಳಯವ ಪೊಕ್ಕಮರ್ಗದಿಂ | ತಳೆದಾ ಮಣಿಭೂಷಣಾಂಬರಾವಳಿಯಂ ||೧೩||

ಬಂದುಕುಳ್ಳಿರ್ಪ ವಿಪ್ರರ | ವಂದಿಸಿ ಬಿಲ್ಲಿದೆಯ ಕುರುಪುಗಳ ಕಂಡಾ ||
ನಂದದಿನೀವಾರೇತಕೆ | ಬಂದಿರ್ಪಿರೆನುತ್ತೆ ಪೇಳ್ದನಾಮಗಧಂ ||೧೪||

ಭೀಮಾರ್ಜುನರಂ ಪೆಸರಿಸಿ | ಕಾಮುಪಿತಂ ಕದನಭಿಕ್ಷೆಯರ್ಥಿಸಿದಂ ||
ಭೀಮನೆ ಜತೆ ಪಾರ್ಥಂ ಶಿಶು | ತಾಮಸನೀಂ ಗೊಲ್ಲನೆನುತವಂ ಜರೆದಂ ||೧೫||

ಕುವರಂಗೊಪ್ಪಿಸಿ ರಾಜ್ಯವ | ನವನಾಭೀಮನೊಳೆ ಪೋಣರಲನುವಾದಂ ||
ದಿವಿಜಾಧಿಪತಿಯೊಳಾ ದಾ | ನವವೃತ್ರಂ ಪೋಣರಲೆಳಸಿದಂತೆವೊಲು ||೧೬||

ಸುತ್ತುತೆಮಂಡಲಮಂ ನು | ಗ್ಗೊತ್ತಿಯೆನಡುಗಿಸುತೆಭೂಮಿಯಂಬಲದಿಂ ||
ಎತ್ತುತೆ ಮುಷ್ಟಿಗಳಂ ತಿವಿ | ಯುತ್ತಂ ಕಾದಿದರು ಘೋರತರಮೆನಿಸೆ ||೧೭||

ಮುಳಿಸಿಂ ಕಾದಿದರಿರ್ವರು | ಮಳವಿಯೊಳಂ ಪಕ್ಷದನ್ನೆಗಂ ಸಮದಿಂ ||
ಬಳಿಕಬೃಹದ್ರಥಸೂನುವ | ಕಲಿಭೀಮಂ ಕೆಡಹಿ ಜಯಸಿರಿಯಕೊಂಡು ||

ಸೆರೆವನೆಯೊಳ್ಸಿಲುಕಿದರ್ಗ | ನರಪಾಲರು ಮಬಲೆಯರ್ಕಳುಂ ಬಂದು ||
ವರವೀರರ್ಗೆರಗಲ್ಕಿ | ರ್ಭರಕೃಪೆಯಿಂ ಸಲಹಿ ಪುರಕೆ ನಡೆತಂದಂ ||೧೯||

ಪಲದಿನಮಲ್ಲಿರ್ದ ಹರಿ | ಬಲಸಹಿತಂ ತನ್ನ ಪುರಿಗೆ ಪೊರಮಟ್ಟಂ ||
ಬಳಿಕಂ ಧರ್ಮಜನನುಜರ | ಕಳುಹಿಸಿದಂ ಗೆಲ್ಲೆ ನಾಲ್ಕುದಿಕ್ಕುಗಳಂ ||೨೦||

ಮರುತಜನಾಗಳ್ಮಾಡಣ | ಧರೆಯೊಳ್ತೆರಳಲ್ಕೆ ತೂರ್ಯದಾರಾವಂ || ಗಿರಿ
ಯಂ ನಡುಗಿಸಲಲ್ಲಿಯ | ನರರೆಲ್ಲರ್ಘೂಳಿಯಂತೆ ಗವಿಪೊಕ್ಕರ್ ||೨೧||

ನಗರಿಯೊಳುರುಕಂಬಂಗಳ | ಬಗೆಬಗೆಯಿಂ ನಡಿಸಿ ಜಯವತೋರ್ಪಂತೆ
ನೆಗಳ್ದಂಗರಾಜನೊಳ್ಕಾ | ಳಗಮಂ ಪೂಣ್ದವನ ಧನವ ಕೈಕೊಂಡಂ ||೨೨||

ವೀರಂ ಕಾಶೀಶನಪುರಿ | ವಾರವಗೆಲ್ದರ್ಥನಿಚಯಮುಮಂ ಕೊಂಡು || ಶೂರ
ಪೌಂಡ್ರಕನ ಸೋಲಿಸಿ | ವಾರಣಶೋಣಿತದಿ ತುಂಬಿದಂ ನದಿಯುಂ ||೧೩||

ನರಪತಿಗಳಿತ್ತ ಧನಮಂ | ಪೇರಿಸಿಯೆ ಕುಂಜರ ಶತಂಗಳೊಳ್ಭರದಿಂ ||
ಸುರಪನ ದೆಸೆಯಿಂ ತಿರುಗಿಯೆ | ಮರುತಸುತಂ ಬಂದು ಕಂಡನಗ್ರಜನಂ ||೧೪||

ಪಾಂಡವಮಧ್ಯಮನಾಗ | ಳ್ಗಾಂಡಿವಮಂ ಪಿಡಿದು ನಡೆದನುತ್ತರದಾ ||
ಖಾಂಡವಜಯಿ ಪಾತುರದಿಂ | ಖಂಡೇಂದು ಧರಂಗೆ ಸಾಟಿಯೆನುವಂತೆ ||೧೫||

ನೃಪರಾಸಾಲ್ವಾದಿಗಳತಿ | ಕೃಪಣತೆಯಿಂದೋಡೆ ಕಾಮರೂಪದೊಳಾ ||
ನೃಪತಿಯ ಸೋಲಿಸಿ ಮತ್ತಾ | ದ್ವಿಪನಾದಂ ಯವನಕಂಜವನಕಾಗಳ್ ||೧೬||

ಪುರವೈರಿಶಿರದಿ ಸುರುಳ್ದಾ | ಸುರತಟಿನಿಯು ಜಲವೆತ್ತೊಯ್ದುದು ಹಿಮಗಿರಿಯ ||
ಪರಿಸರದಡವಿಯು ಮುತ್ತಿತು | ನರಸಬಲಂ ಕಲಕಲಂಗಳಿಂದಾಗಳ್ ||೧೭||

ಕೋಡೊಳಗಿರ್ಪಜೆಟ್ಟದ | ನಾಡಿನನೃಪತಿಗಳ ಗೆಲ್ದು ಸಾಹಸದಿಂ ||
ರೂಢಿಸಿದಪಣಮುಮಂ ಕೈ | ಗೂಡಿದಕೀರ್ತಿಯುಮನಾಂತನಾ ವಿಜಯಂ ||೧೮||

ಸೇನೆಯ ಕರಿಗಳ್ಪೊಕ್ಕಾ | ಮಾನಸ ಪದ್ಮಗಳ ಕೀಳ್ತು ಸುಗ್ಗಾಡಲ್ ||
ತಾನಾಗಂಧರರೆರೆಯನ | ಸೇನೆಯ ಮುತ್ತಿದನು ಪಾರ್ಥನುರವಣೆಯಿಂ ||೧೯||

ಫಲುಗುಣನಾಯೋಧನದೊ | ಳ್ಗೆಲಿದಾಚಿತ್ರರಥ ಸೇನೆಯಧಿಪತಿಯುಂ ||
ಚಲದಿಂ ಪಿಡಿದಶ್ವಂಗಳ | ಕೊಳುತಂ ಹೇಮಾದ್ರಿಯೆಡೆಗೆ ನಡೆತಂದಂ ||೨೦||

ಮುಗಿಲಂ ಮುಟ್ಟುವ ಶಾಖಾ | ಗ್ರಗಳಿಂ ಕಂಗೊಳಿಪ ಜಂಬುಮಂ ಕಂಡಾ ||
ನಗವೈರಿ ತನೂಜಂ ಸೇ | ನೆಗೆ ಮಾರ್ಗಶ್ರಮಮನೀಗಿದಂ ನೆಳಲೊಳ್ ||೨೧||

ನೇರಿಲ್ವಣ್ಣಿಂದೊಸರ್ದಾ | ಸಾರದೆ ಪರಿಯುತ್ತಮಿರ್ಪ ನಿಮ್ನಗೆಯಿಂ ||
ಸೇರುತಲಲ್ಲಿಂದುತ್ತರ | ಮೇರುವ ಕುರುಭುವಿಯ ಕಂಡನಾ ಪಾರ್ಥಂ ||೨೨||

ಅಲ್ಲಿಯ ಜನರಿಂದುಲುಪೆಗ | ಳೆಲ್ಲವ ಕೈಕೊಂಡು ಧನದನಂಗೆಲ್ದಾ ||
ಮಲ್ಲಂ ಮಣಿ ನಿಚಯಂಗಳ | ಕೊಳ್ಳುತೆ ಪಿಂದಿರುಗಿ ಬಂದನಿಜಪುರಿಗೆ ||೨೩||

ರವಿಶಶಿಗಳಾವದಿಶೆಯೊಳ್ | ಛವಿಯುಳಿವಸ್ತಮಿಪ ರುಳಿದಗ್ರಹಗಣಮುಂ ||
ತವೆ ಮುಳುಗುವುದತ್ತಲ್ಪಾಂ | ಡವನಕುಲಂಗೆಲ್ಲಲೆಂದು ಪೊರಮಟ್ಟಂ ||೨೪||

ಘುರದೊಳ್ತ್ರಿಗರ್ತಶಿಬಿಮು|ಖ್ಯರಬಲಮುಂಮುರಿದುದ್ರವ್ಯಮಂಕೊಂಡಾ
ನರನನುಜಂ ನಿಜನಗರಿಗೆ | ತಿರುಗಿದನಾ ಸೇನೆಸಹಿತ ಜಯಮಾಂತು ||೩೫||

ಸಹದೇವನೆಯ್ದಿದಕ್ಷಿಣ | ಮಹಿಯೊಳ್ನೀಲಾದಿ ವೀರರಂ ಜಯಿಸಿ || ಮ
ಹಿಮೆಯು ತೋರುತೆಪಣಮಂ|ವಿಹಿತದಿ ಪಡೆದೆಯ್ದಿ ಮುಂದೆನಡೆತಂದಂ||೩೬||

ಕೋಡೊಳ್ಕಳಶಜನಡಿಯುಂ | ನೋಡಿಯೆ ವಿಂಧ್ಯಾದ್ರಿಯಲ್ಲಿ ಪಲದಿವಸಂ||
ಆಡುತಲಿರ್ದಾ ರೇವೆಯ| ಕಾಡೊಳಗಾನೆಗಳ ಸೊಬಗನೋಡುತ್ತಂ ||೩೭||

ಕಾವೇರಿಯುಮಾರ್ಗದಿ ಚೋ|ಳಾವನಿಯುಂ ದಾಂಟಿ ಕೌಂಗಿ ನಡವಿಗಳಂ||
ಭಾವಿಸುತೆ ಪಾಂಡ್ಯವಂ ಸಹ|ದೇವಂ ಕಂಡೊಡನೆ ಮುಂದೆ ನಡೆತಂದಂ||೩೮||

ಅವನಾಣತಿಯಿಂದಂ ದಾ| ನವನಾ ಹೈಡಿಂಬಿ ಲಂಕೆಯಧಿಪತಿಯಿಂ || ನವ
ರತ್ನಂಗಳುಮಂತಾ | ಳವನಾಪದಿ ನಾಲ್ಕನೊಡನೆ ತಂದಿತ್ತಂ ||೩೯||

ವಿಜಯವನಾಂತಾ ನಕುಲಾ | ನುಜನೆಯ್ತಂದಣ್ಣನಂಘ್ರಿಯುಂ ಕಂಡಂ ||
ಅಜಪಿತೆ ನೈತಂದೊಡನೆಯು| ಯಜಮಾನನ ಕಂಡು ಮನ್ನಿಸಿದನಿವರಂ ||೪೦||

ಮುರಹರನಾಣತಿವಡೆದಾ | ಧರಣೀಶಂ ಕೃಷ್ಣೆಯೊಡನೆ ಶುಭದಿನದೆ ||
ವರಯಜ್ಞದೀಕ್ಷೆದಾಳ | ಲ್ನೆರೆದು ಮುನೀಶ್ವರರತೊಡಗಿದಕ್ರತುವಂ||೪೧||

ದೆಸೆದೆಸೆಯಿಂದೈತಂದ | ವಸುಧೇಶಕ್ರತುವ ನೋಳ್ಪವೆಂದಾಗಳ್ ||
ಬಸೆದವತರಿಸಿತು ನಿರ್ಜರ | ವಿಸರಂ ಮಂತ್ರಂಗಳಿಂದೆ ಕರೆಯುತಿರಲ್||೪೨||

ನವಧೂಮಾಂಬುದಮಾಮೋ|ದವನಾನುತೆ ಕುಣಿವಬರ್ಹಿಯುಂದದೊಳೆ||
ಭುವನಂಗಳೆನಿಪ ಸರಸಿಯೊ| ಳವನಿಪಯಶಮೆಂಬ ಹಂಸೆಗಳನೊಲಿಸೆ||೪೩||

ತಣಿಸಿದನಾತ್ರಿದಿವೌಕಸ | ಗಣಮಂ ನೃಪನಿಷ್ಟದಾಹುತಿಗಳಿಂದಂ || ಎಣಿ
ಸದೊಲಿದಿತ್ತು ವರದ | ಕ್ಷಿಣೆಯಿಂ ಭೂಸುರರನೊಲಿಸಿದಂ ಭೂಪಂ ||೪೪||

ವಸುದೇವಸುತಂ ಗರ್ಘ್ಯವ | ನೊಸೆದೀಯಲ್ಸಭೆಯೊಳದನು ಸೈರಿಸದೆ||
ಶಿಶುಪಾಲಂ ಜರೆದಂ ಹರಿ| ಬೆಸಸಲ್ತಲೆತರಿದು ಕೊಂದುದಾ ಚಕ್ರಂ ||೪೫||

ಪಾರಾಶರಿ ಮುಂತಾದ | ಧಾರಿಣಿಪತಿಯಿಂದೆ ಸತ್ಕೃತಿಯನಾಂತು || ಸೇ
ಧಿದರಾವಾಸಂಗಳ | ಕೌರವರು ನೃಪರು ಮಂತೆ ಪೊರಮಟ್ಟರ್ ||೪೬||

ಜನ್ನವೆಡರಿಲ್ಲದಂದದೆ | ನಿನ್ನಯ ಕೃಪೆಯಿಂದೆ ನಡೆದುದಿಂದೆಂದು ‖ ಮ
ನ್ನಿಸೆ ಧರ್ಮಜನಾಹರಿ | ತನ್ನನಿವಾಸಕ್ಕೆ ತೆರಳ್ದನೊಲವಿಂದಂ ‖೪೭‖

ಪುರಕ್ಕೈತಂದು ಸುಯೋಧನ | ನುರುಚಿಂತಾನಲದೆ ಬೆಂದು ಪಾಂಡವರ‖
ಸಿರಿಯಂ ನೆನೆದುರೆ ಕರುಬಿದ | ನುರಗಂಗರಳಾಗ್ನಿಯಿಂದೆ ಬೇವಂತೆ ‖೪೮‖

ನಾಡೆರೆಯಂ ಕರುಬುತಲತಿ|ಗೂಢದಿ ಶಕುನಿಯೊಳೆ ನುಡಿದ ನೆಲೆ ಮಾವಾ‖
ನೋಡೀ ತಮ್ಮಂದಿರಿನೇಂ | ನಾಡಿಂದೇಂ ನಿನ್ನನೇನೊನಿಷ್ಫಲವೈ ‖೪೯‖

ಪಡುಮೂಡಲ್ಗೆ ಕಡಲ್ಗಳೆ | ಬಡಗಣ್ಗಾ ಮೇರು ಲಂಕೆ ತೆಂಕಲೊಳೆ ‖
ನಡುವಿರ್ಪಖಂಡರಾಜ್ಯಗ | ಳೊಡೆಯರಗೆಲ್ದೀಗ್ಗೆ ವಡೆದರಾಪಾರ್ಥರ್ ‖೫೦‖

ನಿರುಕಿಸೆ ಸಭೆಯಂಪೊಕ್ಕಾ| ಸರಸಿಯೊಳುರುಳಲ್ಕೆ ತನ್ನ ನೋಡುತ್ತಂ‖
ತರುಣಿಯುಕ್ಕೈವೊಯ್ವುತ್ತಂ | ಪರಿಹಾಸಂಗೆಯ್ದುದೆನ್ನನೋಯಿಪುದೈ ‖೫೧‖

ಸಮರಂಗೆಯ್ದುರುಸಾಸದೆ | ಯಮತನುಜನನಳವಿಯಲ್ಲಿ ಮುಳಗಿಸುವೆಂ‖
ಕ್ರಮತಪ್ಪಿದೊಡವನಿಂದಂ|ಯಮಲೋಕವಸಾರ್ವೆನಾನೆಯಿದುನಿಸದಂ‖೫೨

ಅದನಾಕರ್ಣಿಸಿ ನುಡಿದಂ| ಮದಮುಖನಾ ಶಕುನಿ ಜೀಯಚಿತ್ತವಿಸಾ ‖
ಕದನದೆ ಗೆಲ್ವುದವಂದಿರ | ನಿದಸಾಧ್ಯಂ ಯುಕ್ತಿಯಿಂದೆ ವಂಚಿಪುದೈ ‖೫೩‖

ಇಂತೆನಲೊಪ್ಪುತೆ ಧರಣೀ | ಕಾಂತನ ಬಳಿಗೆಯ್ದಿ ಸಮ್ಮತಿಯಪೇಳ್ದು‖
ಕುಂತೀಸುತರಂ ಕರೆಯಿಪ | ಮಂತಣವಂ ನೆನೆದನಧಿಕಸಂಭ್ರಮದಿಂ ‖೫೪‖

ವಿರಚಿಸಿ ಸಭೆಯ ವಿಚಿತ್ರದೆ | ನಿರುಕಿಸಲೈತಪ್ಪುದೆಂದು ಸಾರಥಿಯಂ ‖
ಕುರುಭೂಪತಿ ಕಳುಹಲವಂ | ಕರೆತಂದಂ ಪಾಂಡುಸುತರ ನಿಭಪುರಿಗೆ‖೫೫‖

ಅನುಜರೊಡಗೂಡಿ ಲಲನಾ | ಮಣಿಸಹಿತೈತಂದನಾಗಯಮತನಯಂ ‖
ಮನುಜನ ವಿವೇಕವಂ ವಿಧಿ | ಘನಬಲದಿಂ ಕಿಡಿಪುದಲ್ತೆ ವಿಷಮಿಸುತಂ‖೫೬‖

ಅರಮನೆಯೊಳಂದುಪಾರ್ಥ|ಪರಿಪರಿಯಿಂ ಸೊಗದೊಳಾಳ್ದರಾಪಗಲೊ
ಳ್ ದುರುಳರಕಪಟನನರಿಯದೆ|ಮರುಳಿಂ ಸಂಜೆಯೊಳು ಸಭೆಗೆನಡೆತಂದರ್‖

ಆಲಿಸು ಧರ್ಮಜ ಧರಣೀ | ಪಾಲರ್ಗೆ ವಿನೋದಕೃತ್ಯಮಾದ್ಯೂತಂ ‖
ಸೋಲುಗೆಲವುಗಳೆನಿಪ್ಪೀ | ಕೇಳಿಗಳಂ ತೋರ್ಪೆನೆಂದನಾ ಸುಬಲಂ ‖೫೮‖

ಯಮಸುತನೆಂದಂ ಮಾವನೆ| ಕುಮತಿಯದೇತರ್ಕೆ ಪ್ರೊಲ್ಲದೀ ಕಾರ್ಯಂ|
ನಿಮಗಭಿಮತವಾಗಿರ್ದೊಡೆ| ಸಮರಸೆ ಕಾಮ ಪ್ರಮವಿಹಿತ ಮರಸರ್ಗೆ ||೫೯||

ಚಿಂತಿಸದಿರರಸ ನಿನಗೀ | ಪಂತಮದೇತರ್ಕೆ ಶಂಕೆಯುಳಿದೀಗಳ್ || ಸಂ
ತೋಷದಿಂದಲಾಡೈ | ಕುಂತೀಸುತ ಕಿರಿದರಿಂದ ಕೇಡುಂಟೆ ||೬೦||

ಮುಳಿಯುತೆ ಧರ್ಮಜನೆಂದಂ | ಕೊಳುಗುಳದೊಳ್ಕದಲೊಲ್ಲದೀ ಮರು
ಳಂ|| ಛಲಮೇತಕೆನಗೆ ಲೋಭಂ| ಸಲದೈ ನಿನ್ನಿಚ್ಛೆಯಂತೆ ನಡೆದಪ್ಪೆಂ ||೬೧||

ಅನಿತರೊಳಾ ಗಾಂಧಾರಂ | ಘನದಕ್ಷ ಕ್ರೀಡೆಯಾಡಲನುವಾದಂ || ಪಣ
ವಂ ಕುರುಪತಿಕುಡಲಾ | ಜನಪತಿಗಳ್ ದೇವನಕ್ಕೆ ಕುಳ್ಳಿರ್ದರ್ ||೬೨||

ಕುರುಪತಿ ನೋಡುತಿರಲ್ಕಾ | ಧರಣಿಪನಾಶಕ್ಕೆ ಹೇತುವೆಂದೆನಿಪಾ ||
ವರದೇವನಕ್ಕೆ ಕುಳಿತ | ನರಪತಿಗಳ್ಪೇರದಲ್ಲಿ ಸಂಭ್ರಮದಿಂ ||೬೩||

ಕರಿತುರಗಂಗಳ ಮೇಣಾ | ಪರಿಚರರಂ ಧನವಧಾನ್ಯಸಂತತಿಯುಂ || ಧರ
ಣಿಪನೊಡ್ಡಿದನಾ ಭೂ | ಸುರ ಧನಮಂ ಬಿಟ್ಟು ಮಿಕ್ಕ ಪ್ರಮನೆಲ್ಲಂ ||೬೪||

ನಕುಲನ ಮೇಣ್ಸಹದೇವನ|ನಕುಟಿಲದಿಂ ಪಾರ್ಥ ಭೀಮರಂ ಸೋಲಲ್||
ಶಕುನಿಯೆ ಗೆಲ್ದಲ್ಲವನತಿ|ಯುಕುತಿಯ ತೋರಿದನು ಸಭೆಯು ಬೆರಗಾಗಲ್||

ಬಳಿಕಂ ತನ್ನನೆಸೋಲ | ಲ್ತಳುವದೆ ಸೌಬಲನುಸಿರ್ದನಿನ್ನಿಹುದೇಂ ||
ಲಲನೆಯ ಕೃಷ್ಣೆಯನೊಡ್ಡೆನೆ | ಘಳಿಲನೆ ಕುಂತೀತನೂಜ ನಹುದೆಂದಂ ||

ಮಾರುತಿ ಕೋಪದೆ ನುಡಿದಂ|ಧೀರರ್ಪ ರರೊಡವೆಯಿಂದ ಮಾಡುವರೆ||
ನಾರಿಯನೊಡ್ಡುವುದುಚಿತವೆ| ಕ್ರೂರಾತ್ಮನ ಕೊಲ್ವೆ ನೀಗಳೆಂದೆನುತಂ||೬೭||

ನಮ್ಮೆಲ್ಲರ್ಗಂ ಶಾಸ್ತ್ರದ ಸಮ್ಮತದಿಂದಣ್ಣನೊಡೆಯನೆನಿಸಿರ್ಪಂ|| ತಮ್ಮ
ಮನದಂತೆ ನಡೆಸುಗೆ | ಸುಮ್ಮನಿರೆಂದೆನುತೆ ತಡೆದನಾ ಪಾರ್ಥಂ ||೬೮||

ರಮಣಿಯುಗೆಲ್ದ ದುರುಳಂ | ಕುಮತಿಯನಬ್ಬರಿಸೆ ಹರುಷದಿಂದರಸಂ ||
ಎಮಗೆ ದಾಸಿಯನೆ ಮಾಳ್ಪೆವು|ಪ್ರಮುದೆಯುತಹುದೆಂದು ದೂತನಂ ಕಳುಹಲ್||

ಬಂದು ಸತಿಯಾ ಸಭಾಂತದೆ| ನಿಂದಕ್ಷಿಗಳಿಂದೆ ಕಣ್ಣನೀರ್ವಿಡುತಂ ||ಸುಂ
ದರಿ ಕೌರವರಳಿವಿಗೆ | ಬಂದಾ ಘನಲೇಖೆಯಂತೆ ಕಾಣಿಸಿದಳ್ ||೭೦||

ಸತಿ ಲಜ್ಜೆಸಿ ನುಡಿದಳ್ದೃ| ಪತಿಗಳ್ಕೇಳುವುದು ದಾಸಿಯೆನಿಸೆನು ನಾಂ ||
ಜಿತನಾವಬಳಿಕ ಧರಣೀ | ಪತಿ ತನ್ನಂ ಸೋಲ್ತ ಸಲ್ತೆ ನಿಕ್ಕುವದಿಂ ||೩೧||

ರವಿತನುಜಂ ನಗುತಾಗಳ್ | ಯುವತಿಯೆನಡೆ ಮನೆಯುಗುಡಿಸಿ ಸಾರಿಸು
ನೀಂ|ಧವರಂ ಪಲಬರನಾಳಿದ| ಯುವತಿಗೆ ನಾಣೇತಕೆಂದನುಬ್ಬುತ್ತಂ||೩೨||

ಕಳೆದಿಳೆಯುಸೋಲ್ತಪಾರ್ಥರ | ನುಳಿವುದುಹಿತವೆನಿಸಿಪ್ಪುದೆಲ್ಲರರಿವಂತೆ ||
ಬಲಿಸುತೆ ವರಿಸಾ ಕೌರವ | ತಿಲಕರೊಳೊರ್ವನನು ಸಮ್ಮತಿಪನಯ್ಯಂ ||

ಅಗ್ರಜನಾಣತಿಯಿಂದ | ತ್ಯಗ್ರಂ ದುಶ್ಶಾಸನೆಯ್ದೆ ಹದಿಬದೆಯಂ ||
ವ್ಯಗ್ರದಿ ಪಿಡಿಯಲ್ಬಂದಂ | ನಿಗ್ರಹಿಪಾ ಕಾಲಭುಜಗನಂತಾಗಳ್ ||೩೪||

ಬರುತಿರ್ಪ ದುರುಳನಂ ಕಂ| ಡುರುಭಯದಿಂ ನಡುಗುತಿರ್ದಳಾ ಸುದತಿ||
ದುರುಳನು ಪೈತಂದಾಕೆಯ| ತುರುಬಂ ಪಿಡಿದೆಳೆದ ನೆಲ್ಲರುಂ ನೋಡಲ್ ||

ಮುಡಿಯಿಂ ಪೂವುದಿರುತ್ತಿರೆ| ಕೆಡೆನುಡಿಯುತೆ ಬಾರಿಬಾರಿಗಂ ಸತಿಯು ||
ಉಡುಗೆಯನೆ ಭರದಿ ನೀಳ|ಲ್ತೊಡಗಿದನಾ ಮುಗಿಲನೊಯ್ವನಿಲನಂತೆ ||೩೬||

ಪಿರಿಯನನನುಸರಿಸಿಯೆ ಕುಳ್ಳಿರುವಾ ಭರ್ತೃಗಳ ಸುಮ್ಮನಿಪಸಭೆಯಂ||
ಪರಿಕಿಸಿ ಚಪಲದಿ ಸತಿಯಾ | ಮುರಹರನಂ ನೆನೆವಳಾರ್ತರವದಿಂದಂ ||೩೭||

ಪ್ರೊನ್ನೊಡ್ಡಣದಿಂ ಜಾರ್ವಾ | ರನ್ನಂಗಳಿನೆಸೆವ ದುಗುಲವೆಳೆವುತಿರಲ್ ||
ಪನ್ನಗಶಯನನ ಕರುಣದಿ | ಮುನ್ನಿನವೊಲ್ಪೊಳೆದು ಬೆಳೆಯುತಿರ್ದವವು||

ಚೇಲಂಗಳನೀಳ್ದೀಳ್ದಾ| ಖಳಂ ಜೇಸತ್ತು ಸುಮ್ಮನಾಗಲ್ಕಾ || ಬಾಲಿ
ಶನು ಜರೆಯುತೆ ವನ|ಮಾಲಿಯು ಮೈವೆುಯನೆ ಪೂಗಳ್ದರಾಸಭಿಕರ್ ||೩೯||

ಅರಸರಕುಲನುಂಸುಡಲಂ|ಕುರವೆನಿಸುವ ರೋಷವಹ್ನಿವೊಳಗುತ್ತಂ ||
ಮರುತಜನೆಂಬಂಬುದದಿಂ | ಸುರಿವಾಘುರ್ಮಾಂಬುವಿಂದೆ ತುಂಬಿದುದು ||೪೦||

ಎಡೆಯೊಳ್ನಿಂದಿಪ ದುರುಳರ| ಗಡಣವನೀಕ್ಷಿಸದೆ ದೂರದೊಳ್ನೀಳ್ವಾ||
ಮಡದಿಯ ನಾಲಿಂಗಿಸಿದಂ | ಕಡೆಗಣ್ಣಿಂನೋಡುತಾಗ ಮರುತಸುತಂ ||೪೧||

ಕೆಂಗಣ್ಪಿಡುತ್ತೆ ಮುಂದಣ | ಸಂಗರಕೇಳಿಯನೆ ನಗುವತೆರದಿಂದಂ|| ಪೊಂ
ಗುವಗದೆಯಂ ತಿರುಹುತೆ | ತುಂಗಭುಜಂ ಭೀಮನಾರ್ಭಟಿಸುತೆಂದಂ ||೪೨||

ಅಲಿಪುದೆನ್ನಯ ಶಪಥವ|ಕಾಳಗದೊಳ್ಸತಿಯ ಮುಡಿಯುಡುಗೆಯೀಳ್ದೀ|
ಖಳನ ಕೊಂದೆನ್ನುಗುರಿಂ | ಸೀಳ್ಗೆರ್ದೆಯಂನೆತ್ತರೀಂಟಿದಪೆನೆಂದು ||೪೩||

ಬಾರೆಲೆ ಕುಳ್ಳಿರೆನುತ್ತಂ| ತೋರಿದನೂರುವನು ಯೋಧನಂ ಸಭೆಯೊಳ್||
ಭಾರಿಯುಗದೆಯಿವನಂ ಮೇ| ಣ್ಣೂರ್ವರ ಸೋದರರ ಕೊಲದೆಬಿಡೆನೆಂದಂ ||
ನರನೆದ್ದು ನುಡಿದನಾಗ | ಳ್ಕರಳಿಯೆ ಸಂಗರದೆ ಸೂತನಾತ್ಮಜನಂ || ಪರ
ಪುತ್ರಮಿತ್ರರೊಡನೀ | ಶರಸಂತತಿಯಿಂದೆ ಕೊಲ್ವೆನಾನೆಂದು ||೮೫||
ಅಂಧನೃಪಂ ಕೇಳ್ದುವುಗಳ| ಕುಂದಿಯೆ ಗುರುಕೃಪರ ಹಿತದಮಾತುಗಳಿಂ||
ಸುಂದರಿಯು ಮರೆಯುಪೊಕ್ಕಾ | ಕುಂದದರಾಜ್ಯವನು ಧರ್ಮಜಂಗಿತ್ತಂ ||೮೬||
ಸಿರಿಯುಂನೆಲನುಂ ಪಡೆದಾ | ವರದಿಂ ನಿಜಪುರಿಗೆ ತೆರಳಲವರಂದು || ಕು
ರುಪತಿಮುಳಿದೆಂದಂ ನೂ | ರ್ವರುಮಕ್ಕಳ್ಮಡಿದೆವೆಂದು ಪಿತನೊಡನೆ ||೮೭||
ಎಳವೆಯಿನೆಮ್ಮೊಳವಂದಿ| ರ್ಮಳದಿಹರಿಂದಬಲೆಯುಮಮತಿಯುನೆವದಿಂ ||
ಕೊಲದೆ ಬಿಡರೆಮ್ಮನೆಲ್ಲರ | ಚಲದಿಂತುರಿಹದೊಳು ಮುಂದೆಗತಿಯೇನೊ ||
ಪುನರಪಿಕರೆಯಿಸವಂದಿರ | ಜನಪತಿ ಜೂದಿನೊಳೆ ಜಾಣನೀಮಾವಂ ||
ಸನುಮತದಿಂದವರಳಿವಿಗೆ | ನೆನೆದಿರ್ಪನುಪಾಯಮೊಂದನಾಲಿಪುದು ||೮೯||
ಭೂನಾಥನೆ ಗೆಲ್ದವರಂ | ಕಾನನಕಟ್ಟುವೆವು ಪನ್ನೆರಳ್ವರಿಸಂ || ಮೇ
ಲೊಂದುವರುಷಮಿರ್ಪುದು | ಕಾಣದವೊಲ್ಕಂಡೊಡೀಕ್ರಮಂ ಮತ್ತೆ ||೯೦||
ಆಲಿಸಿ ಮುದಮಾಂತಾಭೂ | ಪಾಲಂ ಗಾಂಧಾರಿ ಬೇಡಯೆನುತಿರಲು ||
ಕೇಳದೆ ದೂತನ ಕಳುಹಿದ | ನಾಲಸ್ಯವಮಾಡದವರ ಕರೆಯೆನುತಂ ||೯೧||
ಅರೆದಾರಿಯಲ್ಲಿ ತಡೆದಾ | ನರಪತಿಯಾಣತಿಯಪೇಳೆ ವೇತ್ರಧರಂ || ತಿ
ರುಗಿದನನುಜರ್ತಡೆದೊಡ|ಮಿರದೆ ಯುಧಿಷ್ಟಿರನು ವಿಧಿಯ ಮೀರುವನಾರ್||
ನೆತ್ತವಚೆಲ್ಲಿಯೆ ಶಕುನಿ ನೃ|ಪೋತ್ತಮರಂ ಗೆಲ್ದನೊಂದುಚಣದೊಳ್ತಾಂ||
ಪೊತ್ತು ವಲ್ಕಲವನನುಜರ | ವೊತ್ತದೊಡಂ ಸಿದ್ಧನಾದನಾ ಭೂಪಂ ||೯೩||
ಕುರುಪತಿ ಜಯಿಸಿದರಾಜ್ಯದೊ| ಳಿರಸಲ್ಲದು ಕಾಡೆ ನಿಮ್ಮನಾಡೆಂದು ||
ತರಣಿಸುತಂ ಪೇಳಲ್ಕತಿ | ಭರದಿಂ ತಮ್ಮದಿರಗೂಡಿ ಪೊರಮಟ್ಟಂ ||೯೪||
ಇವರ್ಸೈತಪ್ಪರ್ಸಿಜ ಶಪ | ಥವನಾಗಸಿತುರಿಪದಿಂದೆ ನೀನಿಲ್ಲ || ಭವನ
ದೊಳಿರ್ಪುದೆನುತೆ ಯಾ | ದವಿಯಂ ಕರೆದೊಯ್ದನತ್ತಲಾ ವಿದುರಂ ||೯೫||
ಅಂಗನೆಯಗೂಡಿ ನಿಜಶ | ಸ್ತ್ರಂಗಳುಮಂ ಪಿಡಿದು ಕಾನನಕೆನಡೆದರ್||
ತುಂಗಬಲಪಾಂಡುಸುತ ವರ್ಗಂಗಳಮಹಿಮನನು ನೆನೆದು ನಾಡುಳಿದು||೯೬||

ಏಳನೆಯ ಸಂಧಿ ಮುಗಿದುದು

ಎಂಟನೆಯ ಸಂಧಿ.

ದ್ವಿ ಪ ದಿ.

ಭೀಮನಾ ಕಿರ್ಮೀರದೈತ್ಯನ ವಧಿಸಿ | ಕಾಮ್ಯಕವನವ ನಿಷ್ಕಂಟಕ ಮೆನಿಸೆ ||೧||

ಧರ್ಮಜಂ ಧೌಮ್ಯಮುಖ್ಯದ್ವಿಜರಸಹಿತ | ನಿರ್ಮಿಸಿದನಾಶ್ರಮವ ನಾ ದ್ವೈತವನದೆ ||೨||

ಬಳಿಕ ಪಾರ್ಥನು ವ್ಯಾಸಮುನಿಪತಿಯಿಂದ | ಕಲಿತು ಶತ್ರುಂಜಯವೆನಿಪ ವಿದ್ಯೆಯನು ||೩||

ಹಿಮಗಿರಿಯೊಳಭವನಂ ತಪದಿ ಮೆಚ್ಚಿಸಿಯೆ | ವಿಮಲಪಾಶುಪತಾಸ್ತ್ರವನು ಪಡೆವೆವೆನುತೆ ||೪||

ವಿಷಯಗಳ ದಾಂಟೆ ಕತ್ತುರಿಯ ವಾಸನೆಯಿಂ | ದೆಸೆಗಳನು ತುಂಬಿ ಹಿಮದಿಂದ ಮುಚ್ಚಿರುವ ||೫||

ಫಣಿಪತಿ ವಿಷಾಗ್ನಿಯಿಂ ಪೊಗೆದು ಖೇಚರರ | ವನಿತೆಯರ ಕೇಶಕಾಮೋದವೀವಗರು ||೬||

ತರುಗಳಿಂ ಮೆರೆ ವಿಂದ್ರಕೀಲ ಪರ್ವತದ | ವರಶಿಖರದಲಿ ಮೆರೆವ ಗಂಗೆಯನೆ ಕಂಡು ||೭||

ಅದರ ಬಳಿ ಯೊಂದೆಡೆಯೊಳಾಸನದಿ ಕುಳಿತು | ಮದನ ಹರನನು ಜಪಿಸುತಿರ್ದ ನರ್ಜುನನು ||೮||

ಪಣ್ಣಿನಿಂ ಗೆಲೆಯಿಂದ ಲಂಬುವಾಯುಗಳಿಂ | ಸಣ್ಣವಾದೊಡಲಿಂದ ಕೃಷ್ಣೇಂದು ವಂತೆ ||೯||

ನಡುವೆಂಕಿಯುಲಿ ಕಾಲಿನಿಂ ನಿಂದು ರವಿಯು| ಕಡೆಯು ನೋಡುತ ತೋಳ ನೆತ್ತಿ ಜಪಿಸಿದನು |೧೦||

ಘೋರತಪಕಂಜಿ ಮುನಿಗಳು ನಿವೇದಿಸಲು | ಮಾರಹರ ನಾಕ್ಷಣದೆ ಶಬರ ರೂಪಾಂತು ||೧೧||

ಜಡೆಯು ಬಿಗಿಸಿದನು ಫಣಿಬಂಧದಿಂದಾಗ | ಮುಡಿಯು ಗಂಗೆಯು ಚಂದ್ರ ಕಲೆಯು ಮಡಗಿರಲು ||೧೨||

ಬರುಹಿ ಪಿಂಛವನು ಸಿಂಗರಿಸೆ ಕಾಣಿಸಿತು | ಮೆರೆವ ಕೇದಗೆಯು ಗರ್ಭದ ಕಾಂತಿಯಂತೆ ||೧೩||

ಕರಿನುದೋದಕದ ಕಾಂತಿಯು ಪೋಲುತಿರ್ದ | ಕೊರಲೊಳಲುಗಳ ಸರವು ಮುತ್ತುಗಳ ಪಳಿಯು ||೧೪||

ಪೊದೆದು ಗಜಚರ್ಮವನು ಕರದಿ ಬಿಲ್ಪಿಡಿದು | ಮದದಹರನಾ ಪರನ ಸಮ್ಮುಖಕೆ ಬಂದ ||೧೫||

ಎಳೆದಳಿರ ಪೋಲ್ವ ಪಾಟಲ ವಸನವುಟ್ಟು | ಬಳೆಯು ಗಾಜುಗಳ ಮುಂಗೈ ವರೆಗೆ ತೊಟ್ಟು ||೧೬||

ಕರಿಕುಂಭಗಳ ಪೋಲ್ವ ಕುಚಗಳೆಡೆಯಲ್ಲಿ | ವರಗುಂಜೆ ಮಣಿಯು ಮಾಲೆಯನು ಸಿಂಗರಿಸಿ ||೧೭||

ಮಣಿಶಿಲೆಯ ಬಣ್ಣದಾ ಫಣೆಯು ತಿಲಕವನು | ಕುಣಿವೃತ್ತಿಪ ತಾಟಂಕ ಕಾಂತಿ ಬಳೆಯಿಸಲು ||೧೮||

ಪ್ರಿಯನು ತಂದಿತ್ತ ಬರ್ಹವ ನಲಂಕರಿಸಿ | ನಯದ ಕುಸುಮಾವತಂಸವ ಕಿವಿಗೆ ತೊಟ್ಟು ||೧೯||

ಮೆರೆವ ವನಕುಸುಮದಿಂ ಸಿಂಗರಿಸಿಕೊಂಡು | ವರಸಖಿಯರೊಡನೆ ನಡೆತರಲಾಗ ಗಿರಿಜೆ ||೨೦||

ಅಲಸಿಯಾಗಿನಿತಂಬಭರಕೆ ಬಳುಕುತ್ತ | ಚಲುವನಡೆಯಿಂದಲೀಶನ ಪಿಂತೆ ನಡೆಯೆ ||೨೧||

ಪ್ರಥಮಗಣಮಾ ಕಿರಾತರ ರೂಪು ಧರಿಸಿ | ಕ್ರಮದೆ ಶ್ರುತಿಗಳೆನಿಪ್ಪ ನಾಯ್ಗಳನು ಪಿಡಿದು ||೧೨||

ಹಿಮಗಿರಿಯ ಸಾನುಮಾರ್ಗದೆ ನಡೆದರಾಗ | ಪ್ರಮಥಾಧಿಪನು ಮಾರ್ಯೆಯುಂ ಮುಂದೆನಡೆಯೆ ||೧೩||

ತನ್ನ ಸಾನುವನಲಂಕರಿಸೆ ಶಂಕರನು | ಮುನ್ನ ನಿರ್ಝರಜಲಂ ಬಿಸಿಲಿಂದ ಬತ್ತೆ ||೧೪||

ಅಡವಿಯೊಳೆ ಕಾಳ್ಕಿಚ್ಚು ಪರ್ಬುತೆಲ್ಲೆಡೆಯು | ಸುಡುವುದನು ನಿಬಿಡ ಹಿಮವಾರಿ ತಣ್ಣಿಸಿತು ||೧೫||

ಪೊಸವೇಷಮಂ ಕಂಡು ಖೇಚರರ್ನಲಿದು | ಕುಸುಮಾಂಜಲಿಯ ಚೆಲ್ಲಿ ವಂದಿಸಿದರಾಗ ||೧೬||

ಕರ್ಣಿಕಾರದ ಕಾಂತಿಯಾಂತು ಪರಶಿವನು | ತೂರ್ಣದಿಂ ಮೆಯ್ಗೊಂಡ ಮಾಧವನಂತೆ ||೧೭||

ಗಣವನಿಲ್ಲಿಸಿ ತಪೋವನದ ಪೊರಗಣ್ಗೆ | ತ್ರಿಣಯನಂ ಬಂದನಾ ಫಲುಗುಣನ ಬಳಿಗೆ ||೧೮||

ಮೃಡನು ದೂರದಲಿ ತೋರಿದ ಸತಿಗೆ ನರನ | ಬಡತನದಮೆಯ್ಯ ತೋಳನ ಬಿಲ್ಲಬಿಗುಹ ||೧೯||

ತಪವಮಾಡುತಲಿರ್ದ ಸುತ್ರಾಮಸುತನ | ವಿಪುಲಭಕ್ತಿಗೆ ಹೃದಯದಲ್ಲಿ ಮೆಚ್ಚಿದನು ||೨೦||

ಮೂಕನೆಂಬಸುರನನಿತರೊಳಲ್ಲಿ ಬಂದು | ಸೂಕರಾಕಾರವನು ತಳೆದು ಪೊರಮಟ್ಟು ||೨೧||

ಖುರಗಳಿಂ ಶಿಲೆಗಳನು ಪುಡಿಪುಡಿಗೆಯ್ದು | ಮುರಿಯುತೊಡಗಿದನೊಂದು ತರುವನಿದಿರಿನಲಿ ||೨೨||

ನರನು ತನ್ನಯ ತಪಕೆ ಭಂಗಮಾಚರಿಪ | ನುರುಳನಿವನಹಿತನೆಂದರಿದು ಮನದಲ್ಲಿ ||೨೩||

ಕೊಲಲೆಳಸಿ ನೆಲನೊಳಡಿಯಿಟ್ಟು ಭೂತಳವ | ಬಿಲುಸರಳ್ಗಳ ಧರಿಸಿ ಸಮರಕನುವಾದ ॥೩೪॥

ಹರನು ಮಾಕರ್ಣಮಾಗಿಯೆ ಬಿಲ್ಲನೆಳೆದು | ಸರನೆ ತನ್ನಯ ಗುರಿಯು ಕೊಲ್ಲಬೇಕೆಂದು ॥೩೫॥

ತಡೆದೊಡಂ ಪರಿಗಣಿಸದಾ ಶಬರಪತಿಯು | ನುಡಿಸದೆಚ್ಚನು ಕಪಟಕಿಟಿಯನರ್ಜುನನು ॥೩೬॥

ತಪಸಿಯಂಬಿನ ಜತೆಯೊಳೆಚ್ಚನಿತು ಸರಳ | ಶಿವನುಮಧಿಕದ್ಯುತಿಯೊಳೊಪ್ಪುತಿರಲಾಗ ॥೩೭॥

ದೆಸೆಗಳಂ ಬೆಳಗುತ್ತೆ ಬಿದ್ದುದದರೊಡನೆ | ಬಿಸಿಲೊಡನೆ ಸೂರ್ಯನಂತಪರಾದ್ರಿಯಲ್ಲಿ ॥೩೮॥

ಉಳಿದು ಘುರ್ಘುರರವವನಾ ಪಂದಿಯಾಗ | ಪೊಳೆವ ಮಿಂಚನುಪೊಲ್ವ ದಾಡೆಗಳ್ಮುರಿದು ॥೩೯॥

ಮಡಿದತ್ತು ಪೂರ್ವಪಶ್ಚಿಮದನಿಲನಿಂದ | ಬಿಡದೋಡುತಿಹ ಮುಗಿಲ ಮಾಳ್ಕೆಯಿಂ ಕೂಡೆ ॥೪೦॥

ಕೆಡೆದಪಂದಿಯ ಕಂಡು ಫಲುಗುಣನಾಗ | ಮೃಡನೊಡನೆ ನುಡಿದನತಿ ಧೈರ್ಯವಾಕ್ಯಗಳಂ ॥೪೧॥

ಆಲಿಸೆಲೆ ಲುಬ್ಧಕನೆ ಮೊದಲೆನ್ನ ಗುರಿಯು ॥ ಮೇಲೆ ನಿನ್ನಯ ಸರಳು ಮಿವನನೆಡುಹಿದುವು ॥೪೨॥

ಎನಲು ನಗುತೆಂದನಾ ಮಾಯಾಕಿರಾತ | ಘನಸತ್ವಸಂಕುಲದ ವನಮೆನ್ನದಲ್ತೆ ॥೪೩॥

ನಾರಿಯೊಡಗೂಡಿ ಬೇಂಟೆಗೆಬರುತೆ ನಾನು | ದೂರದಿಂದೀ ಮೃಗವನಟ್ಟುತ್ತೈತಂದೆ ॥೪೪॥

ಶರಮೆನ್ನದಿದು ಮೊದಲೆ ಕೊಲ್ಲದಿರೆರಿಪುವ | ಮರುಳನಿನ್ನನು ಕೊಲುತಲಿರ್ದುದೀ ಕಿಟಿಯು ॥೪೫॥

ಮುನಿಯೆ ನಿನ್ನಯ ಪೌರುಷವು ಸಾಕು ತೆಗೆಯೊ | ಎನುವ ಬಿರುನುಡಿಗೇಳಿ ಪಾರ್ಥನಾಗ್ರಹಿಸಿ ॥೪೬॥

ಆಲಿಗಳ್ಕೆಂಪಡರೆ ಪುರ್ಬು ಗಂಟಿಕ್ಕೆ | ಶೂಲಿಯನು ಕೆಡೆನುಡಿಯುತಾಗ
ಳಿಂತೆಂದು ||೪೭||

ಪಾಮರನೆ ನೀಂ ಕಾಡೊಳಿರ್ದು ತೋಳ್ವಲದ | ಸಾಮರ್ಥ್ಯವರಿಯದೀ
ಪರಿ ಗಳಹುತಿರ್ಪೆ ||೪೮||

ಸುಂದರಿಯರಿದಿರೊಳೆನ್ನಂಬಿನಿಂದೀಗ | ಕೊಂದು ನಿನ್ನನು ಪಂದಿಜತೆಗೆ
ಕಳುಹುವೆನು ||೪೯||

ಎಂದು ನುಡಿಯುತೆಮುಳಿದ ಗಣಗಳೀಕ್ಷಿಸಲು | ಚಂದ್ರಶೇಖರನಗಣಿಸದೆ
ಶರವನೆಚ್ಚ ||೫೦||

ಗಗನವನುಮುಚ್ಚಿದುವು ಕ್ರೂರಕಾಂಡಗಳು | ಬಗೆಗಾಣದಂತಾದುದಾ
ಸೂರ್ಯಕಾಂತಿ ||೫೧||

ಫಲುಗುಣನಸರಳುಗಳು ಶತಸಂಖ್ಯೆಯಿಂದ | ಮುಳಿದು ಮಾಯಾ ಕಿರಾ
ತನನು ಮುಚ್ಚಿದುವು ||೫೨||

ಫಣೆಗಣ್ಣನುರಿಯು ತಾಪವಪೆರ್ಚಿಸುತ್ತ | ಕುಣಿಸಿ ಫಣಿಮಣಿಗಳನು
ನದಿಯಬತ್ತಿಸಿತು ||೫೩||

ಮೃದುಬಾಣಗಳನೆಚ್ಚು ಮೊದಲೆ ಫಲುಗುಣನು | ಮುದದಿ ಪುಷ್ಪಾರ್ಚ
ನೆಯ ಮಾಡಿದನು ಶಿವಗೆ ||೫೪||

ಅಕ್ಷಯ-ನಿಷಂಗದೊಳು ಬಾಣಗಳ್ತೀರ | ಲಾಕ್ಷಣವೆ ಕೋಪಿಸುತ
ನರನು ಬೆರಗಾಗಿ ||೫೫||

ಬಿಲ್ವೆದೆಯನಿಳಿಸಿ ಯಮದಂಡದಿಂ ಶಿವನ | ಚೆಲ್ವತಲೆಯೊಳ್ಪೊಡೆದು ನೋ
ಯಿಸಿದನಾಗ ||೫೬||

ಮುಳಿದು ಗಾಂಡೀವದಿಂ ಪೊಡೆಯಲರ್ಜುನನು | ತಲೆಯ ಶಶಿಕಲೆಯ
ದಿರೆ ಮೆಚ್ಚಿ ಹರುಷಿಸಿದ ||೫೭||

ಪ್ರಣಯಕಲಹದೊಳು ಗಿರಿರಾಜನಂದನೆಯ | ಘನಪದಾಹತಿಯ ಸುಖ
ದಿಂ ಮಿಗಿಲೆನುತ್ತೆ ||೫೮||

ಹರನ ಶಿರದೊಳಗಿರ್ದ ಪೊರ್ವಗ್ಗಳಾಗ | ನರನಬಿಲ್ಗೊಣೆತದಿಂ ಮೆಯ್ಮುರೆದು ಬೀಳೆ ||೪೯||

ಸುರನದಿಯುಜಲಕಣಗಳಿಂದಮುಂ ಶಶಿಯ | ಕಿರಣಸುಧೆಯಿಂದಮುಂ ಚೇತನಂಗೊಳಲು ||೫೦||

ಕ್ಷತಜದಿಂ ಕೊಯ್ದು ತಲೆಯೊಳರ್ಧ್ದಿ ತುಂಬೆ | ಶಿತಿಕಂಠನವನಕಾಮ್ರ್ಮಕವ ಹರಿಸಿದನು ||೫೧||

ಬಳಿಕ ನರನಾಗ್ರಹಿಸಿ ದಿಟ್ಟತನದಿಂದ | ಪಲದಿನಂ ಕಾದಿದನು ಲುಬ್ಧಕನಕೂಡೆ ||೫೨||

ಪರನರರು ಮುಷ್ಟಿಗಳ ಯುದ್ಧದಲಿ ನಿಂದು | ಧರೆಯೊಳಗುರುಳ್ದರಾಶ್ಲಿಷ್ಟಬಾಹುಗಳಿಂ ||೫೩||

ಮೇರುವಜ್ರವಪ್ರೋಲ್ವ ವಕ್ಷದಿಂ ಹಿಳಿದು | ಧಾರಿಣಿಯೊಳುರುಳಿಸಲ್ನರನು ಮೆಯ್ಮರೆದ ||೫೪||

ಬಳಿಕ ಚೇತರಿಸಿಕೊಂಡೆದ್ದು ಗಳಿಗೆಯುಲಿ | ಫಲುಗುಣನು ಶಿವಪೂಜೆಯಿಂ ಗೆಲ್ವೆನೆನುತ ||೫೫||

ಮಳಲಲಿಂಗವಮಾಡಿ ವಿವಿಧಸುಮದಿಂದ | ಘುಳಿಲನರ್ಚಿಸಿದನತಿ ಭಕ್ತಿಭಾವದಲಿ ||೫೬||

ಆ ಸುಮಗಳೆಲ್ಲವಾ ಬಿಯದನಾ ಶಿರದೆ | ಲೇಸಾಗಿತೋರುತಿರೆ ನರನು ಬೆರಗಾಗಿ ||೫೭||

ಅಡಿಯೊಳೆರಗಿಯೆನಿಂದು ನುತಿಸಲಾಕ್ಷಣವೆ | ಮೃಡನು ಪ್ರತ್ಯಕ್ಷನಾದನು ಗಣಗಳೊಡನೆ ||೫೮||

ಕಾಳಗದಿ ನೋಯಿಸಿದೆ ದೇವ ಮನ್ನಿಪುದು | ಬಾಲನಪರಾಧಗಳನೆನುತ ಬೇಡಲ್ಕೆ ||೫೯||

ಮೆಚ್ಚಿದೆನು ನಿನ್ನ ಬಿಲ್ಗೊಣೆತದಿಂ ನಾನು | ಇಚ್ಛೆ ಬಂದುದನರುಹು ನಾಂ ಕೊಡುವೆನೆನಲು ||೬೦||

ಬಲ್ಲೆ ನೀನೆಲ್ಲವನು ಪರಮೇಶ ತನಗೆ । ಬಿಲ್ಲಂಬುಗಳನಿತ್ತು ಕರುಣಿ
ಸುವುದೆಂದ ॥೨೧॥

ಅಂಬುಗಳ ತುಂಬಿದ ನಿಷಂಗಂಗಳೆರಡ । ಜಂಭರಿಪು ಸುತನಿಗುತ್ತಮ
ಕಾರ್ಮುಕಗಳ ॥೨೨॥

ವರಮಂತ್ರಪೂರ್ವದಸ್ತ್ರವ ಪಾಶುಪತವ । ಕರುಣಿಸಿದನರ್ಜುನಗೆ ಪರ
ಮಶಿವನೊಲಿದು ॥೨೩॥

ಒಡನೆ ನಿರ್ಜರರಚ್ಚರಿಯೊಳು ನೋಡುತಿರೆ । ಅಡಗಿದನು ಗಣಸಹಿತ
ಚಂದ್ರಶೇಖರನು ॥೨೪॥

ಪೆರರಿಗಳವಲ್ಲದಸ್ತ್ರವ ಪಡೆದು ನರನು । ಕುರುವರರ ಜಯಿಪುದೇಂ
ಘನವೆಂದು ಬಗೆದ ॥೨೫॥

ಪಾಶುಪತವನು ಪಡೆದ ಸುತನ ಸಾಹಸವ । ವಾಸವನು ಕಂಡು ಹರುಷಿ
ಸುತಲಾತನನು ॥೨೬॥

ಪುರಕೊಯ್ದು ಯಮ ವರುಣ ಯಕ್ಷಪತಿಗಳ್ಗೆ । ಭರದಿ ತೋರ್ಪೆನೆ
ನುತ್ತೆ ರಥವನೇರಿಸಿಯೆ ॥೨೭॥

ನಿರ್ಜರಾಂಗನೆಯರಕ್ಕರೊಳು ನೋಡುತಿರೆ । ಅರ್ಜುನನ ಕರೆದೊಯ್ದ
ನಾಗ ಸಗ್ಗಕ್ಕೆ ॥೨೮॥

ಇವನಾ ಜಯಂತನಿಂ ಪ್ರಿಯನು ತನಗೆನುತ । ದಿವಿಜಪತಿಯರ್ಧಾಸನದಿ
ಕುಳ್ಳಿರಿಸಿದ ॥೨೯॥

ಪಲದಿವಸ ಮರ್ಜುನನು ಸುಖದೊಳಲ್ಲಿರಲು । ಚೆಲುವೆ ಯೂರ್ವಶಿ
ಕಂಡು ಮೋಹಿಸಿದಳಿವನ ॥೩೦॥

ಜನನಿಯೆನುತಲಿ ನಿರಾಕರಿಸಲರ್ಜುನಗೆ । ಘನಶಾಪವಿತ್ತಳೆಲೆ ಷಂಡನಾ
ಗೆನುತ ॥೩೧॥

ತಿಳಿದಿದನು ವಿಸ್ಮಯದಿ ಸುರಪನರ್ಜುನನ । ಅಳಬಡಿರುನೀನೆನುತ ಗುಪ್ತ
ದಲಿ ತಿಳುಹಿ ॥೩೨॥

ಅಜ್ಞಾತವಾಸದೊಂದಬುದದೊಳಗಿದನು | ಸುಜ್ಞಾನಿಸನುಭವಿಪ್ರದೆಸುತ ಬೆಸಸಿದನು ||೮೩||

ತಂದೆಯಾಣತಿಗೆ ಮನದಲ್ಲಿ ಹರುಷಿಸುತ | ಗಂಧರ್ವರಾಜನಿಂ ಗಾನಕಲೆಯರಿತು ||೮೪||

ಧರಣಿಗೈತಂದಗ್ರಜನ ಮುಂದೆಸಿಲಲು | ಅರಿತು ಲೋಮಶನಿಂದಲಿವನ ಸಾಹಸವ ||೮೫||

ಅನುಜರೊಡಗೂಡಿ ಮನ್ನಿಸುತ ಧರ್ಮಜನು | ಘನತೀರ್ಥಸೇವೆಯಿಂ ಕಳೆದ ಕಾಲವನು ||೮೬||

ಉತ್ತರಕೆ ನಡೆದು ಪೋಗಲು ಪಾಂಡುಸುತರು | ಮತ್ತರಾದ ಕಳಿಂದರಿದಿರಿಸಿದರಿವರ ||೮೭||

ಗೆಲಿದವರಮುಂದೆ ನಡೆದದ್ರಿಗಳ ದಾಂಟಿ | ಚೆಲುವ ಬದರೀವನಕೆ ಬಂದು ಸೇರಿದರು ||೮೮||

ಅವರ ನರನಾರಾಯಣಾಖ್ಯ ಮುನಿವರರು | ಸುವಿಶೇಷಸತ್ಕಾರದಿಂದ ಮನ್ನಿಸಲು ||೮೯||

ಕೆಲಕಾಲಮಲ್ಲಿರ್ದು ಪಾಂಚಾಲಿಯೊಡನೆ | ಚೆಲುವ ತೀರ್ಥಗಳ ಸೇವಿಸುತಿರ್ದರವರು ||೯೦||

ಒಂದುದಿನ ಕುಸುಮಪರಿಮಳವ ಬೀರುತ್ತ | ಮಂದಮಾರುತನು ಕೃಷ್ಣೆಗೆ ಮುದವನಿತ್ತ ||೯೧||

ಕುಸುಮಗಂಧವನರಿತು ತಂದೀವುದೆನುತ | ಕುಸುಮಾಂಗಿ ಭೀಮನಂ ಪ್ರಾರ್ಥಿಸಿದಳಾಗ ||೯೨||

ಅಹುದೆನುತ ಗದೆಯಾಂತು ಪೊರಮಟ್ಟು ಬೇಗ | ಬಹುದೂರ ನಡೆದು ಕಂಡನು ಮುಂದೆ ವನವ ||೯೩||

ಮುಂದೆ ಕಂಡನು ಭೀಮಸಂಜನಾಸುತನ | ಗಂಧಮಾದನಗಿರಿಯುತ್ತರದಿಂದ ಮೆರೆಯೆ ||೯೪||

ವಾರಿಧಿಯುಲಂಘಿಸಿದ ತನುವನೊದಲಲ್ಲಿ | ತೋರಿ ಬಳಿಕಾ ಕೊಳದ ಪಥವ ತೋರಿದನು ||೯೫||

ರಾಮಕಥೆಗಳ ಕೇಳುತವನ ಸಂಗಡಲೆ | ಭೀಮನುಂ ಪೊರಮಟ್ಟು ನಡೆದ ನಲ್ಲಿಂದ ||೯೬||

ಧನದಸತಿ ಕುಚಮರ್ದಿತೋರ್ಮಿಯಿಂ ಮೆರೆವ | ಘನಸರೋವರವ ಕಂಡರು ವಾಯುಸುತರು ||೯೭||

ಅನಿತರಲಿ ಹೈಡಿಂಬಿ ಬಂದುನಿಂದಿರಲು | ವನಜಗಳ ಕೀಳುತ್ತಹುದೆನುತಬೆಸಸಿದನು ||೯೮||

ಅಲ್ಲಿರ್ದ ಕಾಹಿಗರ ಗೆಲ್ದುರುಳಿಸುತ್ತ | ಫುಲ್ಲ ಕಲ್ಹಾರಗಳ ಕೀಳ್ತನಾಕ್ಷಣವೆ ||೯೯||

ಸುಮಗಳಂ ಕೊಂಡು ನಡೆತಂದು ಕಾನನಕೆ | ಅಮರವೈರಿಯು ಕಳುಹಿದನು ಪೋಪುದೆನುತ ||೧೦೦||

ಸೋದರರ ಕಂಡು ಸೌಗಂಧಿಕವ ತೋರಿ | ಆದರಿಸುತಿತ್ತ ನಿಜಸತಿಗೆ ಪುಷ್ಪಗಳ ||೧೦೧||

ಬಳಿಕೊಂದುದಿನ ವಿವನು ಬೇಂಟೆಗೆ ಗಮಿಸೆ | ಖಳಜಟಾಸುರ ನೆಂಬ ನಲ್ಲಿಗೆಬಂದು ||೧೦೨||

ಸೋದರರಸಹಿತ ಪಾಂಚಾಲಿಯುಂಪಿಡಿದು | ವೇದಗಳ ಕದ್ದೊಯ್ದ ಕೈಟಭನಂತೆ ||೧೦೩||

ಓಡುತಿರೆ ಪೆಗಲೊಳೇರಿಸಿ ಕೊಂಡುಬೇಗ | ನೋಡಿ ಭೀಮನು ಬಂದು ನಿಲ್ಲಿಸುತ್ತವನ ||೧೦೪||

ಒದರಿ ಗರ್ಜಿಸುತೆಲವೊ ನಿಲ್ಲುನಿಲ್ಲೆನುತ | ಮದಗಜವ ನಂಕುಶದ ತೆರದಿಮರದಿಂದ ||೧೦೫||

ಕೆಳಗಿಳಿಸಿ ಪಾಂಡವರ ನಾಜಟಾಸುರನು | ಕೊಳುಗುಳಕೆ ನಿಂದನಾ ಮಾರುತಿಯೊಡನೆ ||೧೦೬||

ಗರ್ಜಿಸುತಲಾ ತಿಳಿನ ನೊದೆದು ಹಿಳಿವುತ್ತ | ಅರ್ಜುನಾಗ್ರಜನವನ ಕೆಡಗಿದನು ಚಣದೆ ||೧೦೭||

ಬಳಿಕವರು ನಡೆದೊಂದು ಮುನಿತಪೋವನದೆ | ಪಲದಿವಸವಿರ್ದರು ಮುನಿಗಳ ಕೂಡೆ ||೧೦೮||

ಸುರಪನೈತಂದೊಂದುದಿನದೊಳರ್ಜುನನ | ಗುರುದಕ್ಷಿಣೆಯು ನೀಯೆ ಬರವೇಳ್ಕುಮೆಂದ ||೧೦೯||

ಜಲನಿಧಿಯ ಮಧ್ಯದೊಳಗಿರ್ಪ ದಾನವರು | ಮುಳಿದು ಕಾಡುವರು ತನಗಳವಲ್ಲವೆಂದ ||೧೧೦||

ಇಂದ್ರನಾಣತಿಗೊಪ್ಪಿ ಪಾರ್ಥನಾಕ್ಷಣವೆ | ಚಂದದಿಂದವಸಿತ್ತ ಮಕುಟವ ಧರಿಸಿ ||೧೧೧||

ಮಾತಲಿಯು ತಂದ ರಥವೇರಿದನು ಪಾರ್ಥ | ಪ್ರೀತಿಯಿಂ ನಿರ್ಜರರು ಜಯರವಂಗೆಯ್ಯೆ ||೧೧೨||

ಗಗನಮಾರ್ಗದಿ ನೀಲಸಂಕಜವನನ | ಸುಗುಣನಿಧಿ ದಾಂಟಿ ಪಾತಾಳಕೈತಂದ ||೧೧೩||

ದೇವದತ್ತವನೂದೆ ವಿಜಯನತಿಭರದಿ | ದೇವಾರಿಗಳ ಕುಲಮೆ ನಡುಗಿದುದು ಭಯದಿ ||೧೧೪||

ಅಬ್ಬರಿಸುತಡಿಗಡಿಗೆ ಶಂಖಮೂದಲ್ಕೆ | ನಿಬ್ಬರದಿ ಮುಕ್ಕೋಟಿದಾನವರಾಗ ||೧೧೫||

ಸಂಗರಕೆ ಸನ್ನದ್ಧರಾಗಿ ಬಿಲ್ವಿಡಿದು | ಮುಂಗಡೆಯೊಳಿದಿರಾದರರ್ಜುನನ ಕೂಡೆ ||೧೧೬||

ತುಂಬಿದವು ದಿಕ್ಕುಗಳ ಗಾಲಡಿವ ದರವವು | ಅಂಬುನಿಧಿ ರಕ್ಕಸರಕ್ಷತಜಂಗಳಿಂದ ||೧೧೭||

ಮೂರುಕೋಟಿ ನಿವಾತಕವಚರ ಕೊಂದು | ಸಾರಿಬಂದನು ಭೋಗವತಿಯಿಂದನರನು ||೧೧೮||

ಬಲವಂತರಾ ಕಾಲಕೇಯರೆಂಬುವರು | ಬಲಿದಿರ್ದರಧ್ವದೊಳು ಹೈರಣ್ಯ ಪುರದಿ ||೧೧೯||

ಅವರನಿದಿರಿಸಿ ಕೊಲ್ಲಲೆಳಸಿ ನರನಾಗ | ಜವದಿನಿಂದಸು ಕಾಳಗಕ್ಕೆ ಮುಂಬರಿದು ||೧೨೦||

ಉರಗಂಗಳಾಗಿ ಮೇಣ್ಗರುಡಂಗಳಾಗಿ | ದುರುಳರಾನೆಗಳಾಗಿ ಸಿಂಗಂಗಳಾಗಿ ||೧೨೧||

ಪುಲಿಗಳಾಗಿಯೆ ಕೆಲರು ಕಾಳಗಕೆನಿಲಲು | ಕೊಲುತೆಬಂದನು ಕಾಲಕೇಯರ ನರನು ||೧೨೨||

ಇಂತುಗೆಲ್ದು ಕಾಲಕೇಯರ ಧುರದಿ | ಸಂತಸದಿ ಸಗ್ಗಕ್ಕೆ ಬಂದನಾ ಪಾರ್ಥ ||೧೨೩||

ಸುರಪನರ್ಜುನನ ಸಾಹಸವ ಪೊಗಳುತ್ತ | ಧರಣಿಗೆಯ್ದುವುದೆಂದು ಬೆಸನಿತ್ತ ನಾಗ ||೧೨೪||

ಆ ಧನಂಜಯನು ಭೂತಳಕೆ ನಡೆತಂದು | ಸೋದರರರಕಂಡು ವಿಸ್ತರಿಸಿದನು ಜಯವ ||೧೨೫||

ಕೇಳ ಹರ್ಷಿಸುತ ಪಾರ್ಥನನು ಕೊಂಡಾಡಿ | ಲೀಲೆಯಿಂ ಪಾಂಡವರು ಪಲದಿವಸವಿರ್ದು ||೧೨೬||

ಲೋಮಶನ ಕಳುಹಿ ಸಗ್ಗಕ್ಕೆ ಮುದದಿಂದ | ಆ ಮಹಾದ್ವೈತ ಕಾನನವ ಸೇರಿದರು ||೧೨೭||

ಎಂಟನೆಯ ಸಂಧಿ ಮುಗಿದುದು.

ಒಂಬತ್ತನೆಯ ಸಂಧಿ.

‖ ಕಂದಪದ್ಯ. ‖

ಬಡತನದಿಂದಂ ಪಾಂಡವ | ರಡವಿಯೊಳಿರ್ಪುದನು ಕೇಳ್ದು ಕುರುಪತಿ ಯಾಗಳ್ ‖ ಸಡಗರದಿಂ ಬಲಸಹಿತಂ | ನಡೆತಂದಂ ಬನಕೆ ಘೋಷಯಾತ್ರೆಯ ನೆವದಿಂ ‖೧‖

ಪೊರಮಟ್ಟು ಬಂದು ಸೇನೆಯ | ನಿರಿಸಿದನಾ ದ್ವೈತವನದ ಪಾರ್ಶ್ವದೆ ಕುರುಭೂ ‖ ವರ ನಾಗಳ್ತಡೆದರ್ಗಂ | ದರರಿಂದ್ರನ ಬೆಸನನಾಂತು ಚಿತ್ರರಥಾದ್ಯರ್ ‖೨‖

ಸಮರಂ ನಡೆವುದು ಕುರು ಭೂ | ರಮಣರ್ಗಂ ಗಂದರರ್ಗೆ ಮತಿ ಭೀಷಣದಿಂ ‖ ಶಮನನ ಜನ್ನಕೆ ನಡೆತಂ | ದಮರರ ಪೋಲ್ಬಂದು ಮುಂದೆ ನಿಂದಿರಲಾಗಳ್ ‖೩‖

ಸತತಂ ವೀಣೆಯ ತಂತಿಯ ! ನತಿಶಯದಿಂ ಮೀಂಟುತಿರ್ಪ ನಿಮಗೀ ಬಿಲ್ಲೊಳ್ ‖ ಚತುರತೆ ಯೆತ್ತಣ ದೆನುತವ | ಮತಿಸುತೆ ಪಳಿದಟ್ಟುತಿರ್ದನಾ ಸೂತ ಸುತಂ ‖೪‖

ಅವನಂಬುಗಳಿಂ ತುಂಬಿ | ರ್ದವಯವದಿಂ ನೊಂದ ಸೇನೆಯುಂ ಪರಿಕಿಸುತಾ ‖ ಹವಕೈತಂದಿದಿರಿಸಿದಂ | ಜವದಿಂ ಕಲಿಚಿತ್ರಸೇನನಾ ಕುರುಬಲವಂ ‖೫‖

ಆ ಯೋಧನದೊಳಗೆಬ್ಬಾ | ಸಾಯಕವಂ ಶರದಿ ನಸ್ತ್ರದಿಂದವಸ್ತ್ರಗಳಂ ‖ ಮಾಯಾ ಬಲದಿಂ ತರಿಯ | ಲ್ನೋಯುತ್ತಂ ರಣದಿ ನೋಡಿದಂ ರವಿತನಯಂ ‖೬‖

ಉರಗನ ಕಂಡಾ ಗರುಡನ | ತೆರದಿಂ ಖೇಚರನೆ ಬಂದು ಕೈಸೆರೆವಿಡಿದಾ ‖ ಕುರುಪತಿಯ ಬಿಗಿಸಿ ರಜ್ಜುವೊ | ಳುರವಣೆಯುಂ ವಜ್ರಗಧಿಕ ಹರುಷವನಿತ್ತಂ ‖೭‖

ಪಿಡಿದೊಯ್ದು ಗಗನಮಾರ್ಗದೆ | ನಡೆಯುಲ್ನೋಡುತ್ತೆ ದುಃಖದಿಂ ಕೌರವನಾ ‖ ಮಡದಿಯರೆಲ್ಲರ್ಧರ್ಮಜ | ನಡಿಯೊಳ್ಮರೆವೊಕ್ಕು ಪತಿಯ ಕರುಣಿಪುದೆಂದರ್ ‖೮‖

ವೈಮಾನಿಕರೆಳೆದೊಯ್ದು | ಭೂಮೀಶನ ಬಿಡಿಪುದೆಂದು ಕಣ್ಣೀರ್ವಿಡುವಾ ‖ ಭಾಮಿಯರ ಮೊಗವ ನೋಡುತೆ | ಭೀಮಂ ನಸು ನಕ್ಕು ನುಡಿದನಾ ಧರ್ಮಜನೊಳ್ ‖೯‖

ಸಿರಿಯುಮದದಿಂದ ಬೆರೆದೀ | ಕುರುರಾಜಂ ಬಡವರೆಂದು ಭಂಗಿಸೆ ನಮ್ಮಂ ‖ ಭರದಿಂ ಬರೆ ಪಿಡಿದಂ ಗಂ | ದರರಾಜಂ ನಮಗಿದೇಕೆ ದುರುಳರ ಕೂಟಂ ‖೧೦‖

ಇವನೆಮಗಪಕೃತಿ ಶತೆಕವ | ತವೆಗೆಯ್ದಂ ಬಾಲ್ಯದಿಂದೈ ಪಲಸೂಳ್ವೆಮ್ಮೊಳ್ ‖ ಅನಮತಿಗೆಯ್ದಂ ಸಭೆಯೊ | ಳ್ಯುವತಿಯನೀ ದುರುಳ ನುಣ್ಗೆ ಕಜ್ಜದ ಫಲಮಂ ‖೧೧‖

ಇಂತೆಂದು ನುಡಿದ ಭೀಮನ | ಸಂತವಿಸುತೆ ನುಡಿದ ನಣುಗ ಕೇಳೀಗಳ್ನೀ ‖ ನಿಂತುಸಿರಸಲ್ಲ ದಿಳೆಯೊಳ | ಗೆಂತುಂ ದಾಯಾದಹಿತಮೆ ಜನ ಸಮ್ಮತಮೈ ‖೧೨‖

ಇದಿರೊಳಿರಲ್ನೀಂ ವಾಂಶಿಕ | ನದಯದೆ ಸೋದರನನೊಯ್ದನೆನಲೀ ಲೋಕಂ ‖ ಬೆದರದೆ? ಭರತ ಕುಲಕ್ಕೀ | ನೊದಗದೆ? ದುಷ್ಕೀರ್ತಿ, ಭೀಮ ಗುಣನಿಸ್ಸೀಮಾ ‖೧೩‖

ಮರೆವೊಕ್ಕು ಬೇಡುತಿರ್ಪೀ | ತರುಣಿಯರಂ ಕಾವುದುಚಿತಮೆನಿಸುವುದೀಗಳ್ ‖ ಭರದಿಂ ಬಿಲ್ವಿಡಿದೆಯ್ದಾ | ಕುರುಪತಿಯಂ ಬಿಡಿಸಿ ಕೀರ್ತಿವಡೆವುದು ಸೀಂಗಳ್ ‖೧೪‖

ಆಣತಿಯ ಮೀರೆವೆನುತಂ | ಬಾಣಾಸನಗಳನೆ ಪಿಡಿಯುತಂ ಭೀಮಾದ್ಯರ್ ‖ ಜಾಣಿಂ ನಡೆಯುಲ್ಯುದ್ಧದ | ತಾಣಕೆ ಪಿಂದಿರುಗಿ ಬಂದರಾಗಂಧರ್ವರ್ ‖೧೫‖

ಎಮ್ಮಯು ತಮ್ಮನ ಬಿಡದಿರೆ | ನಿಮ್ಮಯು ಗರ್ವವನೆ ಬಿಡಿಪೆನೀ ಬಾಣ
ಗಳಿಂ || ಸುಮ್ಮನಿರೆನೆಂಬ ಪಾರ್ಥನ | ಪೆರ್ಮೆಯುಲೆಕ್ಕಿಸದೆ ಸರಳಮಳೆ
ಗರೆದರವರ್ ||೧೬||

ಗಗನದಿನೆಚ್ಚಂಬುಗಳಂ | ಬಗೆಯದೆ ಮಧ್ಯದೊಳೆ ಕಡಿದುದಾ ಪಾರ್ಥ
ಶರಂ || ಬಗೆದಾ ಕಲ್ಪಾಭ್ರಂಗಳ | ಬಗೆಯುದೆ ಕಾಲಾಗ್ನಿಯುರಿದು ಚುರ್ಚುರ್
ವತೆರದಿಂ ||೧೭||

ಪಲಕಾಲಮಿಂತುಕಾದಲ್ | ಫಲುಗುಣಶೌರ್ಯಕ್ಕೆಮೆಚ್ಚಿ ಗಂಧರ್ವರೆರೆ
ಯಂ || ಕೆಳೆತನದೊಳವನಕೂಡಿಯೆ || ನಲವಿಂ ಧರ್ಮಜನಬಳಿಗೆ ತಾಂ ನಡೆ
ತಂದಂ ||೧೮||

ಅರಸಂ ಸತ್ಕರಿಸಲ್ಕಂ | ದರರೆರೆಯಂ ಮೆಚ್ಚಿ ನುಡಿದನೆಲೆ ಭೂಪಾಲಾ ||
ಸುರಪಾಜ್ಞೆಯಿಂದೆ ನಿನ್ನಂ | ಪರಿಕಿಸಲಾಂ ಬಂದೆನಿವನ ನೊಯ್ಯೆಂನಿ
ಸದಂ ||೧೯||

ಎಂದೆನುತಲಾ ಸುಯೋಧನ | ನಂ ಧರ್ಮಜನೆಡೆಯೊಳಿರಿಸಿ ಪಾರ್ಥನ
ಬಲುಹಂ || ಚಂದದೆ ಕೊಂಡಾಡುತ್ತಂ | ಗಂಧರ್ವಂ ನೆಡೆದನಮರಪುರಿಗತಿ
ಭರದಿಂ ||೨೦||

ಬಂಧಂಗಳಂ ಸಡಿಲ್ಚಿಯೆ | ಗಂಧರ್ವರಿಂ ಪರಿಭವಕ್ಕೆ ಪಕ್ಕಾದೈ ನೀಂ ||
ಮುಂದುವರಿಯದಿರು ಸಾಹಸ | ಕೆಂದುಪದೇಶಿಸುತೆ ಧರ್ಮಜಂ ಬೀ
ಳ್ಕೊಟ್ಟಂ ||೨೧||

ಸ್ಯಂದನವನಡರ್ದು ಸೇನೆಯು | ಸಂದಣಿಯಿಂ ಬರುತೆ ನದಿಯ ಪೂರದೊ
ಳಿಳಿಯು || ತ್ತಿಂದಂ ಕುರುಪತಿ ಕಾಳ್ಯದ | ಚಂದಿರನಂದದೊಳೆ ಕಾಂತಿಯುಡ
ಗಿರಲವರೊಳ್ ||೨೨||

ನುಡಿದಂ ಕುರುಪತಿಬಾಂಧವ | ರೊಡನೆಲ್ಲರು ವಿನಾಗಳೆನ್ನ ನುಡಿಗಳ
ಕೇಳಿಂ || ಬಿಡುವೆಂ ಪ್ರಾಣಂಗಳನಾಂ | ಮಡಿವುದೆಲೇಸಲ್ತೆ ಪರಿಭವಂಬಡೆ
ವುದರಿಂ ||೨೩||

ಬೇಡವೆನುತ್ತಂ ಮೊದಲೊಳ | ಗಾಡಿದ ಭೀಷ್ಮಾದ್ಯರುಕ್ತಿಯಂ ಕೇಳ ದೆನಾಂ ‖ ಕೇಡಿಗೆಸಂದೆನವಂದಿರ | ನೋಡೆಂ ತನ್ನನುಜಗಿಳೆಯುಪಟ್ಟಂ ಗಟ್ಟಂ ‖೨೪‖

ಅದನಾಲಿಸಿ ದುಶ್ಶಾಸಂ | ಬೆದರುತೆ ದುಃಖದೊಳಗಾಳ್ದು ಕಣ್ಣೀರಿಂದಂ ‖ ಪದವಂ ತೋಯಿಸುತಣ್ಣನ | ಹೃದಯಂ ಕರಗುವವೊಲೆಂದನತಿದೀನ ತೆಯಿಂ ‖೨೫‖

ಅಳಲನುಳಿಯದಾರ್ಯಮುನ್ನಿನ | ವೊಲೆ ಪಾಲಿಪುದಖಿಳಧಾತ್ರಿಯಂ ರಾ ವಣನಾ ‖ ಬಲವುಳಿದು ಕಾರ್ತವೀರ್ಯನ | ನಿಳಯದೆ ಸೆರೆಯಿರ್ದು ವಿಳಿಯ ನಾಳನೆ ? ಬಳಿಕಂ ‖೨೬‖

ಉಳಿಯುಳಲನಾತ್ಮವಧೆಯಿಂ | ಕಲುಷಂ ಸಂಭವಿಪುದೆನುತೆ ತಿಳಿಯೆಯು ದಯೆಯಿಂ ‖ ಎಳೆಯರನೆಮ್ಮಂ ಮೋಣಿ | ಕೆಳೆಯರ ತಾಯ್ತಂದೆವಿರನು ಸಲಹುವುದುಚಿತಂ ‖೨೭‖

ಸಂತೋಷಕಾಲದೊಳನೀಂ | ಚಿಂತೆಗೆ ಮನವೀಯಲಹುದೆ ನಿನ್ನಯು ದಾಸರ್ ‖ ಕುಂತೀಸುತರಾಳ್ದಗೆ ಹಿತ | ಮಂ ತೋರ್ದುದು ಸಹಜವೆಂದನಾ ರವಿತನಯಂ ‖೨೮‖

ನಗುವರ್ಕೇಳಲ್ನಿನ್ನಯು | ಪಗೆವರಿದಂ ನಿನ್ನನುಳಿದು ಪೋದಪೆವೆಂ ತೋ ? ‖ ಗಗನದೆ ಸೂರ್ಯನನುಳಿದೇ | ನೊಗೆವುದೆ ಬೆಳಗೇಕೆ ಚಿಂತೆ ಸಾಲಿಪುದೆಂದಂ ‖೨೯‖

ಬರಿದೇ ಚಿಂತಿಪೆ ವತ್ಸನೆ | ಸಿರಿಬಿಟ್ಟಪಳಳಲಿನಿಂದೆ ಮರುಗುವನರನಂ‖ ತೊರೆಯೈ ಶೋಕವನೆನುತಲೆ | ನರಪತಿಯೊಳ್ ಶಕುನಿ ನುಡಿದನುರೆಮು ಳಿಸಿಂದಂ ‖೩೦‖

ಎಲೆಮರುಳೆ ತನ್ನಬಲದಿಂ | ಗೆಲಿದಿಳೆಯಂ ಪಾಂಡವರ್ಗೆ ಕುಡುಮತ್ಸ ರಮೋ ‖ ನುಳಿಯುವರೀಗಳ್ಪೊರೆದ | ರ್ಗುಲುವೆ ಕೃತಜ್ಞನೆನೆ ಲೋಕದೊ ಳ್ಪೋಗೆಂದಂ ‖೩೧‖

*

ಇವರವರನುಡಿಯ ಕೇಳುತ | ಲವನೀಶಂಚಿಂತೆಯುಳಿದುಮೌನವ್ರತ ಮಂ ॥ ತವೆತಾಳ್ದು ವಲ್ಕಮುಟ್ಟು | ತವಸಿಯುವ್ರೊಲ್ಕುಳಿತನಲ್ಲಿ ನಿಯಮದಿ ನಾಗಳ್ ॥೨೦॥

ತೊರೆದಾ ರಾಜರಚಿಹ್ನವ | ವರಮುನಿಯಂತಿರಲು ದರ್ಭಶಯ್ಯೆಯೊಳ ರಸಂ ॥ ಸಿರಿನೇಹದಿಂದ ಮವನಂ | ತೊರೆಯದೆ ತಾನಿರ್ದಳೊಡನೆ ಬಂಧುತೆ ಯಿಂದಂ ॥೨೨॥

ಬಲಿಸದ್ಮದೊಳಿರುತಿರ್ಪ | ರ್ಖಳ ಪತಿಗಳ್ತಮ್ಮಬಂಧುವೆನುತಂ ಮನ ದೊಳ್ ॥ ತಿಳಿದೊಯ್ದರಿವನ ತಮ್ಮಯ | ನಿಳಯಕೆ ಸಂಶಪ್ತ ಕಾಖ್ಯರತಿಭರ ದಿಂದಂ ॥೨೪॥

ಕುರುಪತಿಯೆ ಶೋಕವಂಬಿಡು | ತೊರೆಯೈಭೀತಿಯನು ಮುಂದೆಭಾರತ ರಣದೊಳ್ ॥ ನೆರೆಗೆಲ್ದು ಪಾಂಡವರಜಯ | ಸಿರಿಯಂ ಕೈಕೊಳಿಪೆವೆಂದು ಪೇಳ್ದರ್ದನುಜರ್ ॥೨೫॥

ದನುಜರ ಮನ್ನಣೆವಡೆದಾ | ಜನಪತಿಮುನ್ನಿರ್ದ ದರ್ಭಶಯ್ಯೆಗೆಬಂ ದ ॥ ರ್ಜುನನಂ ಕೊಲ್ವೆನೆನುತ್ತಂ | ಮನದೊಳ್ನಿಶ್ಚಯಿಸಿ ತನ್ನಪುರಿಗೇ ಳ್ತಂದಂ ॥೨೬॥

ಅಳಿಯೆ ಮಿಗಂಗಳ್ಕಾಡೊಳ | ಗುಳಿದುವು ರಕ್ಷಿಪುದೆನುತ್ತೆ ಬೇಡಲ್ಕರು ಣಾ ॥ ನಿಳಯಂ ದ್ವೈತಾಟವಿಯಿಂ | ದಲೆಕಾಮ್ಯಕವನಕೆ ಬಂದನಾಧರ್ಮ ಸುತಂ ॥೨೭॥

ತೃಣಬಿಂದುವಿನಾ ಶ್ರಮದೊಳ್ | ಜನಪತಿಗಳ್ಪಲವು ಕಾಲಮಿರಲೊಂ ದುದಿನಂ ॥ ವನದೊಳ್ಬೇಂಟೆಯ ನಾಡುವ | ಮನದಿಂ ಕೃಷ್ಣೆಯನೆಬಿಟ್ಟು ಪೋಗಿರಲಾಗಳ್ ॥೨೮॥

ಆಮಾರ್ಗದಲ್ಲಿ ನಡೆಯುತೆ | ಭೂಮಿಪಸೈಂಧವನು ಬಾಗಿಲೊಳ್ನಿಂದಿರ್ದಾ ॥ ಭಾಮೆಯನೀಕ್ಷಿಸಿ ಮೋಹದಿ | ಕಾಮನ ಬಾಣದೊಳೆಸಿಲ್ಕಿ ಕಳವಳ ಗೊಂಡಂ ॥೨೯॥

ಬಲವಂತದಿಂದೆ ಪಿಡಿದಾ | ಲಲನೆಯು ರಥವೇರಿಸುತ್ತೆ ನಡೆದಂ ಜವದಿಂ ||
ಖಳನಾಸೀತೆಯು ನೊಯ್ವನ್ರೊ | ಲಳಲುತೆ ನಿಷ್ಠುರವನಾಡುತಿರ್ದೊಡವನಾ
ಗಳ್ ||೪೦||

ಕುಂತೀಸುತರಾ ಬನದಿಂ | ಪಿಂತಿರುಗಿಯೆ ಬಂದು ಕಂಡರಾಶ್ರಮದೆಡೆ
ಯೊಳ್ || ಚಿಂತಿಪ ಧಾತ್ರಿಯುನಾ ವೃ | ತ್ತಾಂತವಕೇಳುತ್ತೆ ಮುಳಿದು ನಡೆದ
ರ್ಭರದಿಂ ||೪೧||

ಬಲವೆಂಬಡವಿಯುಪ್ರೊಕ್ಕಾ | ಖಳನಂ ಕೊಲಲೆಳಸಿ ಸಿಹ್ಮನಾದಂಗೆ
ಯ್ಯಲ್ || ಮುಳಿಸಿಂ ಪಾಂಡವರಾಗಳ್ | ಕೊಳುಗುಳವಾದತ್ತು ಭೀಷಣದಿ
ನಾಯೆಡೆಯೊಳ್ ||೪೨||

ಧೃತಿಯಂ ಮೇಣಾಪಾಂಡವ | ಸತಿಯಂ ಬಿಸುಟಂ ಜಯದ್ರಥಂ ಕಾಳಗ
ದೊಳ್ || ಹತಬಂಧುವರ್ಗನಾಗಿಯೆ | ಕ್ಷಿತಿಯೊಳ್ಧಿಮ್ಮಿಕ್ಕಿ ಪಾರಲವನನು
ವಾದಂ ||೪೩||

ಪಗೆಯು ಭಯಮುಳಿದು ಸಂತಸ | ಮೊಗೆಯಲ್ಪಾಂಚಾಲಿಬಂದು ಪತಿಗಳ
ಸೇರ್ದಳ್ || ಮುಗಿಲನುಳಿದಿರ್ಪ ಜೊನ್ನದ | ಬಗೆಯಿಂ ನಿರ್ಜರರಜಯು
ನಿನಾದದಿನಾಗಳ್ ||೪೪||

ಕಳುಹಿದನವಳಂ ಪಾರ್ಥಿವ | ತಿಳಕನೊಡಂ ಭೀಮಸೇನನಾಶ್ರಮದೆಡೆ
ಗಾ || ಫಲುಗುಣನೊಡನೆಯ್ತಂದಾ | ಖಳನಂ ಬೆನ್ನಟ್ಟನಿಲಿಸಿದಂ ಸಾಹ
ಸದಿಂ ||೪೫||

ಎಲೆಜಾಲ್ಮ ! ಯೆತ್ತಪ್ರೋದಪೆ ? | ನಿಲುನಿಲ್ಲೆಂದೆಂಬ ಭೀಮನುಕ್ತಿಯು
ಕೇಳ್ದಾ || ಗಳ ನಡುನಡುಗುತೆನಿಂದಂ | ಖಳನಶ್ವಂ ಸೂತನೊಡನೆಪಾರಲ್ತವ
ರೆಯಿಂ ||೪೬||

ನರನಾಗಳೆಚ್ಚ ಬಾಣದಿ | ನುರುಳೆ ರಥಂಮಡಿಯೆ ಸೂತನುಂ ತುರಗ
ಗಳುಂ || ಪರಿದೋಡುವ ಸೈಂಧವನಂ | ಭರದಿಂಬಕವೈರಿಪಿಡಿದು ಕೇಶವ
ನೀಳ್ದಂ ||೪೭||

ಇಳೆಯೊಳಗುರುಳ್ದ ಕಾಲಿಂ | ತುಳಿಯುತ್ತಂ ಕೊಲ್ಲಲೆಳಸಿ ಛಲ್ಲವನೆತ್ತಲ್ || ಫಲುಗುಣ ನಗ್ರಜನಾಜ್ಞೆಯು | ತಿಳುಹಿಯೆತಾಂ ತಡೆದನಾಜಯುದ್ರಥವಧೆಯಂ ||೪೮||

ನಡುಗುತವಿರ್ಪ ದುರುಳನ | ಮುಡಿಯುಂ ಜೋಳಿಸಿಯೆಛಲ್ಲಮಂ ಕೈವಿಡುತಂ || ದೃಢವಾಗಿಬಿಗಿದು ಧರ್ಮಜ | ನೆಡೆಗವನಂತಂದು ಕೆಡಹಿದ ಸಂಭ್ರಮದಿಂ ||೪೯||

ಅರಸಂ ನೋಡುತಲಿವನಂ | ಪರಿಹಾಸಂಗೆಯ್ಯೆ ಕೃಷ್ಣೆನಗುತಿರಲಾಗಳ್ || ನೆರೆದೀನನ ಸೌವೀರಕ | ರೆರೆಯನ ಬಂಧನವಬಿರ್ಕೆದಂ ಕಲಿಭೀಮಂ ||೫೦||

ಮನ್ನಿಸಿದೆ ವಧ್ಯನಾದೊಡ | ಮೆನ್ನನುಜೆಯ ಗಂಡನೆಂದು ನಿನ್ನಂ ದಯೆಯಿಂ || ಇನ್ನೀ ಸಾಸಂಗಳನುಳಿ | ಯೆನ್ನುತೆ ಬೋಧಿಸಿಯೆ ಕಳುಹಿದಂ ಧರ್ಮಸುತಂ ||೫೧||

ಎರಗುತೆದೈನ್ಯದಿ ನಲ್ಲಿಂ | ತೆರಳ್ದಾ ಭಾಗೀರಥೀತಟದ ವನದೊಳ್ ಶಂ || ಕರನಂ ತಪದಿಂಮೆಚ್ಚಿಸಿ | ನರನಂ ಜಯಿಪಂತೆ ವರವಕರುಣಿಪುದೆಂದಂ ||೫೨||

ನರನೊರ್ವನ ನುಳಿದಾನಾ | ಲ್ವರುಮಂ ಸಂಗರದಿ ಗೆಲ್ವನೀನೆನಲಾತಂ || ಹರುಷಿಸುತಾಗಳೆ ತನ್ನಯ | ಪುರದತ್ತಲ್ನಡೆದನಾ ಜಯದ್ರಥನಲ್ಲಿಂ ||೫೩||

ಕರುಣಾನಿಧಿಯಾ ಕರ್ಣಂ | ಧರೆಯೊಳ್ಕಡುಚಾಗಿಯೆಂದು ನೆಗಳ್ದಿರಲತ್ತಲ್ || ವರವಿಪ್ರ ವೇಷವಾನುತೆ | ತರಣಿಯೆ ನಡೆತಂದನಾನಿಶೀಥದೊಳಾಗಳ್ ||೫೪||

ಮನೆಯಂ ತೇಜದೆಬೆಳಗುವ | ಘನಮಹಿಮನ ಕಾಣುತಾಗಳಾಸೂತಸುತಂ || ವಿನಯದಿ ನೇಳ್ದಿರಗುತ್ತಂ | ದಿನಮಣಿಯೊಳ್ಬನ್ನವಿಸಿದ ನತಿದೀನತೆಯಿಂ ||೫೫||

ಅಮರರೊಳಾವನೊ ನೀನೀ|ಸಮಯದೆ ಭೂಸುರನ ವೇಷಮಂ ತಾಳುತ್ತಂ||
ವಿಮಳಾತ್ಮ ಬಂದಕಜ್ಜವ | ಕ್ರಮದಿಂದಾಣವಿಸು ದೇವ ತಪ್ಪದೆನಡೆವೆಂ||೫೭||
ಎನೆಕೇಳೆಲೆ ಕರ್ಣನೆನಾಂ | ದಿನನಾಥಂ ತನಗೆ ಕುಂತಿಯಿಂ ಜನಿಯಿಸಿದಾ ||
ತನಯಂ ನೀನದರಿಂದಂ | ನಿನಗೊಳ್ಳಿತನೊರೆಯಬಂದೆನೀಗಳ್ಭರದಿಂ ||೫೮||
ಪುರುಹೂತಂ ಕಪಟದೆ ಭೂ|ಸುರವೇಷಂ ದಾಳ್ದು ಬಂದಪಂ ನಿನ್ನೆಡೆಯೊಳ್||
ವರಕವಚಕುಂಡಲಂಗಳ|ಕರುಣಿಸೆನುತ್ತರ್ಥಿಸಿದಪನೊಳ್ನುಡಿಯಿಂದಂ ||೫೯||
ಇವುಗಳನಿಂದ್ರಂಗೀಯದೆ | ಸುವಿಶೇಷದಿ ಧನವನಿತ್ತು ಕಳಿಪೈ ನೀನಾ ||
ಕವಚಾದಿಗಳಿತ್ತೊಡೆ ಶಾ | ತ್ರವರಿಂ ಮಡಿದಪ್ಪೆ ತಪ್ಪದಾಲಿಸು ತನಯಾ ||೬೦||
ಎಂದುದನಾಲಿಸಿ ರವಿಸುತ | ನೆಂದಂ ನೀನಿಂತು ನುಡಿಯಲಪ್ಪುದೆ ದೇವಾ ||
ಬಂದರ್ಥಿಗಳಂ ಮೆಚ್ಚಿಪೆ | ನೆಂದೆಂಬೀ ವ್ರತವನುಳಿಯಲಾರೆಂ ನಿಸದಂ ||೬೧||
ಭೂಸುರರ್ಕೈತಂದರ್ಥಿಸ | ಲಾಸೆಯಿನದನೀಯದುಳಿಯೆನೆಂಬುದೆ ನಿಯಮಂ||
ವಾಸರ ಮುಖದೊಳಗಂಬುಜ | ರಾಶಿಯನೀಂ ವಿಕಸಿಪಂತೆ ಕೇಳೆಲೆದೇವಾ ||
ವ್ಯಸನಿಸದಿತ್ತಪನರ್ಥಿಸ|ಲಸುಗಳನಾದೊಡಮೆನುತ್ತೆ ನುಡಿವುದುಲೋಕಂ||
ಜಸಮುಳಿಯದೆ?ಧರೆಯೊಳ್ಸುಮ|ನಸರೆರೆಯಂಬೇಡಿವಿಮುಖನಾದೊಡೆದೇವಾ||
ದಿವಸಾಧಿನಾಥ ಕೇಳೈ|ದಿವಿಜಾಧಿಪನರ್ಥಿಯಾಗಿ ಬೇಡಲ್ತನ್ನಂ || ಭುವನದೆ
ಕುಂಡಲಗಳನೇಂ | ಕವಚದಿ ನೇನಸುವನಾದೊಡಂ ಕೊಟ್ಟಪೆನೈ ||೬೪||
ಕುಂತೀಸುತರ್ಗೆ ಹಿತವಂ | ಚಿಂತಿಸಿ ಸುರಲೋಕದಿಂದೆ ನಡೆತಂದಿಂದ್ರಂ ||
ಪಂತದಿ ನರ್ಥಿಸಲಿತ್ತಿ| ಸಂತಸದಿಂ ಕೀರ್ತಿತನುವ ತಳೆನೆಂ ಜಗದೊಳ್||೬೫||
ಎಲೆಪಿತನೆ ನಿನ್ನಭಕ್ತನೊ | ಳೊಲಿದಿರ್ದೊಡೆ ನೇಹವಿಾಗಳರ್ಥಿಪೆನೊಂದಂ||
ಬಲಭೇದನ ನಿಷ್ಟವನಾಂ | ಸಲಿಪಂದದೆ ವರವನಿತ್ತು ಕರುಣಿಪುದೆನ್ನಂ ||೬೬||
ಇಂತುಸಿರ್ದಶ್ರುಗಳಿಂದಂ | ಸಂತತಧಾರೆಯನುಕರೆವ ಮಗನೊಳ್ನುಡಿದಂ||
ಚಿಂತಿಸದಿರೆನ್ನನುಡಿಯಂ | ಕುಂತೀಸುತ ನಡಿಸುನಿನಗೆ ಹಿತಮುಹುದೆನುತಂ ||
ನಿನ್ನಂ ಬೇಡಲ್ಸುರಪತಿ | ಮುನ್ನಮೆ ಶಕ್ತಿಯನೆಕೊಂಡು ಕುಡುವುದುಬ
ಳಕಂ || ಸನ್ನುತನೆ ಬೇಡಿದಂದದೆ | ನಿನ್ನಯಕವಚವನುಕುಂಡಲಂಗಳನಾಗಳ್||
ಅದರಿಂ ಗೆಲ್ದಪೆನೀಂ ತ | ಪ್ಪದೆ ರಿಪುಗಳನೆಂದು ನುಡಿದು ತಾಂ ಮರೆಯಾದಂ||
ಪದುಮಿನಿವಲ್ಲಭನಾಗಳ್ | ಮುದದಿಂದಂ ಕರ್ಣನದನೆ ಚಿಂತಿಸುತಿರ್ದಂ ||೬೯||

ರವಿಯಿಂದು ತನ್ನಸ್ವಪ್ನದೆ । ವಿವರಿಸಿದಂದದೊಳೆ ನಡೆವುದೆಂದಾ ಕರ್ಣಂ ॥
ಅವನಾಗಮನವಪಾರ್ದಂ। ಭುವಿಯೊಳ್ಕೀರ್ತಿಯನೆ ಬಯಸುಪರತ್ರೇ ಕೃತಿಗಳ್ ॥
ಬಲಿಯುಂ ಬೇಡಲ್ಬಂದಿಹ । ನಳಿನಾಕ್ಷನತೆರದೊಳಿಂದ್ರನಾ ದ್ವಿಜವೇಷಂ ॥
ದಳೆದೈತಂದಂ ಕರ್ಣನ । ಬಳಿಗಿಳೆಯೊಳ್ತ್ಯಾಗಿಗಳನು ಬೇಡದರೊಳರೇ ॥೨೧॥
ಸುರಪತಿಯಾಗಳ್ಕರ್ಣನ । ಹರಸಿಯೆ ಬೇಡಿದನು ಕವಚಕುಂಡಲಗಳನಾ ॥
ತುರದಿಂದೀವುದಿವಂ ಸೀಂ । ಮರಣಂಗೊಳದಂತೆ ಸುಲಿದು ತನಗೆಂದೆನುತಂ ॥
ನಗುತಲೆ ನುಡಿದಂ ನಿನ್ನಯ । ಬಗೆಯರಿವೆಂ ಸುರಪ ಬೇಡಿದವುಗಳನೀವೆಂ ॥
ಪಗೆಯಂ ತರಿವಾ ಶಕ್ತಿಯ । ನಗರಿಪು ಕರುಣಿಪುದು ತನಗೆನುತ್ತಂ ಕರ್ಣಂ ॥
ಪುರುಹೂತನಿತ್ತನಾಗಳ್ । ವರಶಕ್ತಿಯನಿದರಬಲದೆ ಶತ್ರುವಗೆಲ್ವೈ ॥ ತ
ರುವಾಯುಮೆನ್ನ ಬಳಿಗೈ । ತರುವುದು ಕೊಳ್ಳೆಂದು ರವಿತನೂಜಂಗೊಲವಿಂ ॥
ಅಂಗಪತಿ ಯದನುಕಂಡು। ಪ್ರೊಂಗುವ ಹರುಷವಸುತಳೆಯುತಸಿಯಿಂದಂ ತ॥
ನ್ನಂಗವಭೇದಿಸಿ ಸುಲಿದಂ । ಮಂಗಳಕವಚಮುಮನಂತೆ ಕುಂಡಲಗಳುಮಂ ॥
ಕವಚವಸುಲಿವಂದಾತಗೆ । ಸವನಿಸದಂಗದೊಳೆ ವಿಕೃತಿಮೊಗದೊಳ್ದೈನ್ಯಂ ॥
ಸವೆಯದು ಕೈಗಳಬಲಮುಂ । ಭುವನದೆ ಸಂತರ್ಗೆ ಚಿಂತೆದೋರದವೆಂದುಂ ॥
ಸುರಪತಿತನ್ನಯಮನದೊಳ್ । ಬೆರಗಾಗಿಯೆನೋಡುತಿರ್ದನಾರವಿತನಯಂ ॥
ಅರುಣಾಂಶುವಂತೆ ಮೆರೆದಂ । ಸುರಿವಾ ಕೆನ್ನೀರೆತುಂಬಿ ತುಳುಕಲ್ಮೆಯ್ಯೊಳ್ ॥
ಹರಿಹಯನಂಗಾಧಿಪನಿಂ । ವರಕುಂಡಲ ಕವಚಗಳನು ಕೊಂಡೊಲವಿಂದಂ ॥
ವರುಷಿಸಿಕುಸುಮದವೃಷ್ಟಿಯ । ಸುರಲೋಕಕೆ ಪೋದನವನಕೊಂಡಾಡುತ್ತಂ ॥
ದಿನಪತಿತನಯಂ ತನ್ನಯ । ತನುವಂ ಸುಲಿದಿತ್ತವಾರ್ತೆಯಂ ಕೇಳುತ್ತಂ ॥ ಮ
ನದೊಳ್ಮರುಗಲ್ದುರ್ಯೋ । ಧನನಾಗಳ್ಪಾಂಡುಸುತರುಹರುಷವನಾಂತರ್ ॥೨೯॥
ಜನಪ ಯುಧಿಷ್ಟಿರನೊಲವಿಂ । ದನುಜರೊಡಂ ವಸಿಸುತಿರೆ ಮಹೀಸುರನೊ
ರ್ವಂ ॥ ಬನಕೈತಂದಾತುರದಿಂ । ತನಗಭಯವನೀವುದೆಂದು ಗೋಳಿಡುತಿರ್ದಂ ॥
ಅರಸನೆ ತರುವಿನೊಳಿರಿಸಿ । ರ್ದರಣಿಯನೊಯ್ಯುತ್ತದೊಂದು ಹರಿಣಂ ರಯ
ದಿಂ ॥ ದಿರದೋಡಿಪೋದುದಾ ಭಾ । ಸ್ಕರನಂದದಿ ಬನವಟಾಂಟೆ ತಂದೀವುದವಂ ॥
ಎಡರೈತಂದುದೆನುತ್ತಂ । ಕಡುದುಃಖದೆ ನೊಂದುತರ್ಪ ನರುಣಿಯನೆಂದಾ ॥
ಪೊಡವಿಪನನುಜರಕೂಡಿಯೆ । ನಡೆದಂ ಬಿಲ್ವಿಡಿದು ಕಾನನಾಂತದೊಳಾಗಳ್ ॥

ಚಣಮೀಧರೆಯೊಳ್ನಭದೊಳ್|ಚಣಮಿರುತಂಕಡೆಗೆಕಣ್ಗೆ ಮರೆಯಾದತ್ತು ||
ಬಣಗುಮಿಗಂ ಸಿಲುಕದಿರಲ್|ಜನಪತಿಗಳ್ಕಂದಿನೊಂದು ಕರಕರೆಗೊಂಡರ್ ||
ಪಲಕಾಲಮರಸಿಕಾಡೊಳ್|ತೊಳಲಿದೊಡಂ ಮಿಗವ ಕಾಣದುರೆ ಬಿಸುಪಿಸಿ
ಲಿಂ|ಬಳಲುತೆ ಬಂದೊಂದಾಲದ|ನೆೞಲಂ ವನಗಜಗಳಂತೆ ಸಾರ್ದರ್ಪಾರ್ಥರ್||
ತರುವೇರಿ ನೋಡಿನಕುಲಂ|ಸರಸಿಯು ಸನಿಹದೊಳಗಿರ್ಪುದಂತಿಳಿದಂ ಸುಂ||
ದರಮೇಘದೊಳಡಗಿರ್ಪಾ|ವರತಾರೆಯತೆರದೆ ಬಳಸಿರಲ್ವಿದ್ರುಮಗಳ್||೮೫||
ಕೆಳಗಿಳಿದುಹರುಷದಿಂದಂ|ಕೊಳದೊಳ್ಜಲವಿರ್ಪುದೆಂದುಪೇಳ್ದಗ್ರಜನೊಳ್||
ನಳಿನೀಪತ್ರದೆತರ್ಪೆಂ|ಜಲವನೆನುತ್ತೊಡನೆ ನಡೆದುಬಂದಂ ನಕುಲಂ ||೮೬||
ಸರಸಿಗೆನಡೆತಂದಿಳಿದಾ|ತುರದಿಂ ನೀರ್ಗುಡಿಯಲೆಳಸೆ ಗಗನದೊಳಾಗಳ್ ||
ಮರೆಗೊಂಡೆನ್ನಯ ವಾಕ್ಯಕೆ|ಸರಿಯುತ್ತರವಿತ್ತು ಕುಡಿವುದೆಂದಂ ಯಕ್ಷಂ ||
ನುಡಿಯಂಗಣಿಸದೆಜಲವಂ|ಕುಡಿದೊರಗಿದನಲ್ಲಿ ಮೂರ್ಛೆಯಿಂದಂನಕುಲಂ||
ಕಡಿಯಲ್ಬೇರನೆಧರೆಯೊಳ್|ಕೆಡೆದಗದಂದದೊಳೆನೀಳ್ದ ತೋಳಿಂ ಚಣದೊಳ್||
ಬಳಿಕಾತಂ ಬಾರದಿರಲ್ | ತಳುವಿದನೆಂದರಸನವನ ತಮ್ಮನನಟ್ಟಲ್ ||
ಕೊಳಕೈತಂದಾತಂನೀ|ರ್ಗೊಳುತಂತಮ್ಮನವೊಲೊರಗಿದಂ ಭೂತಳದೊಳ್||
ಅವರಿರ್ವರು ಮೈತರದಿರ | ಲವನೀಸತಿ ಮನನೆನೊಂದು ಪಾರ್ಥನಕಳುಹ ||
ಲ್ಕವನುಂ ಮಡಿದಂ ಬಳಿಕಂ | ಪವನಜನಂ ಕಳುಹಲಾತನುಂ ಮೈಮ್ಮರೆದಂ ||
ಅನುಜರ್ತಡೆದಿರ್ಪರಿದೇ | ನೆನುತಂ ಕಡುನೊಂದು ಧರ್ಮತನಯಂ ನಡೆದಂ ||
ಮನದಳಲಿಂ ಕಾಲದಿರ | ಲ್ಸನಿಹದ ಸರಸಿಗೆ ತೃಷಾರ್ತನಾಗಿಯೆ ಭರದಿಂ||೯೧||
ಮಡಿದನುಜರನೀಕ್ಷಿಸುತಂ|ಪೊಡವಿಪನುರೆನೊಂದುನೀರಡಸಿಗೋಳಿಡುತಂ||
ಕೆಡೆದನವಂದಿರ ಮೇಗಡೆ| ಯೊಡನೆಳ್ಚೆತ್ತತ್ತನಶ್ರುವಿಂ ತೋಯುತ್ತಂ ||೯೨||
ಸಮರದೆವಿಕೃತಿಯನೆಯ್ದದೆ|ಭ್ರಮಿಪರ್ಶಾತ್ರವರನಿವರೆವಿಧಿವಶದಿಂದಂ||ಯಮ
ಲೋಕವಸಾರ್ದರೆನಲ್|ಭ್ರಮೆಯೋಮೋಹವೊವಿಚಿತ್ರಮೆನುತಂ ನೆನೆದಂ||
ಕುಡಿವುತೆ ನೀರನಿವಂದಿ| ರ್ಮಡಿದಿರ್ಪರ್ಜಲದೆ ಗರಳಮೇಂ ಬೆರೆದಿಹುದೋ ||
ಜಡತೆಯು ತೋರದು ಬಣ್ಣಂ|ಕೆಡದಿರುವೆ ವಿಚಿತ್ರಮೆನುತೆ ಚಿಂತಿಸುತಿರ್ದಂ||
ಉಳಿದಿವರಂ ನಾನೊರ್ವನೆ | ಅಳಲಿಂ ಪೋಗಲ್ಕೆ ದೂರದೊಳ್ನೋಡುತ್ತಂ ||
ನಳಿನಾಕ್ಷಿ ಕೃಷ್ಣೆಯಸುಗಳ|ನುಳಿದೊಡನೆಯೆ ಮಡಿವಳೆಂದುಚಿಂತಿಸುತಿರ್ದಂ||

ಚಿಂತೆಯಿನಳಿದೊಡೆ ನಾನುಂ | ಸಂತರ್ಸಿಂದಿಪ್ಪರಾತ್ಯಹತ್ಯವೆದೂಷ್ಯಂ ||
ಎಂತುಳಿವೆನಳಲಿ ನೆನುತಂ | ಕುಂತೀಸುತನಳಲ್ದುಬಿಳ್ದನಾಭೂತಳದೊಳ್ ||
ಪುನರಪಿಶಾಂತಿಯುನೊಂದುತೆ | ಜನಪತಿಯೆಳ್ಚತ್ತು ಸಾವಿಗೇಂಕಾರಣಮೆಂ ||
ದೆನುತಿಳಿಯೆಕೊಳದೊಳಾಯ|ಕ್ಷನರೂಪಿಂನಭದೆಕೇಳಬಂದುವುನುಡಿಗಳ್ ||
ಅರಸನೆ ಕೇಳಿದು ತನ್ನಯ | ಸರಸಿಯೂ ತನ್ನುಕ್ತಿಗೇಳದೀಂಟಿಯೆನೀರಂ ||
ಮರೆದೊರಗಿದರನುಜರ್ಗಳಿಂ | ಪರಿಗಣಿಸದೆಕುಡಿಯುಬೇಡವೆಂದಂಯಕ್ಷಂ ||

ಅದನಾಲಿಸಿ ಕಯ್ಕೊಳ್ಮಗೆ | ಮುದಕವ ಸುರಿದಲ್ಲಿ ಪ್ರಶ್ನೆಗಳ ಕೇಳುತ್ತಂ ||
ಚದುರಿಂ ದುತ್ತರವೀಯುಲ್ | ಹೃದಯದೆ ಸಂತುಷ್ಟನಾಗಿ ಯಕ್ಷಂ ನುಡಿದಂ ||
ಮೆಚ್ಚಿ ದೆನರಸನೆ ನಿನ್ನಯ | ಸಚ್ಚರಿತಕೆ ನಿನ್ನ ಸೋದರರೊಳಾವನನೀ ||
ನಿಚ್ಚೆ ಪೆಯೊಕುಡುವೆನೆಂದೆನೆ | ಮುಚ್ಚರಿಸದೆ ಯುಳುಹುನಕುಲನಂ ನೀನೆಂದಂ ||
ಜನಪನೆಶತ್ರುಕ್ಷಯುವಂ | ಗಣಿಸದೆ ನೀನೇತಕಿವನ ನರ್ಥಿಸಿದೈಮುಂ ||
ದಣಕಜ್ಜಮಿಹುದು ಭೀಮಾ | ರ್ಜುನರಂ ಬೇಡದೆ ಸಪತ್ನಿಸುತರೇ ಗೆಯ್ವರ್ ||
ಕುಂತಿಯ ವೊಲ್ಮಾದ್ರಿಯೆಳಂ | ಸಂತತಮುಂ ಭಕ್ತಿಯಿರ್ಪುದೆನಗದರಿಂದಂ ||
ಚಿಂತಿಸದೆ ಕರುಣಿಸೆಂದೆನೆ | ಸಂತೋಷಿಸಿ ಯಕ್ಷನೆಂದನಾಧರ್ಮಜನೊಳ್ ||
ಪರಿಕಿಸೆಸಿನ್ನಂ ಸೂಕ | ಳ್ದರಣಿಯು ಮೃಗರೂಪಿನಿಂದೆ ನಡೆತಂದಿರ್ಪೆಂ ||
ವರಧರ್ಮನೆನಾಂ ತಮ್ಮಂ | ದಿರನೆಲ್ಲರ ಬದುರ್ಕಿಸಿದೆನೆಂದಂ ದೇವಂ ||೧೦೩||
ಮಲಗಿವರೆಚ್ಚರುವಂದದೆ | ನಿಲಲನುಜರ್ಕಂಡು ವಿಸ್ಮಯಂಗೊಳೆ ಧರ್ಮಂ ||
ಎಲೆಭೂಪನಿಮ್ಮಬಯಕೆಯ | ವೊಲೆರೂಪಂದಾಳ್ವರೆಂದು ಕೊಟ್ಟಂ ವರವಂ ||
ಅರಣಿಯುನಿತ್ತು ಧರ್ಮಂ | ಮರೆಯಾಗಲ್ಸಂಜೆಯಲ್ಲಿ ಜನಪತಿತಮ್ಮಂ ||
ದಿರಗೂಡಿ ತಪೋವನಕ್ಕೈ | ತರಲಾಗಳ್ ಹರುಷವಾಂತುದಾಮುನಿವಿಸರಂ ||

ಒಂಬತ್ತನೆಯ ಸಂಧಿ ಮುಗಿದುದು

ಹತ್ತನೆಯ ಸಂಧಿ.

‖ ಕಂದಪದ್ಯ ‖

ಅತ್ರಿಮುನಿಪತಿಯ ನೇಹದ | ಪುತ್ರಂ ಕಳೆಗೆರೆಯನೋಷಧೀಶನೆನು
ತ್ತಂ ‖ ಧಾತ್ರಿ ಪೊಗಳಲ್ಕೆ ಶಾಙ್ಗ್ರಯನೇತ್ರಂ ತಾನಾದನವನೆ ನಕ್ಷ
ತ್ರೇಶಂ ‖೧‖

ಮರೆಗೊಂಡೊಂದಬ್ದವನಾ | ಧರಣಿಪ ಮತ್ಸ್ಯೇಶಪುರದೆ ಕಳೆದಪೆ
ನೆನುತಂ ‖ ನಿರವಿಸಿಯಲ್ಲರ ಕೃಷ್ಣನ | ಪುರಿಗಟ್ಟಿಯೆ ಬನವನುಳಿದುಬಂ
ದರ್ ಪಾರ್ಥರ್ ‖೨‖

ಬಂದು ಪಿತೃವನದಬಳಿಯೊಳ | ಗೊಂದಗದಗ್ರದಲಿ ಶಸ್ತ್ರಚಯ
ಮಂ ಬಿಗಿದಾ ‖ ನಂದದೆ ರೂಪಾಂತರಗಳ | ನೊಂದುತೆ ನಗರಿಯನೆ ಪೊ
ಕ್ಕರಾ ಪಾಂಡುಸುತರ್ ‖೩‖

ಯತಿಯುನಡಬಳನಷಂಡನ | ಚತುರದರಾವುತನ ಗೌಳಿಗನ ರೂಪವ
ಮೇಣ್ ‖ ಸತಿ ಸೈರಂಧ್ರಿಯುವೇಷವ | ಮತಿಬಳದಿಂತಿಳಿಯುದಾದುದಾ ಪೌ
ರಜನಂ ‖೪‖

ಬಂದು ವಿರಾಟನ ಸಭೆಯೊಳ್ | ನಿಂದಂ ಕಾಷಾಯವಸನನಾ ಯತಿ
ರಾಜಂ ‖ ಸಂದ ಕಮಂಡಲುಯುತನಾ | ಚಂದಿರನಂ ಸಾರ್ದ ಮಿಂಚಿನಾ
ಮೋಡದವೋಲ್ ‖೫‖

ತೇಜೋರಾಶಿಯ ಕಂಡಾ | ರಾಜಂ ನೃಪರೊಡನೆ ಕೂಡಿ ಪೀಠದಿ
ನೆಳ್ದಂ ‖ ಆ ಜೀವನಕಾಣುತ್ತೆ ಬಿ | ಡೌಜಂ ನಿರ್ಜರರಕೂಡಿ ತಾನೇಳು
ವವೋಲ್ ‖೬‖

ನಮಿಸಿದ ವಿರಾಟನೃಪತಿಯು । ಯಮಿವರನೊಲವಿಂದೆ ಪರಸಿ ಕು
ಳ್ಳಿರೆನುಡಿದಂ ॥ ಶಮಧನ ಬರವೆತ್ತಣಿನೀ । ಸಮಯದೆ ಬಂದಿರ್ಪ ಕಜ್ಜ
ಮಾವುದೊ ಬೆಸಸೈ ॥೭॥

ಎನೆ ಧರ್ಮಜನಿಂತೆಂದಂ । ಜನಪತಿ ತಾಂ ಕಂಕನೆಂಬನಾ ಪಾಂಡು
ವಿನಾ ॥ ತನಯರ ಚರಿತವನೋಡುತೆ । ಸನುಮತದಿಂ ಧರ್ಮಜಾತನೆನೆ
ನೆಗಳ್ದಿರ್ಪೆಂ ॥೮॥

ಜೂದಿನೊಳವನಿಯನಾದಾ । ಯಾದರಿಗೊಪ್ಪಿಸಿಯೆ ಬನಕೆ ತೆ
ರಳ್ದಾ ಬಳಿಕಂ ॥ ಮಾಧವನನನೆನೆದು ತೀರ್ಥವ । ನಾದರದಿಂ ಸೇವಿಸುತ್ತೆ
ತಾನೈತಂದೆಂ ॥೯॥

ಇರುತಿರ್ಪೆನಿಲ್ಲಿ ವತ್ಸರ । ಪರಿಯಂತಂ ಸುಜನಸುಖವನುಭವಿಸುತೆ
ಬಳಿಕಂ ॥ ತೆರಳ್ವೆಂ ತನ್ನಯಕಜ್ಜಕೆ । ನರಪತಿ ಕಾರ್ಯಬಿನದದಿಂದೆ ಸಂ
ತಸಗೊಳಪೆಂ ॥೧೦॥

ಇಂತೆನೆಮೆಚ್ಚುತೆ ಧರಣೀ । ಕಾಂತಂ ಕಡುನೇಹದಿಂದ ಮಧ್ಯಾ
ಸನವಂ ॥ ಸಂತಸಮುಣ್ಮಲ್ ಧನದಂ । ಕಂತುಹರಂ ಗೀವತೆರದೆ ಯತಿ
ಪತಿಗಿತ್ತಂ ॥೧೧॥

ಇಳೆಯಂ ಪದಂಗಳಿಂದಂ । ತುಳಿವಂದದೆ ಮಲಿನವಸನಧರನಾ ವ
ಲಲಂ ॥ ತೊಳಗುವಸಭೆಯಂ ಪೊಕ್ಕಂ । ತಳದೊಳ್ ದರ್ವಿಯನೆಪಿಡಿದು
ಸಂಭ್ರಮದಿಂದಂ ॥೧೨॥

ಅಲ್ಲಲ್ಲಿ ಮಂಡಿಸಿದ ಜನ । ರೆಲ್ಲರ್ ಕೌತುಕದಿನಂಜಿ ನೋಡಲ್
ಬಂದಾ ॥ ಮಲ್ಲಂ ರಾಜನಸನಿಹಕೆ । ಚೆಲ್ಲುತ್ತಂ ನಗೆಯನಬ್ಬರಣೆಯಿಂ
ನುಡಿದಂ ॥೧೩॥

ಪೆಸರಿಂ ವಲಲಂ ಪಾರ್ಥನ । ರಸಭರಿತಾನ್ನಂಗಳಿಂದೆ ಸವಿಗೊಳಿ
ಸಿರ್ಪೆಂ ॥ ವಸುಧೇಶನಿನ್ನಸೇವಿಸಿ । ಪೊಸರಸದಿಂ ತಣಿಸಿ ಮೆಚ್ಚುವಡೆ
ಯಲ್ಬಂದೆಂ ॥೧೪॥

ಎನಲೊಪ್ಪಿ ವಲಲನಂ ಮ | ನ್ನಣೆಯಿಂ ಪಾಕಾಲಯಕ್ಕಧೀಶನೆ ನುತ್ತಂ ‖ ಸನುಮತಿಸಿಪೇಳ್ದು ತನ್ನರ | ಮನೆ ಬಾಣಸಿತನವನಿತ್ತು ಕಳುಹಿದನಾಗಳ್ ‖೧೫‖

ಮುಳಿದೂರ್ವಶಿ ಶಪಿಸಲ್ಕಳಿ | ಯುಳಿದು ನಪುಂಸಕನ ವೇಷವಾಂತಾ ವಿಜಯಂ ‖ ತೊಳಗುವಗಾಯುದಕುರುಪಂ | ಬಳೆಯಿಂ ಮುಚ್ಚಿರ್ದಭುಜವತೋರುತೆಬಂದಂ ‖೧೬‖

ಇವನಾವಂ ತನ್ನಾಕೃತಿ | ತವೆಮುಚ್ಚಿಯೆ ಮರುಳುಗೊಳಿಪನಾಪೆಣ್ಬರಿಜಂ ‖ ಶಿವಶಿವಎನುತಿರೆ ಜನಪಂ | ಸವಿನಯದಿಂ ಮಣಿದು ನುಡಿದನವನೊಳ್ಪಾರ್ಥಂ ‖೧೭‖

ದುರುಪದಿಯುಸಖಿ ಬೃಹನ್ನಳೆ | ನೆರೆನಚ್ಚಣಿಬಂದೆನಿಲ್ಲಿಗತ್ತಣಿನಧಿಪಾ ‖ ಆರಮನೆಯಕನ್ನೆಯರಿಗುರು | ತರದಾ ಗಾಂಧರ್ವವಿದ್ಯೆಯಂ ಕಲಿಸಿದಪೆಂ ‖೧೮‖

ಎಂದರಿಪೆ ರಾಜನೊಲವಿಂ | ಸಂದಗುಣೋತ್ತರೆಯು ನುತ್ತರೆಯುನವನೆಡೆಯೊಳ್ ‖ ನಿಂದುಕಲಿಯುಲ್ಕೆ ನೇಮಿಸಿ | ಕುಂದದ ಸಿರಿಯಿತ್ತು ಮನ್ನಿಸಿದನೊಲವಿಂದಂ ‖೧೯‖

ಕಶೆಯುಂ ಕರದಿಂ ಪಿಡಿದಾ | ವಸುಮತಿಪತಿಯೆಡೆಗೆ ನಕುಲನೈತಂದೆಂದಂ ‖ ಪೆಸರಿಂ ದಾಮಗ್ರಂಥಿಯೆ | ಪೊಸವಗೆಯಿಂ ಕುದುರೆಗಳನು ತಿರ್ದುವೆನೆನುತಂ ‖೨೦‖

ನರಪತಿಯಾಗಳ್ ತನ್ನಯ | ತುರಗಂಗಳನಿವನವಶದೆ ಕೊಟ್ಟಂ ಮುದದಿಂ ‖ ಭರದಿಂದಂ ಸಹದೇವಂ | ತುರುವಳನಂದದೊಳೆ ಬಂದು ಕಾಣಿಸಿಕೊಂಡಂ ‖೨೧‖

ನೀನಾರೆನೆ ತಾಂ ಕುಂತೀ | ಸೂನುವ ತುರುಗಾಹಿ ತಂತಿಪಾಲನೆನಿಪ್ಪೆಂ ‖ ಮಾನಿತನೆ ಪರಿಕಿಸೆನಲಾ | ಭೂನಾಥಂ ಮೆಚ್ಚಿ ಗೋಪತಿಯನಾಗಿಸಿದಂ ‖೨೨‖

ಸುದತಿ ದುರಾತ್ಮನ ಕೈಯಿಂ| ಕೆದರಿದ ಬಿಡುಮುಡಿಯನಾಂತು ಬಂದಳ್ ರಾಜ್ಞೀ ‖ ಸದನಕೆ ಸುದೇಷ್ಣೆಯೆಡೆಗತಿ | ಪದಪಿಂ ಗಂಗೆಯನು ಸಾರ್ವ ಕಾಳಿಂದಿಯವೊಲ್ ‖೨೩‖

ಅವಳಂ ಕಂಡಚ್ಚರಿಗೊಂ | ಡವಳಂ ನೋಡಿಗೊಡೆ ಭೂಪಸುಳದಪನೆನ್ನಂ ‖ ಸುವಿಲಾಸೆಯಾವಳೋ ಕಾ | ಣೆವೆನುತ್ತಿರೆ ತರುಣಿ ಬಂದು ಮಣಿದಿಂತೆಂದಳ್ ‖೨೪‖

ಬಡಿತಿ ಚಿತ್ತವಿಸು ಮಾಲಿನಿ | ಕಡುಜಾಣ್ಮೆಯ ಪತ್ರಕಾದಿ ಕಲೆಗಳನರಿವೆಂ ‖ ನುಡಿಗೇಳಯ್ವರುಗಂದರ | ರೊಡೆಯರ‍್ತನಗವರೆ ಕಾವರಿತರರಿಯದವೋಲ್ ‖೨೫‖

ಐವೊಗದುರಗಿಯ ವೋಲೀ | ವೈಮಾನಿಕ ಸತಿಯನೆನ್ನ ನಾರುಂ ಮುಟ್ಟರ್ ‖ ಧೀಮಂತೆ ನಿನ್ನ ಸೇವಿಸಿ | ನೇಮದಿ ಪಲದಿವಸಮಿರ್ದು ಪೋಪೆನದನೆತ್ತಲ್ ‖೨೬‖

ಎನೆ ಹರುಷಿಸಿ ಸೈರಂಧ್ರಿಯ | ನನುನಯದಿಂ ಪೋಷಿಸುತ್ತ ತನ್ನರಮನೆಯೊಳ್ ‖ ಧನಮಂ ಬಹುಳಮನೀವಳ್ | ನೆನೆದಾ ಗಂದರರ ಬಲ್ಮೆಯಂ ಚಲ್ವಿಕೆಯಂ ‖೨೭‖

ಪಗಡೆಯ ಕೇಳಿಯೊಳರಸನ | ನಗಿಸುತೆ ಮನ್ನಣೆಯ ಪಡೆದನಾ ಧರ್ಮಸುತಂ ‖ ಜಗಮರಿಯದಂತೆ ಮಿಕ್ಕರು | ಮೊಗುಮಿಗೆಯಿಂ ಸೇವೆಗೆಯ್ದು ಪಣಮಂ ಪಡೆದರ್ ‖೨೮‖

ಇಂತಿರಲೊಂದುದಿನಂ ಭೂ | ಕಾಂತಸ್ಯಾಲಂ ಸುದೇಷ್ಣೆನಿಳಯದೆ ಕಂಡಾ ‖ ಕಾಂತೆಯ ಕೃಷ್ಣೆಯಕೀಚಕ | ನಂತಕದಂಡಕ್ಕೆ ಕಂತುಬಾಣಕೆ ಸಂದಂ ‖೨೯‖

ಮದನೋರಗ ಪೀಡಿತನಾ | ಹೃದಯವ್ಯಥೆಯಿಂದೆ ಭಾಗ್ಯಹತಕಂ ಮರುಳಂ ‖ ಬೆದರುತ್ತದಿರ್ದ ನುಡಿಯಿಂ | ಸುದತಿಯನುತಿಸುತ್ತಮಿರ್ದನಾ ದುಷ್ಟಾತ್ಮಂ ‖೩೦‖

ಆಶಿಲೆಗೃಹದೇವಿಯೊ ನೀಂ | ನಾರೀಮಣಿ ಇಂತ ಪೂರ್ವರೂಪವನೆಂದುಂ ‖ ಧಾರುಣಿಯೊಳ್ಕಾಣೆಂ ಸಿಂ | ಗಾರದ ಸಿರಿಕಂಡ ಬಡವನಂದದೊಳಾದೆಂ ||೩೧||

ಚಂಚಲೆ ಭೂಷಣತತಿಯುಂ | ಮಿಂಚುತಿರ್ಪಂಗಗಳ್ಗೆ ತೊಡಿಸಿದೆ ನಿದಿರೊಳ್ ‖ ಸಂಚರಿಪೆ ಸರಿಯೆ ನಿನಗೆಲೆ | ಪಂಚಮದಿಂಚರದಿನುಡಿಸಿ ಪರಿಕಿಸುತನ್ನಂ ||೩೨||

ನವಯುವ್ವನ ಭೂಷಿತನಂ | ಸುವಿಲಾಸಿಯು ವರನ ಭಜಿಸಿ ಸೊಗಮಿಹುದುಚಿತಂ ‖ ತವೆಮೆರೆಯುವು ಬಳ್ಳಿಗಳುಂ | ಬುವಿಯೊಳ್ತರುಗಳನು ಸೇರದೆಲ್ಲಿಯುಂ ಮಬಲೆ ||೩೩||

ಎನ್ನಂಘನೋದಯುನನೀಂ | ಮನ್ನಿಸಿ ಮೆಲ್ಲುಲಿಯಿನೊಲಿಸಿ ಸೌಧದೆಸುಖಿಸಿಂ ‖ ಪನ್ನಗವೇಣಿಪೆಣ್ಣಾವಿ | ಉನ್ನತಕೇಳೀಮಹೀಂದ್ರನೊಳ್ಸುಖಿಪತೆರಂ ||೩೪||

ಅದನಾಲಿ ಮುಳಿಸಿಂದಂ | ಸುದತೀಮಣಿ ನುಡಿದಳೆಲವೊ ಗಂದರರೈವರ್ ‖ ಚದುರಿಂ ಕಾದಿಹರೆನ್ನಂ | ಮದದಿಂ ಬಯಸದಿರ ತನ್ನನಳಿವೈದುರುಳಾ ||೩೫||

ಕೀಚಕನಾಲಿಸಿ ನೋಯುತೇ | ಯಾಚಕನಾ ಲುಬ್ಧವಾಕ್ಯದಿಂ ಮರುಗುವವೊಲ್ ‖ ನಾಚುತ್ತಗ್ರಜೆಯೆಡೆಗಾ | ನೀಚಂ ನಡೆತಂದುಸಿರ್ದ್ದ ಗಭಿಮತನಂ ತಾಂ ||೩೬||

ಕೇಕಯತನೂಜೆ ತಮ್ಮನ | ಕಾಕೂಕ್ತಿಯ ಕೇಳ್ದು ತಡೆದೊಡಂ ತಾಳೆನೆನಲ್ ‖ ಶೋಕದೆ ದೌತ್ಯವನೆಸಗಿದ | ಳಾ ಕೀಚಕನೆಡೆಗೆ ಸಖಿಯನಟ್ಟುವಬಗೆಯಿಂ ||೩೭||

ಬಡತಿ ತಮ್ಮಂಗೆ ಮಧುವಂ | ಕುಡುನಡೆಯೆನಲಾರೆನೆಂದು ಸಖಿಪೇಳಲ್ತಾಂ ‖ ಬಿಡುನುಡಯಿಂ ಗದರಿಸಲಾ | ಮಡದಿನುಹದ್ದುಃಖದಿಂದೆ ನಡೆತರುತಿರ್ದಳ್ ||೩೮||

ತಳಿರಂ ಪೋಲ್ವಾ ತಳದೊಳ್ | ತಳೆದಾ ಪೊಂಬಟ್ಟಲಂ ಬರುತಿರಲಾಬಾಂ ‖ ಬೊಳೆಯುಕಮಲಿನಿ ಸರೋಜನ | ತಳೆದಂದದೆ ಮೆರೆದಳಾ ದ್ರುಪದಸಂಜಾತೆ ||೩೯||

ಪುತ್ತಂ ಪುಸರಮುಗಿಯುವೋಲ್ | ಮತ್ತಂ ಕಂದರವ ಪುಸನ ಪ್ರೇ
ಯಂದದಿನಾ ‖ ಮತ್ತೇಭಗಮನೆ ಬಂದಳ್ | ತತ್ತರದಿಂ ಸೂತಜನ್ಮನಾಲಯ
ಕಾಗಳ್ ‖೪೦‖

ಸೂತಜನಾಗಳ್ಪೆಳ್ಕೆಯಿ | ನಾತುರದಿಂದೆಳ್ದು ಬಂದು ನಯದಿಂ ನು
ಡಿದಂ ‖ ಭೂತಳದೆ ತಾನೆಧನ್ಯಂ | ಪ್ರೀತಿಯಿನೆನ್ನೆಡೆಗೆ ನಡೆದುಬರೆನೀಂ
ರಮಣೀ ‖೪೧‖

ಪಾಸನಡರೆರಡುಕೈಗಳು | ಮಾರೆಪುವು ಬಳಲ್ದ ನಿನ್ನ ಮೆಲ್ಲಡಿಯು
ವೋಲ್ ‖ ಓಸರಿಸಬೇಡ ಕೃಪೆಯುವಿ | ಲಾಸದೆ ಮನ್ನಿಪುದು ಕಿಂಕರನನೆನೆ
ಮುಳಿನಿಂ ‖೪೨‖

ಮಧುವಿತ್ತು ಬರ್ಪುದೆನುತಂ | ಸುದತೀಮಣಿ ಕಳುಪೆ ಬಂದೆಸಿದೆಕೊ
ಳ್ಳೋಪೆಂ ‖ ಮದಮುಖನೆ ಇಂತುನುಡಿಯದಿ | ರಿದರಿಂದಂ ನಿನಗೆ ಹಾನಿ
ತೋರ್ದಪುದೆಂದಳ್ ‖೪೩‖

ಮದಿರಾಕ್ಷಿ ನಿನ್ನ ಬರವಾ | ಮದಿರಾರ್ಥಮೆನತ್ತೆ ಕೇಳ್ದ ಯಿಗಾಗ
ಳ್ನನ್ನೀ ‖ ಯಧರಾಮೃತಮಂ ಕುಡಿಯಿಸ | ದಧಟಂ ನೀನೆತ್ತಲ್ಯೆದಿದಪೆಯೆನು
ತಾರ್ದಂ ‖೪೪‖

ಅಂಜುತ್ತಲ್ಲಿಂಮತ್ಸ್ಯನ | ರಂಜಿಸ ಸಭೆಗೋಡಿಬರುತಿರಲ್ ದುಷ್ಟಾ
ತ್ಮಂ ‖ ಕಂಜಾಕ್ಷಿಯ ನೊದೆದಂ ಮದ | ಕುಂಜರಮುದುಮುಳಿದು ಲತೆಯು
ಮೆಟ್ಟುವತೆರದಿಂ ‖೪೫‖

ಪುಡಿಯೊಳ್ ಪೊರಳ್ದು ಕೆದರಿದ | ಬಿಡುಮುಡಿಯಿಂ ಸುರಿವನೆತ್ತರಿಂ
ಕಾಣಿಸಿದಳ್ ‖ ಮಡದಿ ಕೀಚಕವಂಶದ | ಕಡೆಗಾಲದ ಮೃತ್ಯುವಂತೆ ಸಭಿಕ
ರ್ಗೆಲ್ಲಂ ‖೪೬‖

ಭೀಮಂ ಕಾಣುತೆ ತನ್ನಯ | ಭಾಮಿನಿಯ ಶಿರೋಜಕರ್ಷಣವನುರೆ
ಮುಳಿದಾ ‖ ಕಾಮುಕವಂಶಾಟವಿಯಂ | ಹೋಮಂಗೊಳುವಗ್ನಿಯಂತೆ ತಾ
ನುರಿದೆದ್ದಂ ‖೪೭‖

ಮುಳಿಸಿಂದೀಕ್ಷಿಸಿ ತಡಿಯೊಳ್ | ಬೆಳೆದಪ್ರೊಂದಗವನಗ್ರಜನುಮಂ
ನೋಡಲ್ ‖ ವಲಲನ ಮನ್ನಿಸಿ ನುಡಿದಂ | ಚಲವಿಲ್ಲದೆ ಗುಟ್ಟುವಾಕಿನಿಂ
ಧರ್ಮಸುತಂ. ‖೪೮‖

ಮರುಳೆ ಸಮಯಮನುಕಾಣದೆ | ತರುವನಿದಂ ಕೀಳ್ವೆ ಎಂತು ನೆಳಲಿಂ ಜನರಂ || ಪೊರೆವುದು ಮಾಣಿದಪಡವಿಯು | ಮರಗಳಿಂದಪ್ಪುವು ಬಾಣಸದ ಮನೆಗೀಗಳ್ ||೪೯||

ಜನಕೆ ವಿರೋಧಮನೆಸಗದೆ | ಸನುಮತದಿಂ ನಿನ್ನ ಕಜ್ಜಮಂ ನಡೆಸಣುಗಾ || ಮನದಚಿಂತೆಯನುಬಿಡು ನೆಳ | ಲಿನ ತರುವಂ ಮುರಿಯಬೇಡಮೆನುತಂ ತಡೆದಂ ||೫೦||

ಚಿಂತಿಸುತೆ ತರುಣಿಯರಾಗಳ್ | ಮುಂತೋರದೆಮನೆಗೆ ಪೋಗಿ ಕಳೆವುಕೆಪಗಲಂ || ಅಂತರಿಸದೆತಾಂ ಪಾಕನಿ | ಶಾಂತಕ್ಕೈತಂದು ನುಡಿದಳನಿಯನಬಳಿಯೊಳ್ ||೫೧||

ಪೆರರಿಂ ಸೇವಿಸಿ ವೇಷಾಂ | ತರಮಂ ತಳೆದಿರ್ಪ ನಿಮಗೆ ವಿಕ್ರಮದಿಂದೇಂ || ನೆರೆನಾಣೇತಕೆ ನಲ್ವೆಂ | ಡಿರಿನೇಂ ಜಸದಿಂದಮೆನೊಸುಡುಸುಡುಸೊಗಮಾ ||೫೨||

ದುರುಳಂ ಮುಡಿವಿಡಿದೆಳೆವುತೆ | ಪರಿಭವವೆಸಗಿದುದರಿಂದೆ ಪಿರಿದಪಕಷ್ಟಂ || ದೊರೆಕೊಂಡುದಿರಿಗುಸೂತಜ | ನುರವಣೆಯಿಂ ದೊದೆದು ವೇಣಿಯಂ ಸೆಳೆದುದರಿಂ ||೫೩||

ಅರಸಂ ನಿರೂಪ್ಯನರ್ಜುನ | ನುರೆಷಂಡಂ ವೀರ್ಯಹೀನನಾಯುಮಳತರ್ಗಂ || ಪರಿಕಿಸೆ ಮುಗ್ಧರ್ ನೀನೆಂ | ತಿರುವೆಯೊ ನಾನರಿಯೆನೆಂದು ನಿಟ್ಟುಸಿರಿಟ್ಟಳ್ ||೫೪||

ಅಡವಿಯೊಳೊದವಿದ ಕಷ್ಟದ | ಗಡಣವನೀಂ ತಡೆದು ತಡೆದು ಸಲಹಿದೈರ್ಯದೊಳ್ನೀಂ || ಕಡಿದಿಡುವೆ ಪಗೆಯನೆನುತಂ | ಮುಡಿಯಂ ಧರಿಸಿರ್ಪೆನೆನ್ನೆವರಮಿದನರಿಯಾ ||೫೫||

ಪರಿಭವಮಂ ಪಡೆದಿಂಗಳ್ | ತೊರೆದಸುವೆರೆದಿರ್ಪ ತನುವ ತಳೆವುದರಿಂದೇಂ || ದುರುಳ ನಿವನೆಂತು ಮಡಿವನೊ | ಹರಹರನಾಂ ಬರ್ದುಕಲರಿಯನೆನುತಂ ಸುಯ್ದಳ್ ||೫೬||

ಭಾಮಿನಿಯುಳಲಂ ಕಂಡಾ | ಭೀಮಂ ಮರುಗುತ್ತೆ ಮುಳಿದು ತಾನಿಂತೆಂದಂ || ಕಾಮಿನಿ ತೆಗೆ ಜಟನಿಂದಂ | ತಾಮಸನೇಂ ಪಿರಿಯನೆಂದು ತಿಳಿದೆಯಮರುಳೇ ||೫೭||

ಅಗ್ರಜನಾಗಳ್ ತಡೆದಂ | ನಿಗ್ರಹಿಸಲ್ಬಗೆಯೆ ರಮಣಿ ನೋಡೀಗ
ಳ್ನೀ | ನಾಗ್ರಹಿಸಬೇಡ ನಾಳೆಯೆ | ಶೀಘ್ರದೆ ಕೀಚಕನ ಕೊಂದು ಬಿಸುಡು
ವೆನಾರ್ಪಿಂ ॥೫೮॥

ಇರುಳೊಳೆ ನಾಟ್ಯದಮನೆಗೈ | ತರಪೇಳ್ಸಂಕೇತದಿಂದೆ ಸೂತನ ಬಳಿ
ಕಾಂ ॥ ಬರುವೆಂ ನಿಶೆಯೊಳ್ರಿಪುವಂ | ತರಿದಿಡುವೆಂ ನೋಯಬೇಡೆನುತೆ
ಕಳುಹಿಸಿದಂ ॥೫೯॥

ಮರುದಿನದುದಯದೆ ಮಾಲಿನಿ | ಭರದಿಂ ಕೀಚಕನಬಳಿಗೆ ನಲಿದಂ
ದದೆ ಬಂ ॥ ದಿರುಳೊಳೆ ನಾಟಕಶಾಲೆಗೆ | ಬರೆ ತಾನುಂ ಬಂದು ಸೊಗವತ್ತೋ
ರ್ದಪೆನೆಂದಳ್ ॥೬೦॥

ಅದನಾಲಿಸಿತಾ ಸಿಂದ್ರನ | ಪದವಿಯ ನಾಂತಂತೆ ಹರಿಸಗೊಂಡಂ ಸೂ
ತಂ ॥ ಸುದತಿಯುರಕೂಟದಿಂ ಮಿಗಿ | ಲೆರ್ದೆಗೊಳ್ವಾ ಪ್ರಣಯವಾತ್ಯಮದು
ಕಾಮುಕರೊಳ್ ॥೬೧॥

ಮಂದಿರಕೆ ಪೋಗಿ ಪರಿಪರಿ | ಯಿಂದಂ ಸಿಂಗರಿಸಿ ತಿರ್ದಿಕೊಳುತಿರ್ಪಾ
ಗಳ್ ॥ ಸಂದುವು ಪಗಲುಂ ನೆರೆತಳೆ | ಗುಂದಿದ ಸೂತಾತ್ಮಜಾತ ನಾಯು
ಷಮುಂ ತಾಂ ॥೬೨॥

ಬಕವೈರಿಯಾಗ ಹರಿಣಾರಿ | ಬಕಿಯೊಡನೈತಂದು ಪಾರುತಿರ್ದಂ ಖಳ
ಕೀ ॥ ಚಕನಾಗಮನವ ರಜನೀ | ಮುಖದೊಳ್ ಸಂಕೇತದಿಂದೆ ನಾಟ್ಯದ
ಮನೆಯೊಳ್ ॥೬೩॥

ನಿಜರೂಪವ ಮರೆಗೊಂಡಾ | ವಿಜಯನ ಪಾಸಿನೊಳೆ ಮಲಗಿರಲ್ಪವ
ನಸುತಂ ॥ ಪ್ರಜವದೆ ಬಗ್ಗಂ ಮಿಗಮುಂ | ಕುಜದಾ ಪೊದರಲ್ಲಿ ಪಾರ್ವವೋ
ಲ್ಕಾಣಿಸಿದಂ ॥೬೪॥

ಅನಿತರೊಳೈತಂದಂ ಸೂ | ತನತನಯುಂ ನಲವಿನಿಂದೆ ನೃತ್ತಾಗಾರ ॥
ಕ್ಕನಿಯಳ್ಪಟ್ಟಿಹಳೆನುತಾ | ಘನಭುಜನಂ ಸಾರ್ದು ಮುಟ್ಟಿದಂ ಕತ್ತಲೆ
ಯೊಳ್ ॥೬೫॥

ಅವನಕೆಲದಲ್ಲಿ ಕುಳ್ಳಿ | ರ್ದವಿರಳಸಂತೋಷದಿಂದೆ ನುಡಿದಂ ದುರು
ಳಂ ॥ ಯುವತಿಕೃತಾರ್ಥಂ ತಾನೀ | ಭುವಿಯೊಳ್ಕಂಕರನನೆನ್ನ ನೀಂ ಪಾರು
ತಿರಲ್ ॥೬೬॥